ಸಂಪುಟ: 05 ಸಂಚಿಕೆ: 271 ಪುಟಗಳು: 08 ಸೋಮವಾರ 15 ಡಿಸೆಂಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5


**ಮುಂಜಾನೆ ಮಾತು**
ಈದಿನ ಸೋತವರು ನಾಳೆ ಗೆಲ್ತಾರೆ. ಕಾಲ ನಮಗಾಗಿ ಕಾಯಲ್ಲ, ಕಾಲದ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಧೃಡ ಮನಸ್ಸಿನಿಂದ ಮುನ್ನಡೆದರೆ ಗೆಲುವಿನ ಬಾಗಿಲು ನಮಗಾಗಿ ತೆರೆದಿರುತ್ತದೆ.


# ಉದಯ ವಾಹಿನಿ
UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ


## ಮಹಿಳೆಗೆ ಚಿಕಿತ್ಸೆ ನೀಡಿ ಹೃದಯ ವೈಶಾಲ್ಯತೆ ಮೆರೆದ ಅಂಜಲಿ: ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಗೋವಾದಿಂದ ನವದೆಹಲಿಗೆ ತೆರಳುತ್ತಿದ್ದ ಇಂಡಿಗೊ ವಿಮಾನದಲ್ಲಿ ಪ್ರಾಣಾಪಾಯದಲ್ಲಿದ್ದ ಅಮೆರಿಕದ ಮಹಿಳೆಗೆ ಖಾನಾಪುರದ ಮಾಜಿ ಶಾಸಕಿ, ಎಐಸಿಸಿ ಗೋವಾ ಪ್ರಭಾರಿಯೂ ಆಗಿರುವ ಡಾ.ಅಂಜಲಿ ನಿಂಬಾಳ್ಕರ್ ತುರ್ತು ಚಿಕಿತ್ಸೆ ನೀಡಿ ಪ್ರಾಣ ಉಳಿಸಿದ್ದಾರೆ.ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಮೆರಿಕದ ಮಹಿಳೆಯೊಬ್ಬರಿಗೆ ತುರ್ತು ವೈದ್ಯಕೀಯ ನೆರವಿನ ಅಗತ್ಯತೆಯನ್ನು ಅರಿತು. ತಕ್ಷಣವೇ ಸಿಪಿಆರ್ ನೀಡಿ ಅಂಜಲಿ ಅವರು ಮಹಿಳೆಯ ಪ್ರಾಣ ಉಳಿಸಿದ ವಿಚಾರ ಕೇಳಿ ಹೆಮ್ಮೆಯೆನಿಸಿತು ಎಂದಿದ್ದಾರೆ.

## 2 ತಿಂಗಳಲ್ಲಿ ಮ್ಯಾಜಿಕ್ ಮಾಡ್ತೀರಾ?: ಮೆಟ್ರೊ ಕೃಷ್ಣ ಭೈರೇಗೌಡ ತರಾಟೆ

• ಉದಯವಾಹಿನಿ, ಬೆಂಗಳೂರು

ಎರಡು ವರ್ಷಗಳಲ್ಲಿ ಪಿಲ್ಲರ್ ನಿರ್ಮಿಸಲು ಸಾಧ್ಯವಾಗಿಲ್ಲ. ಎರಡು ತಿಂಗಳಲ್ಲಿ ಮ್ಯಾಜಿಕ್ ಮಾಡ್ತೀರಾ? ನಮ್ಮ ಮೆಟ್ರೊ ನಾಗವಾರ ನಿಲ್ದಾಣದಿಂದ ಬಾಗಲೂರು ಕ್ರಾಸ್ ನಿಲ್ದಾಣದವರೆಗಿನ ಎರಡನೇ ಹಂತದ ಕಾಮಗಾರಿಯನ್ನು ಭಾನುವಾರ ಪರಿಶೀಲಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮೆಟ್ರೊ ಅಧಿಕಾರಿಗಳನ್ನು, ಎನ್‌ಸಿಸಿ ಗುತ್ತಿಗೆ ಕಂಪನಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪರಿ ಇದು. ನನಗೆ ಪಿಲ್ಲರ್ ಕಾಣಿಸುತ್ತಿಲ್ಲ. ನಾನೇನು ಕುರುಡ ಅಂದುಕೊಂಡ್ರಾ? ಒಂದು ಪಿಲ್ಲರ್ ನಿರ್ಮಿಸಲು ಎರಡು ವರ್ಷ ಬೇಕಾ ಎಂದು ಪ್ರಶ್ನಿಸಿದರು. ಮೆಟ್ರೊ ಕಾಮಗಾರಿಯ ತ್ಯಾಜ್ಯವನ್ನು ಪಾದಚಾರಿ ರಸ್ತೆ ಮೇಲೆ ಹಾಕಿರುವುದನ್ನು ಗಮನಿಸಿದ ಸಚಿವರು ಸಿಡಿಮಿಡಿಗೊಂಡರು. ಕೂಡಲೇ ತ್ಯಾಜ್ಯವನ್ನು ತೆರವುಗೊಳಿಸುವಂತೆ ಸೂಚಿಸಿದರು.

ಸಿಬ್ಬಂದಿಯನ್ನು ಕರೆಸಿ ಸಚಿವರ ಎದುರೇ ಅಧಿಕಾರಿಗಳು ತ್ಯಾಜ್ಯವನ್ನು ತೆರವುಗೊಳಿಸಿದರು. ಎಲ್ಲೋ ನಿರ್ಮಾಣ ಕಾರ್ಯ ನಡೆಯುತ್ತಿದ್ದರೆ ಇನ್ನೆಲ್ಲೋ ಯಾಕೆ ರಸ್ತೆ ಬಂದ್ ಮಾಡ್ತೀರಿ. ಜನರಿಗೆ ತೊಂದರೆ ಕೊಡ್ತೀರಿ? ಪಾದಚಾರಿ ರಸ್ತೆಯೂ ಇಲ್ಲ, ವಾಹನ ಸಂಚಾರಕ್ಕೂ ತೊಡಕು. ಯಾಕೆ ಹೀಗೆ ಮಾಡ್ತೀರಿ? ಕೂಡಲೇ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಿ' ಎಂದು ಸೂಚಿಸಿದರು.ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡಿರುವುದನ್ನು ತೆರವು ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ತಿಳಿಸಿದರು.

## ತುರ್ತು ಸ್ಪಂದನ ವಾಹನಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ


• ಉದಯವಾಹಿನಿ, ಬೆಂಗಳೂರು

ಅಪಘಾತ ಹಾಗೂ ಅವಘಡ ಉಂಟಾದ ಸಂದರ್ಭದಲ್ಲಿ ತುರ್ತಾಗಿ ಸ್ಪಂದಿಸಲು ಅಪಘಾತ ತುರ್ತು ಸ್ಪಂದನ ವಾಹನಗಳನ್ನು ಕೆಎಸ್‌ಆರ್‌ಟಿಸಿ ಪರಿಚಯಿಸಿದ್ದು, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.ನಿಗಮದ ಬಸ್‌ಗಳು ಮಾರ್ಗ ಮಧ್ಯೆ ಅಪಘಾತಕ್ಕೀಡಾದರೆ, ಬ್ರೇಕ್ ಡೌನ್ ಇನ್ನಿತರ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡರೆ ತುರ್ತು ವಾಹನಗಳು ತಕ್ಷಣ ಸ್ಥಳಕ್ಕೆ ತೆರಳಿ ದುರಸ್ತಿ ಮಾಡಲಿವೆ. ಸಂಚಾರಿ ಕಾರ್ಯಾಗಾರ ಮಾದರಿಯಲ್ಲಿ ಇದನ್ನು ರೂಪಿಸಲಾಗಿದೆ ಎಂದು ಸಚಿವರು ತಿಳಿಸಿದರು. ಸದ್ಯ ಬೆಂಗಳೂರು ಮತ್ತು ಮೈಸೂರಿನಲ್ಲಿ ತಲಾ ಒಂದು ವಾಹನಗಳನ್ನು ನಿಯೋಜಿಸಲಾಗುವುದು. ಬೆಂಗಳೂರು ಸುತ್ತಮುತ್ತ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ ಪ್ರದೇಶಗಳಲ್ಲಿ ಈ ವಾಹನದ ಸೌಲಭ್ಯ ಇರಲಿದೆ ಎಂದು ಹೇಳಿದರು. ವಿವಿಧ ನಿಗಮಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಅಧಿಕಾರಿಗಳು ಉಪಸ್ಥಿತರಿದ್ದರು.

## ನ್ಯೂ ಇಯರ್ ಪಾರ್ಟಿಗೆ ಪಬ್ ಬುಕ್ ಮಾಡೋ ಮುನ್ನ ಎಚ್ಚರ ಏಕೆ ಗೊತ್ತೇ?

• ಉದಯವಾಹಿನಿ, ಬೆಂಗಳೂರು

ನ್ಯೂ ಇಯರ್ ಬರ್ತಿದೆ ಅಂತಾ ಸೆಲೆಬ್ರೇಷನ್ ಮಾಡೋಕೆ ಹೊಟೇಲ್, ರೆಸಾರ್ಟ್, ಪಬ್ ಬುಕ್ ಮಾಡ್ತಿದ್ರೆ, ಆನ್ಲೈನ್ ಬುಕಿಂಗ್ ಮಾಡುವ ಮುನ್ನ ಎಚ್ಚರ ವಹಿಸಲೇಬೇಕಿದೆ. ನ್ಯೂ ಇಯರ್ ಬುಕಿಂಗ್ ಹೆಸರಲ್ಲಿ ವಂಚನೆ ಶುರುವಾಗಿದ್ದು, ಬುಕಿಂಗ್ ಹೆಸರಲ್ಲಿ ಸೈಬರ್ ವಂಚಕರು ಹಣ ದೋಚುತ್ತಿದ್ದಾರೆ. ಸಿಲಿಕಾನ್ ಸಿಟಿಯಲ್ಲಿ ಸೈಬರ್ ಚೋರರ ಹೊಸ ಆಟ ಶುರುವಾಗಿದೆ. ನ್ಯೂ ಇಯರ್ ಸೆಲೆಬ್ರೆಷನ್ ಅಂತಾ ನಕಲಿ ಲಿಂಕ್ ವೈರಲ್ ಆಗಿದ್ದು, ಲಿಂಕ್ ನಲ್ಲಿ ಆನ್ಲೈನ್‌ನಲ್ಲಿ ಬುಕ್ ಮಾಡ್ಕೊಳ್ಳಿ ಅಂತಾ ಆಫರ್ ಬರ್ತಿದೆ. ನೀವು ಹಣ ಹಾಕಿದ್ರೆ ಅವು ಫೇಕ್ ಈವೆಂಟ್, ಫೇಕ್ ಪಾರ್ಟಿಗಳಾಗಿರುತ್ತೆ. ಈವೆಂಟ್, ಪಾರ್ಟಿಗಳ ಪಾಸ್ ಕೊಡುವುದಾಗಿ ಬ್ಯಾಂಕ್ ಖಾತೆಗೆ ಕನ್ನ ಹಾಕಿ ಹಣ ಎಗರಿಸ್ತಿದ್ದಾರೆ. ಹಾಗೂ ವೈಯಕ್ತಿಕ ಮಾಹಿತಿಗಳನ್ನ ಅಕ್ರಮವಾಗಿ ಪಡೆದು ವಂಚನೆ ಎಸಗಲಾಗ್ತಿದೆ. ಇಂತಹ ನಕಲಿ ಜಾಲಗಳ ಬಗ್ಗೆ ಎಚ್ಚರಿಕೆಯಿಂದ ಇರಲು ಪೊಲೀಸರು ಸೂಚನೆ ನೀಡಿದ್ದು, ಕಂಡ ಕಂಡ ಲಿಂಕ್‌ಗಳಲ್ಲಿ ಬುಕಿಂಗ್ ಮಾಡದಂತೆ ಎಚ್ಚರಿಕೆ ನೀಡಿದ್ದಾರೆ. ಅಧಿಕೃತ ವೆಬ್ ಸೈಟ್, ಆನ್ಲೈನ್ ಜಾಲಗಳನ್ನ ಪರಿಶೀಲಿಸಿ ಬುಕ್ ಮಾಡಲು ಸೂಚನೆ ನೀಡಲಾಗಿದೆ. ಅಪರಿಚಿತ ಪೇಮೆಂಟ್ ಲಿಂಕ್, ಕ್ಯೂ ಆರ್ ಕೋಡ್‌ಗಳಿಗೆ ಹಣ ಕಳಿಸದಂತೆ ಎಚ್ಚರಿಕೆ ನೀಡಿದ್ದಾರೆ.




**ದೇಶಾದ್ಯಂತ ಬಿಜೆಪಿಯಿಂದ ಮತಗಳವು ನಡೆಯುತ್ತಿದೆ ಎಂಬ ಆರೋಪ ಕೇಳಿಬಂದಿದೆ. 'ವೋಟ್ ಚೋರಿ' ವಿರುದ್ಧ ಕಾಂಗ್ರೆಸ್ ಬೃಹತ್ ಕಹಳೆ ಮೊಳಗಿಸಿದೆ. ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಸಮಾವೇಶ ನಡೆದಿದ್ದು , ಕರ್ನಾಟಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ ಕಾಂಗ್ರೆಸ್ ಸಚಿವರು, ಶಾಸಕರು ಭಾಗವಹಿಸಿದ್ದಾರೆ. ಪ್ರತಿಭಟನೆ ನೆಪವಾಗಿಟ್ಟುಕೊಂಡು ದೆಹಲಿಯಲ್ಲಿ ಹೈಕಮಾಂಡ್ ಭೇಟಿಗೆ ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ ಎನ್ನಲಾಗಿದೆ.**

# ಪ್ರತಿಭಟನೆ ನೆಪ ಹೈಕಮಾಂಡ್ ಜಪ

**ಸಿದ್ದರಾಮಯ್ಯ, ಡಿಕೆಶಿ, ಸಚಿವರು, ಶಾಸಕರು ಭಾಗಿ**

## ವೋಟ್ ಚೋರಿ ವಿರುದ್ಧ ದೆಹಲಿಯಲ್ಲಿ ಕಾಂಗ್ರೆಸ್ ಬೃಹತ್ ಕಹಳೆ

• ಉದಯವಾಹಿನಿ, ನವದೆಹಲಿ

ದೇಶಾದ್ಯಂತ ಬಿಜೆಪಿಯಿಂದ ಮತಗಳವು ನಡೆಯುತ್ತಿದೆ ಎಂಬ ಆರೋಪ ಕೇಳಿಬಂದಿದೆ. ವೋಟ್ ಚೋರಿ ವಿರುದ್ಧ ಕಾಂಗ್ರೆಸ್ ಬೃಹತ್ ಕಹಳೆ ಮೊಳಗಿಸಿದೆ. ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಸಮಾವೇಶ ನಡೆದಿದ್ದು, ಕರ್ನಾಟಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿ ಕಾಂಗ್ರೆಸ್ ಸಚಿವರು, ಶಾಸಕರು ಭಾಗವಹಿಸಿದ್ದಾರೆ. ಪ್ರತಿಭಟನೆ ನೆಪವಾಗಿಟ್ಟುಕೊಂಡು ದೆಹಲಿಯಲ್ಲಿ ಹೈಕಮಾಂಡ್ ಭೇಟಿಗೆ ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ ಎನ್ನಲಾಗಿದೆ. ವೋಟ್ ಚೋರಿ ಪ್ರತಿಭಟನೆ ನೆಪದಲ್ಲಿ ರಾಷ್ಟ್ರ ರಾಜಧಾನಿಗೆ 'ಕೈ' ನಾಯಕರ ದಂಡು ಭೇಟಿ ಕೊಟ್ಟಿದೆ. ದೆಹಲಿಯಲ್ಲಿ ವರಿಷ್ಠರ ಭೇಟಿಗೆ ಸಿಎಂ ಮತ್ತು ಡಿಸಿಎಂ ಎರಡು ಬಣಗಳ ಶಾಸಕರು, ಸಚಿವರಿಂದ ಪ್ರಯತ್ನ ನಡೆದಿದೆ. ದೆಹಲಿಯಲ್ಲೇ ಡಿಸಿಎಂ ಡಿಕೆ ಶಿವಕುಮಾರ್ ಉಳಿಯಲಿದ್ದಾರೆ. ನ್ಯಾಷನಲ್ ಹೆರಾಲ್ಡ್‌ಗೆ ಸಂಬಂಧಿಸಿದಂತೆ ಸಮನ್ಸ್ ಹಿನ್ನೆಲೆ ಡಿಸಿಎಂ ಉಳಿದುಕೊಳ್ಳಲಿದ್ದಾರೆ. ಸೋಮವಾರ ದೆಹಲಿ ಪೊಲೀಸರ ಮುಂದೆ ಡಿಕೆ ಬ್ರದರ್ಸ್ ಹಾಜರಾಗಲಿದ್ದಾರೆ. ಈ ಎರಡು ದಿನಗಳ ಅವಧಿಯಲ್ಲಿ ಸೋನಿಯಗಾಂಧಿ ಭೇಟಿಗೂ ಪ್ರಯತ್ನ ಸಾಧ್ಯತೆ ಇದೆ. ವೋಟ್ ಚೋರಿ ಪ್ರತಿಭಟನೆ ಬಳಿಕ ದೆಹಲಿಯಿಂದ ಸಿಎಂ ಸಿದ್ದರಾಮಯ್ಯ ವಾಪಸ್ ಆಗಲಿದ್ದಾರೆ. ಈ ನಡುವೆ ದೆಹಲಿಯಲ್ಲೇ ಕೂತು ಡಿಕೆ ಬ್ರದರ್ಸ್ ರಣತಂತ್ರ ಹೆಣೆದಿದ್ದಾರೆ.

ದೆಹಲಿಯಲ್ಲಿ ಡಿ.ಕೆ.ಶಿಕುಮಾರ್ ಮಾತನಾಡಿ, ಪ್ರಜಾಪ್ರಭುತ್ವ ಅಡಿಯಲ್ಲಿ ಮತ ಚಲಾಯಿಸಿಸುವುದು ಪ್ರತಿಯೊಬ್ಬನ ಕರ್ತವ್ಯ. 1 ಕೋಟಿ 33 ಲಕ್ಷ ಸಹಿ ಸಂಗ್ರಹ ಆಗಿದೆ ಎಂದು ತಿಳಿಸಿದ್ದಾರೆ. ಶಾಸಕ ಪ್ರದೀಪ್ ಈಶ್ವರ್ ಮಾತನಾಡಿ, ಬಿಜೆಪಿಯವರು ಕಳ್ಳರು. ಕಳ್ಳ ಮತಗಳಿಂದ ಬೇರೆ ಬೇರೆ ರಾಜ್ಯಗಳಲ್ಲಿ ಚುಕ್ಕಾಣಿಯನ್ನ ಹಿಡಿದಿದ್ದಾರೆ. ಬಿಜೆಪಿ ಬಹಳಷ್ಟು ರಾಜ್ಯಗಳಲ್ಲಿ ವೋಟ್ ಚೋರಿಯಿಂದಲೇ ಅಧಿಕಾರಕ್ಕೆ ಬಂದಿದ್ದಾರೆ. ಇದರ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ಮಾಡುತ್ತಿದೆ.

ಈ ಮೂಲಕ ಪ್ರಧಾನಿ ಮೋದಿ, ಎಲೆಕ್ಷನ್ ಕಮಿಷನ್, ಅಮಿತ್ ಶಾಗೆ ಪ್ರಶ್ನೆ ಮಾಡುತ್ತೇವೆ. ಚುನಾವಣಾ ಆಯೋಗ, ಇಡಿ, ಐಟಿ ಇವರ ನಿರ್ದೇಶನದಲ್ಲೇ ಕಾರ್ಯನಿರ್ವಹಿಸುತ್ತವೆ. ಬೆಂಗಳೂರು ಸೆಂಟ್ರಲ್, ಆಳಂದದಲ್ಲಿ ವೋಟ್ ಚೋರಿ ಆಗಿದೆ ಅಂತ ದಾಖಲೆ ಕೊಟ್ಟಿದ್ದೇವೆ. ಮುಂದಿನ ಚುನಾವಣೆಗಳಲ್ಲಿ ಮತಗಳ್ಳತನ ಮುಂದುವರೆಯಬಾರದು ಎಂಬುದು ಇದರ ಉದ್ದೇಶ ಎಂದು ತಿಳಿಸಿದ್ದಾರೆ.

ಸಚಿವ ಬೋಸರಾಜು ಪ್ರತಿಕ್ರಿಯಿಸಿ, ವೋಟ್ ಚೋರಿಗಾಗಿ ಪ್ರತಿಭಟಗೆ ದೆಹಲಿಗೆ ಆಗಮಿಸಿದ್ದೇವೆ. ಮಧ್ಯಾಹ್ನ ಎಐಸಿಸಿಗೆ ಹೋಗಿ ಅಲ್ಲಿಂದ ರಾಮಲೀಲಾ ಮೈದಾನಕ್ಕೆ ಹೋಗ್ತಿವಿ. ಹೈಕಮಾಂಡ್ ನಾಯಕರ ಜೊತೆಗೆ ಯಾವುದೇ ಚರ್ಚೆ ಇಲ್ಲ. ಐವತ್ತು ವರ್ಷದಿಂದ ಪಕ್ಷದಲ್ಲಿದ್ದೇನೆ ಎಂದಿದ್ದಾರೆ.

ಸಲೀಂ ಅಹಮದ್ ಮಾತನಾಡಿ, ಇದು ವೋಟ್ ಚೋರಿಯಲ್ಲ, ವೋಟ್ ಡಕಾಯಿತಿ. ಇದು ಮತಗಳ ಲೂಟಿ. ಅದು ಎಲೆಕ್ಷನ್ ಕಮಿಷನ್ ಅಲ್ಲ, ಬಿಜೆಪಿಯ ಕಮಿಷನ್. ಬಿಜೆಪಿ, ಎಲೆಕ್ಷನ್ ಕಮಿಷನ್ ಸೇರಿ ಮೂರು ರಾಜ್ಯಗಳಲ್ಲಿ ಗೆಲ್ಲಿಸಿದ್ದಾರೆ. ಬಿಹಾರ ಜನರ ಗೆಲುವಲ್ಲ, ಎಲೆಕ್ಷನ್ ಕಮಿಷನ್ ಗೆಲುವು. ಕೇಂದ್ರ ಸರ್ಕಾರದ ಗೆಲುವು. ಸಿಎಂ ನಿತೀಶ್ ಕುಮಾರ್‌ಗೆ ವಯಸ್ಸಾಗಿದೆ.

ಹುಷಾರಿಲ್ಲ ಆದ್ರೂ ಗೆದ್ದಿದ್ದಾರೆ. ಅವರ ಗೆಲುವನ್ನ ನಂಬೋಕೆ ಆಗೋದಿಲ್ಲ. ಎಲೆಕ್ಷನ್ ಕಮಿಷನ್‌ನ ತಮ್ಮ ಕಪಿಮುಷ್ಟಿಯಲ್ಲಿ ಹಿಡಿದುಕೊಂಡು ಬಿಜೆಪಿ ಕೆಲಸ ಮಾಡಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಸಚಿವ ಆರ್‌ಬಿ ತಿಮ್ಮಾಪುರ ಪ್ರತಿಕ್ರಿಯಿಸಿ, ಇಂದಿನ ದಿನಗಳಲ್ಲಿ ಮತಗಳ್ಳತನ ನಡೆಯುತ್ತಿದೆ. ಅಡ್ಡದಾರಿಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದಾರೆ. ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಬುಡಮೇಲು ಮಾಡಲು ಬಿಜೆಪಿ ಹೊರಟಿದೆ. ಇದರ ವಿರುದ್ಧ ಕಠಿಣ ಕ್ರಮ ಆಗಬೇಕು ಎಂದು ಆಗ್ರಹಿಸಿದ್ದಾರೆ. ಶಾಸಕ ರವಿ ಗಣಿಗ ಮಾತನಾಡಿ, ರಾಮ್ ಲೀಲಾ ಮೈದಾನದಲ್ಲಿ ಹೋರಾಟ ಮಾಡಲಾಗುತ್ತಿದೆ. ನಾವು ನಮ್ಮ ಕ್ಷೇತ್ರದಿಂದ 200 ಜನ ಕಾರ್ಯಕರ್ತರು ಬಂದಿದ್ದಾರೆ ಭಾಗವಹಿಸುತ್ತೇವೆ ಎಂದು ತಿಳಿಸಿದ್ದಾರೆ.



ಶಾಸಕ ಬಿಆರ್ ಪಾಟೀಲ್ ಮಾತನಾಡಿ, ಕರ್ನಾಟಕದಲ್ಲಿ ವೋಟ್ ಚೋರಿ ಆಗಿದೆ. ಕರ್ನಾಟಕಲ್ಲಿ ಇನ್ನೆರೆಡು ಮೂರು ಪ್ರಕರಣದಲ್ಲಿ ಹೀಗಾಗಿದೆ. ನನ್ನ ಹತ್ತಿರ ಮಾಹಿತಿ ಇದೆ. ನಮ್ಮ ವರಿಷ್ಠರು ಈ ಬಗ್ಗೆ



**ಕುತಂತ್ರದಿಂದ ಹೈಜಾಕ್**

ಕೇಳಿದಾಗ ಹೇಳುತ್ತೇನೆ. ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲಿ ಮತಗಳ್ಳತನ ಆಗಿದೆ. ಬಿಜೆಪಿಯವರು ಕುತಂತ್ರದಿಂದ ಹೈಜಾಕ್ ಮಾಡಿ ಅಧಿಕಾರ ಪಡೆದಿದ್ದಾರೆ. ಜನಾದೇಶ ಅವರಿಗೆ ಕೊಡ್ತಿಲ್ಲ. ಹೀಗಾಗಿ ಬಿಜೆಪಿ ವೋಟ್ ಚೋರಿ ಮಾಡ್ತಿದೆ. ನಮ್ಮ ಪಕ್ಷದಿಂದ ಬೃಹತ್ ಹೋರಾಟ ನಡೆಯುತ್ತಿದೆ. ಪ್ರಧಾನಿ ಮೋದಿ, ಶಾ ಅಧಿಕಾರದಲ್ಲಿ ಮುಂದುವರೆಯಲು ಏನು ಬೇಕಾದ್ರೂ ಮಾಡಲು ತಯಾರಿದ್ದಾರೆ ಎಂದು ತಿಳಿಸಿದ್ದಾರೆ.

### ಬಿಜೆಪಿಗರು ದೇಶದ್ರೋಹಿಗಳು



ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಗರು ದೇಶದ್ರೋಹಿಗಳು ಮತ್ತು ನಾಟಕಕಾರರು. ಜನರ ಮತದಾನದ ಹಕ್ಕು ಮತ್ತು ಸಂವಿಧಾನವನ್ನು ಉಳಿಸಲು ಅವರನ್ನು ಅಧಿಕಾರದಿಂದ ತೆಗೆದುಹಾಕಬೇಕು ಎಂದು ಕರೆ ನೀಡಿದರು. ಕಾಂಗ್ರೆಸ್ ಸಿದ್ಧಾಂತವನ್ನು ಒಗ್ಗಟ್ಟಿನಿಂದ ಬಲಪಡಿಸುವುದು ಎಲ್ಲಾ ಭಾರತೀಯರ ಕರ್ತವ್ಯವಾಗಿದೆ. ಕಾಂಗ್ರೆಸ್ ಮಾತ್ರ ದೇಶವನ್ನು ಉಳಿಸಬಲ್ಲದು. ಆರ್ ಎಸ್‌ಎಸ್ ಸಿದ್ಧಾಂತವು ರಾಷ್ಟ್ರವನ್ನು ನಾಶ ಮಾಡುತ್ತದೆ ಎಂದು ಆರೋಪಿಸಿದರು. ಬೆಂಗಳೂರಿನಲ್ಲಿ ನನ್ನ ಪುತ್ರನಿಗೆ ಶಸ್ತ್ರಚಿಕಿತ್ಸೆ ನಡೆಯುತ್ತಿದೆ. ಆದರೂ, ನಾನು 140 ಕೋಟಿ ಭಾರತೀಯರ ಹಿತಕ್ಕಾಗಿ ಅಲ್ಲಿಗೆ ತೆರಳದೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದೇನೆ ಎಂದು ಹೇಳಿದರು.

1. ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಿದ ಕಾಂಗ್ರೆಸ್.
2. ಮತಗಳ್ಳತನದ ವಿರುದ್ಧ ಬೃಹತ್ ಜನಾಂದೋಲನಕ್ಕೆ ಕರೆಕೊಟ್ಟ ರಾಹುಲ್ ಗಾಂಧಿ.
3. ಕೇಂದ್ರ ಮತ್ತು ಚುನಾವಣಾ ಆಯೋಗದ ವಿರುದ್ಧ ತೊಡೆತಟ್ಟಿದ ಕಾಂಗ್ರೆಸ್ ನಾಯಕರು.

### ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸಿ




ಸಂಸದೆ ಪ್ರಿಯಾಂಕಾ ವಾದ್ರಾ ಮಾತನಾಡಿ, ಚುನಾವಣಾ ಪ್ರಕ್ರಿಯೆಯ ಪ್ರತಿಯೊಂದು ಹಂತವೂ ಅನುಮಾನವನ್ನು ಹುಟ್ಟುಹಾಕುತ್ತಿದೆ. ಚುನಾವಣಾ ಆಯೋಗ ಜನರ ಮತದಾನದ ಹಕ್ಕನ್ನು ಕಸಿದುಕೊಳ್ಳಲು ಪಿತೂರಿಯಲ್ಲಿ ಭಾಗಿಯಾಗಿದೆ. ದೇಶದ ಸಾಂವಿಧಾನಿಕ ಸಂಸ್ಥೆಗಳು ದಾಳಿಗೆ ತುತ್ತಾದಾಗ, ಭಾರತೀಯರು ಎದ್ದು ನಿಲ್ಲಬೇಕು ಎಂದು ಹೋರಾಟಕ್ಕೆ ಕರೆ ನೀಡಿದರು.ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತ್ತು ಚುನಾವಣಾ ಆಯುಕ್ತರಾದ ಸುಖ್ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಬಿಜೆಪಿಗೆ ನೆರವು ನೀಡುತ್ತಿದ್ದಾರೆ. ಮುಂದೆ ಅವರನ್ನು ಈ ಪಕ್ಷ ಉಳಿಸಲು ಸಾಧ್ಯವಿಲ್ಲ.

## ನಾನ್ಯಾರು ಎಂದು ಕೇಳುತ್ತಿರುವ ಡಿಕೆಶಿ ಅವರೇ ನೀವೀಗ ಆ ದಿನಗಳ ಕೊತ್ವಾಲ್ ಶಿಷ್ಯ ಅಲ್ಲ; ಬಿಜೆಪಿ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಶನ್ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ, ಸರ್ಕಾರಕ್ಕೆ ಎಚ್ಚರಿಕೆ ನೀಡುವ ಧಾಟಿಯಲ್ಲಿ ಪತ್ರ ಬರೆದಿದ್ದ ಕಿರಣ್ ಹೆಬ್ಬಾರ್ ವಿರುದ್ಧ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಗರಂ ಆಗಿದ್ದರು. ಈ ವಿಚಾರವಾಗಿ ಪ್ರತಿಪಕ್ಷ ಬಿಜೆಪಿ ಇದೀಗ ಡಿಕೆಶಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದೆ.

ಸಭೆಯಲ್ಲಿ ಡಿಕೆ ಶಿವಕುಮಾರ್ ಅವರು ಸಾಮಾನ್ಯ ಜನರಿಗ ಧಮ್ಕಿ ಹಾಕಿದ್ದಾರೆ ಎಂದು ಆರೋಪಿಸಿರುವ ಬಿಜೆಪಿ, ರೌಡಿಯಂತೆ ವರ್ತಿಸುವುದನ್ನು ಬಿಡುವಂತೆ ಉಪಮುಖ್ಯಮಂತ್ರಿಗಳಿಗೆ ಸಲಹೆ ನೀಡಿದೆ. ಈ ಕುರಿತು ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಕರ್ನಾಟಕ ಬಿಜೆಪಿ ಘಟಕ, ಸಾರ್ವಜನಿಕರೆದುರು ತಮ್ಮ ಚರಿತ್ರೆಯನ್ನು ಬಯಲು ಮಾಡಿಕೊಳ್ಳದಿರಿ ಎಂದು ವ್ಯಂಗ್ಯವಾಡಿದೆ. ನಾನ್ಯಾರು ಗೊತ್ತಾ ಎಂದು ಕೇಳುತ್ತಿರುವ ಡಿಕೆ ಶಿವಕುಮಾರ್ ಅವರೇ, ನೀವು ಈಗ ರಾಜ್ಯದ ಡಿಸಿಎಂ ಆ ದಿನಗಳ ಕೊತ್ವಾಲ್ ಶಿಷ್ಯ ಅಲ್ಲ ಎಂಬುದನ್ನು ಮರೆಯದಿರಿ. ಜನಸಾಮಾನ್ಯರೊಬ್ಬರು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಪತ್ರ ಬರೆದರೆ, ನಾನು ಯಾರು ಗೊತ್ತಾ? ಜೈಲಿಗೆ ಹೋಗಿ ಬಂದವನು ಎನ್ನುವ ಮೂಲಕ ತಮ್ಮ ಚರಿತ್ರೆಯನ್ನು ತಾವೇ ಬಯಲು ಮಾಡಿ ಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ಡಿಸಿಎಂ ಕಾಲೆಳೆದಿದೆ. ಮುಂದುವರೆದು, ಅಂದಹಾಗೆ ನೀವು ಜೈಲಿಗೆ ಹೋಗಿದ್ದು ಯಾವುದೇ ಒಳ್ಳೆ ಕಾರ್ಯ ಮಾಡಿ ಅಲ್ಲ ಭ್ರಷ್ಟಾಚಾರ ಮತ್ತು ಅವ್ಯವಹಾರ ಆರೋಪದಡಿ ಎಂಬುದನ್ನ ನೆನಪಿಡಿ ಕರ್ನಾಟಕ ಕಾಂಗ್ರೆಸ್ ಸರ್ಕಾರ ದ್ವೇಷ ಭಾಷಣದ ಬಿಲ್ ಜಾರಿಗೆ ತರುತ್ತಿರುವುದು ಇದೇ ಕಾರಣಕ್ಕೆ. ಡಿಕೆ ಶಿವಕುಮಾರ್ ಅವರೇ, ನಿಮ್ಮನ್ನು ನೀವು ಪಾಳೆಗಾರ ಎಂದುಕೊಂಡಿದ್ದರೆ ಅದು ನಿಮ್ಮ ಮೂರ್ಖತನ! ಎಂದು ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ. ಸಭೆಯಲ್ಲಿ ಮಾತನಾಡಿದ್ದ ಡಿಕೆ ಶಿವಕುಮಾರ್, ಕಿರಣ್ ಹೆಬ್ಬಾರ್ ಅವರು ಬರೆದಿದ್ದ ಪತ್ರದ ಧಾಟಿಗೆ ಅಸಮಧಾನ ವ್ಯಕ್ತಪಡಿಸಿದ್ದರು. ನಾನು ಪ್ರಧಾನಮಂತ್ರಿ ಮತ್ತು ಕೇಂದ್ರ ಗೃಹಸಚಿವರಿಗೂ ಹೆದರದೇ ಜೈಲಿಗೆ ಹೋಗಿ ಬಂದವನು. ಹೀಗಾಗಿ ಇಂತಹ ಎಚ್ಚರಿಕೆಗಳೆಲ್ಲ ನನ್ನ ಮುಂದೆ ನಡೆಯುವುದಿಲ್ಲ ಎಂದು ಉಪಮುಖ್ಯಮಂತ್ರಿಗಳು ಗುಡುಗಿದ್ದರು. ಯಾರೂ ಕೂಡ ಸರ್ಕಾರವನ್ನು ಎಚ್ಚರಿಸುವಂತಿಲ್ಲ ಎಂದು ಹೇಳಿದ್ದ ಡಿಕೆ ಶಿವಕುಮಾರ್, ಸಮಸ್ಯೆಗಳೇನಿದ್ದರೂ ಅದನ್ನು ಸರ್ಕಾರದೊಂದಿಗೆ ಗೌರವಯುತವಾಗಿ ಕುಳಿತುಕೊಂಡು ಚರ್ಚಿಸುವಂತೆ ಸಲಹೆ ನೀಡಿದ್ದರು. ಪ್ರೀತಿಯಿಂದ ಮಾತನಾಡಿದರೆ, ಪ್ರೀತಿಯಿಂದ ಮಾತನಾಡಿಸುತ್ತೇನೆ ಎಂಬ ಡಿಸಿಎಂ ಹೇಳಿಕೆ ಭಾರೀ ಚರ್ಚೆಗೆ ಗ್ರಾಸವಾಗಿತ್ತು.




**ನಿಮ್ಮನ್ನು ನೀವು ಪಾಳೆಗಾರ ಎಂದುಕೊಂಡಿದ್ದರೆ ಅದು ನಿಮ್ಮ ಮೂರ್ಖತನ**

ಪ್ರತಿಪಕ್ಷ ಬಿಜೆಪಿ ಉಪಮುಖ್ಯಮಂತ್ರಿಗಳ ಹೇಳಿಕೆಯನ್ನು ಟೀಕಿಸಿದ್ದು, ಡಿಕೆ ಶಿವಕುಮಾರ್ ಹಳೆಯ ಚಾಳಿ ಬಿಡುತ್ತಿಲ್ಲ ಎಂದು ವಾಗ್ದಾಳಿ ನಡೆಸಿದೆ. ಡಿಕೆ ಶಿವಕುಮಾರ್ ಹೇಳಿಕೆಗೆ ಅಪಾರ್ಟ್‌ಮೆಂಟ್ ನಿವಾಸಿಗಳಿಂದಲೂ ಖಂಡನೆ ವ್ಯಕ್ತವಾಗಿತ್ತು. ಕೆಲವರು ಉಪಮುಖ್ಯ ಮಂತ್ರಿಗಳು ನಮ್ಮನ್ನು ವೋಟ್ ಬ್ಯಾಂಕ್ ಎಂದು ತಿಳಿದಿದ್ದರೆ, ಅದು ಅವರ ತಪ್ಪು ಕಲ್ಪನೆ. ನಾವು ಅಪಾರ್ಟ್‌ಮೆಂಟ್ ಕಾಯ್ದೆ ಜಾರಿ ಮಾಡುವ ಸಾಧ್ಯತೆಗಳ ಮೇಲೆ ಗ್ರೇಟರ್ ಬೆಂಗಳೂರು ಚುನಾವಣೆಯಲ್ಲಿ ಮತ ಹಾಕುತ್ತೇವೆ ಎಂದು ಎಚ್ಚರಿಸಿದ್ದರು.

# ಶಾಮನೂರು ಶಿವಶಂಕರಪ್ಪ: ಓದಿದ್ದು 10ನೇ ಕ್ಲಾಸ್; ಕಟ್ಟಿದ್ದು ಬೃಹತ್ ಸಾಮ್ರಾಜ್ಯ


## ದಾವಣಗೆರೆ ಧಣಿಯ ಬದುಕು ಅಂತ್ಯ. ದ.ಭಾರತವೇ ತಿರುಗಿ ನೋಡುವಂತಹ ಶಿಕ್ಷಣ ಮತ್ತು ಉದ್ಯಮ ಸಾಮ್ರಾಜ್ಯ ಕಟ್ಟಿದ ಉದ್ಯಮಿ

• ಉದಯವಾಹಿನಿ, ಬೆಂಗಳೂರು



ದೇಶದ ಹಿರಿಯ ಶಾಸಕ, ಸೋಲಿಲ್ಲದ ಸರದಾರ ಎಂಬ ಖ್ಯಾತಿಗೆ ಪಾತ್ರವಾಗಿದ್ದ ಶಾಮನೂರು ಶಿವಶಂಕರಪ್ಪ ಇಹಲೋಕ ತ್ಯಜಿಸಿದ್ದಾರೆ. ಬರೋಬ್ಬರಿ 95 ವರ್ಷಗಳ ಸ್ಫೂರ್ತಿಯುತ ಜೀವನ ನಡೆಸಿದ್ದ ಶಿವಶಂಕರಪ್ಪ, 10ನೇ ತರಗತಿವರೆಗೆ ಓದಿದ್ದರೂ ಸಾವಿರಾರು ಡಾಕ್ಟರ್, ಇಂಜಿನಿಯರ್‌ಗಳನ್ನು ಬಾಪೂಜಿ ಸಂಸ್ಥೆಯ ಮೂಲಕ ಸೃಷ್ಟಿಸಿದ್ದರು. ಶಾಮನೂರು ಅವರ ನಿಧನದಿಂದ ಮಧ್ಯ ಕರ್ನಾಟಕದ ಪ್ರಬಲ ಕೊಂಡಿಯೊಂದು ಕಳಚಿದಂತಾಗಿದೆ. ದಾವಣಗೆರೆ ಜಿಲ್ಲೆ ಅಕ್ಷರಶಃ ಅನಾಥವಾಗಿದೆ. ಹತ್ತನೇ ತರಗತಿಯವರೆಗೆ ಓದಿದ್ದ ಹುಡುಗನೊಬ್ಬ, ದಕ್ಷಿಣ ಭಾರತವೇ ತಿರುಗಿ ನೋಡುವಂತಹ ಶಿಕ್ಷಣ ಮತ್ತು ಉದ್ಯಮ ಸಾಮ್ರಾಜ್ಯ ಕಟ್ಟಿ ಇಂದಿನ ಪೀಳಿಗೆಗೆ ಸ್ಫೂರ್ತಿಯಾಗಿದ್ದಾರೆ. ವಯಸ್ಸು ಕೇವಲ ಸಂಖ್ಯೆ ಅಷ್ಟೇ ಎಂದು ತಮ್ಮ 95 ನೇ ವಯಸ್ಸಿನಲ್ಲೂ ಸಾಬೀತುಪಡಿಸಿದ ಚೈತನ್ಯದ ಚಿಲುಮೆ ಶಾಮನೂರು ಶಿವಶಂಕರಪ್ಪ. ಅವರ ನಿಧನದಿಂದ ದಾವಣಗೆರೆ ಮಾತ್ರವಲ್ಲ, ಕರ್ನಾಟಕ ರಾಜಕೀಯಕ್ಕೆ ತುಂಬಲಾರದ ನಷ್ಟವಾಗಿದೆ.

**ಹಳ್ಳಿಯ ಹುಡುಗ ಟು ಉದ್ಯಮದ ದೊರೆ:** ಶಾಮನೂರು ಶಿವಶಂಕರಪ್ಪ ಅವರ ಆರಂಭಿಕ ಜೀವನ ತುಂಬಾನೇ ಸಿಂಪಲ್ ಆಗಿತ್ತು. ದಾವಣಗೆರೆಯ ಪ್ರತಿಷ್ಠಿತ ಶಾಮನೂರು ಕುಟುಂಬದ ಶಾಮನೂರು ಕಲ್ಲಪ್ಪ ಮತ್ತು ಸಾವಿತ್ರಮ್ಮ ದಂಪತಿಯ ದ್ವಿತೀಯ ಪುತ್ರನಾಗಿ ಜನಿಸಿದ ಇವರು, ಹುಟ್ಟೂರು ದಾವಣಗೆರೆಯಲ್ಲೇ ಶಾಲಾ ಶಿಕ್ಷಣ ಮುಗಿಸಿದರು. 10ನೇ ತರಗತಿಯವರೆಗೆ ಮಾತ್ರ ಓದಿದ್ದ ಇವರು, ಮುಂದೆ ಬ್ಯುಸಿನೆಸ್ ಕ್ಷೇತ್ರಕ್ಕೆ ಇಳಿದು ದೊಡ್ಡ ಸಾಮ್ರಾಜ್ಯವನ್ನೇ ಕಟ್ಟಿದರು.



**ಕರ್ನಾಟಕಕ್ಕೆ ತುಂಬಲಾರದ ನಷ್ಟ**

ಒಂದು ಕಾಲದಲ್ಲಿ ದಾವಣಗೆರೆ ಕಾಟನ್ ಮಿಲ್‌ಗಳಿಗೆ ಫೇಮಸ್ ಆಗಿತ್ತು, ಇದನ್ನು ಕರ್ನಾಟಕದ ಮ್ಯಾಂಚೆಸ್ಟರ್ ಎನ್ನಲಾಗುತ್ತಿತ್ತು. ಆದರೆ, ಯಾವಾಗ ಹತ್ತಿ ಗಿರಣಿಗಳು ಮುಚ್ಚಲ್ಪಟ್ಟವೋ, ಆಗ ದಾವಣಗೆರೆಯ ಆರ್ಥಿಕತೆ ಕುಸಿಯದಂತೆ ತಡೆದವರು ಇದೇ ಶಾಮನೂರು. ಸಾವಿರಾರು ಜನರಿಗೆ ಉದ್ಯೋಗ ಭದ್ರಾ ಕಾಲುವೆ ಯೋಜನೆಯ ಲಾಭ ಪಡೆದು, ಕೃಷಿ ಆಧಾರಿತ ಉದ್ಯಮಗಳಿಗೆ ಕೈಹಾಕಿದರು.

ಕುಕ್ಕುವಾಡದಲ್ಲಿ ನಷ್ಟದಲ್ಲಿದ್ದ ದಾವಣಗೆರೆ ಶುಗರ್ ಮಿಲ್ಸ್ ಅನ್ನು ಟೇಕ್ ಓವರ್ ಮಾಡಿ, ಅದನ್ನು ಲಾಭದಾಯಕವಾಗಿ ಬದಲಾಯಿಸಿದರು. ನಂತರ 1995ರಲ್ಲಿ ಶಾಮನೂರು ಶುಗರ್ಸ್ ಲಿಮಿಟೆಡ್ ಸ್ಥಾಪಿಸಿ, 1999ರಲ್ಲಿ ಉತ್ಪಾದನೆ ಆರಂಭಿಸಿದರು. ಕೇವಲ ಸಕ್ಕರೆ ಮಾತ್ರವಲ್ಲ, ಡಿಸ್ಟಿಲರಿ ಮತ್ತು ವಿದ್ಯುತ್ ಉತ್ಪಾದನೆಯನ್ನೂ ಆರಂಭಿಸಿ ಸಾವಿರಾರು ಜನರಿಗೆ ಉದ್ಯೋಗವನ್ನು ನೀಡಿದರು.

ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ, ಅದರಲ್ಲೂ ಹೆಣ್ಣುಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬ ಉದ್ದೇಶದಿಂದ ಎವಿಕೆ ಮಹಿಳಾ ಕಾಲೇಜನ್ನು ಬಲಪಡಿಸಿದರು, ಅಲ್ಲಿ ಈಗ ವರ್ಷಕ್ಕೆ 3,400ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಪದವಿ ಪಡೆಯುತ್ತಿದ್ದಾರೆ. ಕುನಿಬೆಳಕೆರೆ, ಹರಿಹರ, ತೊಲಹುಣಸೆ ಮತ್ತು ಚನ್ನಗಿರಿಯಂತಹ ಗ್ರಾಮೀಣ ಭಾಗಗಳಲ್ಲೂ ಕಾಲೇಜುಗಳನ್ನು ತೆರೆದು ಬಡವರ ಮನೆಬಾಗಿಲಿಗೆ ಶಿಕ್ಷಣ ತಲುಪಿಸಿದ್ದು ಇದೇ ಶಾಮನೂರು ಶಿವಶಂಕರಪ್ಪ.

### ಬಾಪೂಜಿಯ ಹೆಸರಲ್ಲಿ ಅಕ್ಷರ ಕ್ರಾಂತಿ!, ಬೆಣ್ಣೆನಗರಿ ಈಗ ವಿದ್ಯಾನಗರಿ

ಶಾಮನೂರು ಅವರನ್ನು ಜನ ಪ್ರೀತಿಯಿಂದ ನೆನೆಯುವುದು ಅವರು ಕಟ್ಟಿದ ಶಿಕ್ಷಣ ಸಂಸ್ಥೆಗಳಿಗಾಗಿ. 1958ರಲ್ಲಿ ಧರ್ಮರತ್ನಾಕರ ರಾಜನಹಳ್ಳಿ ಮದ್ದೂರಾಯಪ್ಪ ಸ್ಥಾಪಿಸಿದ್ದ ಬಾಪೂಜಿ ಎಜುಕೇಷನಲ್ ಅಸೋಸಿಯೇಷನ್ ನೇತೃತ್ವವನ್ನು 1972ರಲ್ಲಿ ಶಾಮನೂರು ಶಿವಶಂಕರಪ್ಪ ವಹಿಸಿಕೊಂಡರು. ಅಂದು ಕೇವಲ 5 ಕಾಲೇಜುಗಳಿದ್ದ ಈ ಸಂಸ್ಥೆಯನ್ನು, ಇಂದು 50ಕ್ಕೂ ಹೆಚ್ಚು ಸಂಸ್ಥೆಗಳ ಹೆಮ್ಮರವಾಗಿ ಬೆಳೆಸಿದ್ದಾರೆ. ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಜೆಜೆಎಂ ಮೆಡಿಕಲ್ ಕಾಲೇಜು, ಡೆಂಟಲ್ ಕಾಲೇಜು, ಫಾರ್ಮಸಿ, ನರ್ಸಿಂಗ್ ಹೀಗೆ ಹತ್ತು ಹಲವು ವೃತ್ತಿಪರ ಕೋರ್ಸ್‌ಗಳನ್ನು ದಾವಣಗೆರೆಗೆ ತಂದರು.

**ಈ ದಿನದ ದರ** ಪೆಟ್ರೋಲ್: 103.54 ₹/L | ಡೀಸೆಲ್ : 90.03 ₹/L | ಬಂಗಾರ: ₹13,391/Gram24ct ₹12,275/Gram22ct | ಬೆಳ್ಳಿ: ₹198.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ಮುಸ್ಲಿಮರ ಉತ್ತಮ ಬೆಳವಣಿಗೆ

ಮೊನ್ನೆ ಬೆಂಗಳೂರಿನ ಮತ್ತಿಕೆರೆಯ ಮಸೀದಿಯಲ್ಲಿ ಅಕ್ಬರ್ ಅಲಿ ಉಡುಪಿ ಕನ್ನಡದಲ್ಲಿ ಪ್ರವಚನಗೈದರು. ನಾವೆಲ್ಲ ಕೂಡಿ ಬಾಳಬೇಕು, ದ್ವೇಷ ಅಸೂಯೆ ಕೆಡುಕು ಬಯಸಬಾರದು. ಇಸ್ಲಾಂ ಸೇರಿ ಎಲ್ಲಾ ಧರ್ಮಗಳು ಇದನ್ನೇ ಹೇಳುತ್ತವೆ ಎಂದರು. ಸಮಿ ಉಲ್ಲಾ ಮಾತನಾಡಿ ಎಲ್ಲಾ ಸಮುದಾಯದವರ ಜೊತೆ ಸೌಹಾರ್ದ ಜೀವನ ಸಾಗಿಸಬೇಕೆಂದು ಎಲ್ಲಾ ಧರ್ಮಗಳು ಹೇಳುತ್ತವೆ. ನಾವು ಕನ್ನಡಿಗರು. ಈ ಮಣ್ಣಿನ ಮಕ್ಕಳೆಂದು ಜೀವನ ಸಾಗಿಸಬೇಕೆಂದರು. ಅಕ್ಬರ್ ಅಲಿಯೊಂದಿಗೆ ನಡೆದ ಸಂವಾದದಲ್ಲಿ ಮುನಿಸ್ವಾಮಿ ರಮೇಶಗೌಡ ಶೇ ಬೋ ರಾಧಾಕೃಷ್ಣ ಕಿರಣ್ ಕಾರ್ತಿಕ್ ಪಾಲ್ಗೊಂಡಿದ್ದರು.

ಮಸೀದಿಯನ್ನು ಕನ್ನಡಮಯಗೊಳಿಸಿದ್ದು ಕನ್ನಡ ಕಲಿಕಾಕೇಂದ್ರವನ್ನು ತೆರೆಯಲಾಗಿದೆ. ಇದೊಂದು ಉತ್ತಮ ಬೆಳವಣಿಗೆ. ಜನ ಇಂಥದ್ದನ್ನು ಎತ್ತಿಕೊಳ್ಳಬೇಕು. ಪ್ರತಿ ಧರ್ಮದಲ್ಲಿಯೂ ದ್ವೇಷ ಹಿಂಸೆ ಭೇದಾಂಶಗಳಿವೆ. ಅಂಥವುಗಳನ್ನು ಪ್ರತಿ ಧರ್ಮದವರೂ ಕೈಬಿಡಬೇಕು. ಇಂಥ ನಡೆ ಮಾತ್ರ ಸೌಹಾರ್ದ ಸ್ವಾಸ್ಥ್ಯ ನೆಮ್ಮದಿ ನೀಡಬಲ್ಲದು. ಹಿಂದುಗಳೂ ಶಾಂತಿಮಂತ್ರ, ಉಪನಿಷನ್ಮಂತ್ರ, ಭಗವದ್ಗೀತೆ ವಚನ ಮುಂತಾದವುಗಳನ್ನು ಕನ್ನಡ ಲಿಪಿಯಲ್ಲಿ ಕನ್ನಡಾನುವಾದದೊಂದಿಗೆ ಮಠ ಮಂದಿರಗಳಲ್ಲಿ ಕೆತ್ತಬೇಕು ಬರೆಸಬೇಕು. ಉಳಿದ ಧರ್ಮದವರೂ ಅದರಲ್ಲೂ ಕ್ರೈಸ್ತರು ಇದನ್ನು ಮೊದಲು ಮಾಡಬೇಕು. ಸ್ವಧರ್ಮಾನುಷ್ಠಾನ ಪರಧರ್ಮ ಸಹಿಷ್ಣುತೆ ಈ ದೇಶದ ಉಸಿರು. ದ್ವೇಷ ಮತಾಂತರ ಎಂದಿಗೂ ಪರಿಹಾರವಲ್ಲ.

## ಗುರುಗುಣಸ್ತವನ ಧಾರ್ಮಿಕ ಪ್ರವಚನ

• ಉದಯವಾಹಿನಿ, ಬೆಂಗಳೂರು



ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಡಿಸೆಂಬರ್ 15 ರಿಂದ 21ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಮ||ಶಾ||ಸಂ|| ಶ್ರೀ ಗುರುಪ್ರಸಾದಾಚಾರ್ಯರಿಂದ ಗುರುಗುಣಸ್ತವನ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ.

**ಸ್ಥಳ :** ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಮತ್ತು 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003 ಸರ್ವರಿಗೂ ಆತ್ಮೀಯ ಸುಸ್ವಾಗತ

## ಎಸ್ಐಟಿ ಆರೋಪಪಟ್ಟಿ ಸತ್ಯಾಂಶಗಳಿಂದ ತುಂಬಿದೆ; ಡಿಕೆ.ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಆಳಂದ ವಿಧಾನಸಭಾ ಕ್ಷೇತ್ರದ ಮತಗಳ್ಳತನ ಪ್ರಕರಣದಲ್ಲಿ ವಿಶೇಷ ತನಿಖಾ ತಂಡ (ಎಸ್ಐಟಿ) ನ್ಯಾಯಾಲಯದಲ್ಲಿ ಸಲ್ಲಿಸಿರುವ ಆರೋಪಪಟ್ಟಿ ಸತ್ಯಾಂಶಗಳಿಂದ ತುಂಬಿದೆ ಎಂದು ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿರುವುದು ಸತ್ಯ. ಹೀಗಾಗಿ ಬಿಜೆಪಿ ಮಾಜಿ ಶಾಸಕ ಗುತ್ತೇದಾರ್ ಅವರ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ ಮಾಡುವ ಮೂಲಕ ಮತಗಳ್ಳತನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಆಳಂದ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಸುಭಾಷ್ ಗುತ್ತೇದಾರ್ ಅವರ ವಿರುದ್ಧ ಸಲ್ಲಿಕೆಯಾಗಿರುವ ಆರೋಪಪಟ್ಟಿ ಕುರಿತ ಪ್ರಶ್ನೆಗೆ ಉತ್ತರಿಸಿ, ಈ ಪ್ರಕರಣದಲ್ಲಿ ಯಾವುದೇ ಮುಚ್ಚುಮರೆಯಿಲ್ಲ. ಅಕ್ರಮ ನಡೆದಿರುವುದು ಸತ್ಯ. ಗಂಭೀರವಾದ ತನಿಖೆ ನಡೆಸಿ ಆರೋಪಪಟ್ಟಿ ಸಲ್ಲಿಸಿದ್ದಾರೆ. ಈ ವಿಚಾರದ ಬಗ್ಗೆ ನಮ್ಮ ಶಾಸಕರು ಸದನದಲ್ಲಿ ದನಿ ಎತ್ತಲಿದ್ದಾರೆ. ಇದು ಕೇವಲ ಕರ್ನಾಟಕದ ದನಿಯಲ್ಲ. ಇಡೀ ಭಾರತದ ದನಿ. ಜನರ ಕೃಪೆಯಿಂದ ನಾವು ಇಲ್ಲಿ ಅಧಿಕಾರಕ್ಕೆ ಬಂದಿದ್ದೇವೆ ಎಂದು ತಿಳಿಸಿದರು.

## ಜನರ ಆತಂಕ ದೂರು ಮಾಡೋಕೆ ಆರೋಗ್ಯ ಇಲಾಖೆ ಮುಂದು

• ಉದಯವಾಹಿನಿ, ಬೆಂಗಳೂರು

ಮೊಟ್ಟೆ ಪ್ರಿಯರು ನೋಡಲೇಬೇಕಾದ ಸ್ಟೋರಿ. ಮೊಟ್ಟೆಯಲ್ಲಿ ಕ್ಯಾನ್ಸರ್ ಕಾರಕ ಎಂಬ ವದಂತಿ ಹಿನ್ನೆಲೆ ಜನರ ಆತಂಕ ದೂರು ಮಾಡೋಕೆ ಆರೋಗ್ಯ ಇಲಾಖೆ ಮುಂದಾಗಿದೆ. ರಾಜ್ಯದ ಎಲ್ಲಾ ಬ್ರ್ಯಾಂಡ್‌ಗಳ ಮೊಟ್ಟೆ ಟೆಸ್ಟ್‌ಗೆ ಆರೋಗ್ಯ ಸಚಿವರು ಸೂಚಿಸಿದ್ದಾರೆ. ಜೊತೆಗೆ ಕಳೆದ 6 ತಿಂಗಳ ಹಿಂದೆ ಆಹಾರ ಸುರಕ್ಷತಾ ಇಲಾಖೆ ಟೆಸ್ಟ್‌ನಲ್ಲಿ ಮೊಟ್ಟೆ ಸೇಫ್ ಅಂತ ಕೂಡ ವರದಿ ಬಂದಿದೆ.

**ಎಲ್ಲಾ ಬ್ರ್ಯಾಂಡ್ ಮೊಟ್ಟೆ ಟೆಸ್ಟ್‌ಗೆ ಸೂಚನೆ:** ಕಳೆದ ಕೆಲವು ದಿನಗಳಿಂದ ಭಾರೀ ಚರ್ಚೆಗೆ ಗ್ರಾಸವಾಗ್ತಿರೋ ವಿಚಾರ ಅಂದರೆ ಅದು ಮೊಟ್ಟೆಯಲ್ಲಿ ಕ್ಯಾನ್ಸರ್ ಕಾರಕ ಅಂಶ ಇದೆ ಅನ್ನೋ ವಿಚಾರ. ಜನ ಆತಂಕಕ್ಕೆ ಒಳಗಾಗಿದ್ದು ಮೊಟ್ಟೆ ತಿನ್ನೋದಕ್ಕೂ ಭಯ ಪಡುವಂತಾಗಿದೆ. ಜನರ ಆತಂಕ ದೂರು ಮಾಡೋದಕ್ಕೆ ಆರೋಗ್ಯ ಮತ್ತು ಆಹಾರ ಸುರಕ್ಷತಾ ಇಲಾಖೆ ಮುಂದಾಗಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜ್ಯದಲ್ಲಿ ಮೊಟ್ಟೆ ಟೆಸ್ಟ್ ಮಾಡೋದಕ್ಕೆ ಸೂಚನೆ ಕೊಟ್ಟಿದ್ದಾರೆ. ಜನ ಆತಂಕಕ್ಕೆ ಒಳಗಾಗೋದು ಬೇಡ ಎಲ್ಲಾ ಬ್ರ್ಯಾಂಡ್‌ಗಳನ್ನ ಟೆಸ್ಟ್ ಮಾಡೋಕೆ ಹೇಳ್ತೆನೆ ಅಂದಿದ್ದಾರೆ. ಇನ್ನೂ ಪ್ರಮುಖವಾಗಿ ಕ್ಯಾನ್ಸರ್‌ಗೆ ಕಾರಣ ಆಗುವ ಅಂಶಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಒಂದು ವೇಳೆ ಆಥರ ತಪ್ಪು ಆಗಿದ್ರೆ ಶಿಕ್ಷೆ ಆಗುತ್ತೆ. ಜನರು ಗೊಂದಲಕ್ಕೆ ಒಳಗಾಗೋದು ಬೇಡ. ಜನರು ಆತಂಕ ಕೂಡ ಪಡೋದು ಬೇಡ ಅಂತಿದ್ದಾರೆ.

# ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಸರ್ಕಾರ ಮುಂದು

### ಐದೂ ನಗರ ಪಾಲಿಕೆಗಳಲ್ಲಿ ಪ್ರತಿ 20 ಸಾವಿರ ಜನರಿಗೊಬ್ಬ ಮತದಾನ ಹಕ್ಕಿಲ್ಲದ ಸದಸ್ಯ

• ಉದಯವಾಹಿನಿ, ಬೆಂಗಳೂರು

ನಗರ ಪಾಲಿಕೆಗಳ ಚುನಾವಣೆಯ ಅನಿಶ್ಚಿತತೆಯಲ್ಲಿರುವ ಸಂದರ್ಭದಲ್ಲಿ ಐದೂ ನಗರ ಪಾಲಿಕೆಗಳಿಗೆ 700ಕ್ಕೂ ಹೆಚ್ಚು ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಸರ್ಕಾರ ಮುಂದಾಗಿದೆ. ಬಿಬಿಎಂಪಿಯಲ್ಲಿ ಜನಪ್ರತಿನಿಧಿಗಳ ಅವಧಿ ಮುಗಿದು ಐದು ವರ್ಷ ಚುನಾವಣೆ ನಡೆಸಿರಲಿಲ್ಲ. 2025ರ ಸೆಪ್ಟೆಂಬರ್ 2ರಂದು ಬಿಬಿಎಂಪಿ ಅಸ್ತಿತ್ವ ಕಳೆದುಕೊಂಡು, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024ರಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಅಸ್ತಿತ್ವಕ್ಕೆ ಬಂದಿತು. ಅದೇ ದಿನ ಐದು ನಗರ ಪಾಲಿಕೆಗಳೂ ರಚನೆಯಾದವು.

ಐದೂ ನಗರ ಪಾಲಿಕೆಗಳಿಗೆ ವಾರ್ಡ್‌ಗಳ ಮರುವಿಂಗಡಣೆ ಅಂತಿಮವಾಗಿದ್ದರೂ, ಇನ್ನೂ ಮೀಸಲಾತಿಯನ್ನು ನಿಗದಿ ಮಾಡಿಲ್ಲ.

ಈ ಸಂದರ್ಭದಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಗೆ ತಿದ್ದುಪಡಿ ತಂದು, ನಗರ ಪಾಲಿಕೆಗಳಿಗೆ ಚುನಾವಣೆ ನಡೆಯುವವರೆಗೂ ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಮುಂದಾಗಿದೆ. ಇದರಿಂದ, ಒಟ್ಟಾರೆ ಚುನಾಯಿತ ಕಾರ್ಪೊರೇಟರ್‌ಳಿಗಿಂತ 200ಕ್ಕೂ ಹೆಚ್ಚು ನಾಮ ನಿರ್ದೇಶಿತ ಕಾರ್ಪೊರೇಟರ್‌ಗಳೇ ಇರಲಿದ್ದಾರೆ. ಬಿಬಿಎಂಪಿಯ ಅವಧಿಯಲ್ಲಿ 198 ಚುನಾಯಿತ ಕಾರ್ಪೊರೇಟರ್‌ಗಳಿದ್ದರೆ, 20 ನಾಮ ನಿರ್ದೇಶಿತ ಸದಸ್ಯರಿದ್ದರು.ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ವಿಧಾನಸಭೆಯಲ್ಲಿ ಮಸೂದೆಯನ್ನು ಡಿ.12ರಂದು ಮಂಡಿಸಲಾಗಿದೆ. ಚುನಾಯಿತ ಸದಸ್ಯರಿಲ್ಲದ ಸಂದರ್ಭದಲ್ಲಿ




ಉದಯವಾಹಿನಿ ಚಿತ್ರ

ಐದು ನಗರ ಪಾಲಿಕೆ ರಚನೆ

ನಾಮನಿರ್ದೇಶಿತ ಸದಸ್ಯರನ್ನು ನೇಮಿಸಲು ಹೊರಟಿರುವುದು ಸಂವಿಧಾನ ವಿರೋಧಿ ಎಂಬ ಆರೋಪ ವ್ಯಕ್ತವಾಗಿದೆ. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ಪ್ರಕರಣ 30ಕ್ಕೆ ತಿದ್ದುಪಡಿ ತಂದು, ಐದನೇ ಅಂಶವನ್ನು ಸೇರಿಸಲು ಮಸೂದೆ ಮಂಡಿಸಲಾಗಿದೆ.

ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿದಂಥ ಸ್ಥಳೀಯ ಪ್ರದೇಶದಲ್ಲಿ ಸಾಮಾನ್ಯ ನಿವಾಸಿಯನ್ನು



ಆ ಸ್ಥಳೀಯ ಪ್ರದೇಶಕ್ಕೆ ಚುನಾವಣೆ ನಡೆಸುವವರೆಗೆ ಪ್ರತಿ 20 ಸಾವಿರ ಜನಸಂಖ್ಯೆಗೆ ಕನಿಷ್ಠ ಒಬ್ಬ ವ್ಯಕ್ತಿಯಂತೆ ಆ ನಿರ್ದಿಷ್ಟ ನಗರ ಪಾಲಿಕೆಗೆ ಹೆಚ್ಚುವರಿ ಸದಸ್ಯನಾಗಿ ನಾಮ ನಿರ್ದೇಶಿಸತಕ್ಕದ್ದು. ಅಂಥ ನಾಮ ನಿರ್ದೇಶಿತ ವ್ಯಕ್ತಿಯು ನಗರ ಪಾಲಿಕೆಯಲ್ಲಿ ಮತದಾನ ಮಾಡುವ ಅಧಿಕಾರವನ್ನು ಹೊಂದಿರುವುದಿಲ್ಲ ಎಂದು ತಿದ್ದುಪಡಿ ತರುವ ಅಂಶಗಳಲ್ಲಿ ಹೇಳಲಾಗಿದೆ.

ಐದು ನಗರ ಪಾಲಿಕೆಗಳಲ್ಲಿ 369 ವಾರ್ಡ್‌ಗಳನ್ನು ಅಂತಿಮಗೊಳಿಸಿ ನವೆಂಬರ್ 19 ರಂದು ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಿದೆ. ಇದಾದ ನಂತರವೂ, 20 ವಾರ್ಡ್‌ಗಳ ಗಡಿ ಮತ್ತು ಹೆಸರು ಬದಲಾಯಿಸಿ ಅಧಿಸೂಚಿಸಲಾಗಿದೆ. ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ತಯಾರಿಸುವ ಪ್ರಕ್ರಿಯೆ ನಡೆಯುತ್ತಿದ್ದು, ಫೆಬ್ರುವರಿಯಲ್ಲಿ ಚುನಾವಣೆ ನಡೆಸುವುದಾಗಿ ಹೇಳಲಾಗುತ್ತದೆ. ಆದರೆ, ಇದೀಗ ಕಾಯ್ದೆಗೆ ತಿದ್ದುಪಡಿ ತಂದು ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡುವ ಸರ್ಕಾರದ ಪ್ರಕ್ರಿಯೆಯಿಂದ ಚುನಾವಣೆ ಸದ್ಯಕ್ಕೆ ನಡೆಯುವುದಿಲ್ಲ ಎಂಬ ಸಂಶಯ ಮೂಡಿದೆ.

ನಗರದ ಸುತ್ತಲಿನ ನಗರಸಭೆ, ಪಟ್ಟಣ ಪಂಚಾಯಿತಿ ಕೆಲವು ಗ್ರಾಮ ಪಂಚಾಯಿತಿಗಳನ್ನು ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿಸಿಕೊಳ್ಳಬೇಕೆಂಬ ಉದ್ದೇಶ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗಿದೆ. ಜನಪ್ರತಿನಿಧಿಗಳೂ ಅದನ್ನೇ ಬಯಸುತ್ತಿದ್ದಾರೆ. ಆ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಅವಧಿ ಈಗಾಗಲೇ ಬಹುತೇಕ ಮುಗಿದಿದ್ದು, ಯಾವ ಸ್ಥಳೀಯ ಸಂಸ್ಥೆಗಳ ಅವಧಿ ಮುಗಿದಿದೆಯೋ ಅವುಗಳನ್ನು ಜಿಬಿಎಗೆ ಸೇರಿಸಿಕೊಳ್ಳುವ ನಿರೀಕ್ಷೆ ಇದೆ.

ಹೊಸ ಪ್ರದೇಶಗಳು ಸೇರಿಕೊಂಡರೆ ಮೂರು ತಿಂಗಳಲ್ಲಿ ಅವುಗಳ ವಾರ್ಡ್‌ಗಳನ್ನು ಮರು ವಿಂಗಡಿಸಿ, ನಗರ ಪಾಲಿಕೆಗಳಿಗೆ ಸೇರಿಸಬೇಕು. ಅಂದರೆ, ಮೂರು ತಿಂಗಳು ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಪ್ರಕ್ರಿಯೆಗಳೂ ನಡೆಯುವುದಿಲ್ಲ.

ನಗರ ಪಾಲಿಕೆಗಳ ಚುನಾವಣೆ ಇನ್ನಾರು ತಿಂಗಳು ಮುಂದಕ್ಕೆ ಹೋದದಂತಾಗುತ್ತದೆ ಎಂದು ಹೇಳಲಾಗಿದೆ.

> **ಪ್ರತಿ 20 ಸಾವಿರ ಜನಸಂಖ್ಯೆಗೆ 600ಕ್ಕೂ ಹೆಚ್ಚು ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಲು ಹೊರಟಿರುವುದು ಸಂವಿಧಾನಕ್ಕೆ ವಿರುದ್ಧವಾದುದು. ಕಡ್ಡಾಯ ಚುನಾವಣೆಗಳನ್ನು ನಡೆಸುವ ಬದಲು ಎಲ್ಲಾ ವಾರ್ಡ್‌ಗಳಿಗೆ ಕಾರ್ಪೊರೇಟರ್‌ಗಳನ್ನು ನಾಮ ನಿರ್ದೇಶನ ಮಾಡುವುದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ .**
> -ಬಿಬಿಎಂಪಿಯ ಮಾಜಿ ವಿರೋಧ ಪಕ್ಷದ ನಾಯಕ ಪದ್ಮನಾಭ ರೆಡ್ಡಿ

## ಸಿಲಿಕಾನ್ ಸಿಟಿ ಗಢಗಢ: ಚಳಿಗೆ ತತ್ತರಿಸಿದ ಬೆಂಗಳೂರು

• ಉದಯವಾಹಿನಿ, ಬೆಂಗಳೂರು

ಉದ್ಯಾನನಗರಿ ಬೆಂಗಳೂರಿನಲ್ಲಿ ದಿನೇ ದಿನೇ ಚಳಿ ಹೆಚ್ಚಾಗುತ್ತಿದ್ದು, ಚಳಿಗೆ ಬೆಂಗಳೂರು ಮಂದಿ ತತ್ತರಿಸಿ ಹೋಗಿದ್ದಾರೆ. ಚಳಿಯಲ್ಲೂ ಬೆಂಗಳೂರು ದಾಖಲೆ ಬರೆದಿದೆ. ಹೌದು.. ಬೆಂಗಳೂರಿನಲ್ಲಿ ಕನಿಷ್ಟ ತಾಪಮಾನ 10ಡಿಗ್ರಿಗೆ ಇಳಿಕೆಯಾಗಿದ್ದು, 9 ವರ್ಷಗಳಲ್ಲೇ ಡಿಸೆಂಬರ್‌ನಲ್ಲಿ ಅತ್ಯಂತ ಕನಿಷ್ಠ ತಾಪಮಾನ ದಾಖಲಾಗಿದೆ. ಇಂದು ಬೆಂಗಳೂರಿನಲ್ಲಿ ತಾಪಮಾನ 10ಕ್ಕೆ ಕುಸಿದಿದ್ದು, ಇದು ಕಳೆದ 9 ವರ್ಷಗಳಲ್ಲೇ ನಗರದಲ್ಲಿ ದಾಖಲಾದ ಅತ್ಯಂತ ಕನಿಷ್ಠ ತಾಪಮಾನವಾಗಿದೆ.

ಬೆಂಗಳೂರು ದಕ್ಷಿಣದಲ್ಲಿ 10.1 ಡಿಗ್ರಿ ತಾಪಮಾನ ದಾಖಲಾಗಿದ್ದು, ಬೆಂಗಳೂರು ಗ್ರಾಮಾಂತರದಲ್ಲಿ 10.4 ಡಿಗ್ರಿ ತಾಪಮಾನ ದಾಖಲಾಗಿದೆ. ಅಂತೆಯೇ ಬೆಂಗಳೂರು ನಗರದಲ್ಲಿ 10.8 ಡಿಗ್ರಿ ತಾಪಮಾನ ದಾಖಲಾಗಿದೆ. ಅಂತೆಯೇ ಮುಂಬರುವ ವಾರದಲ್ಲಿ ರಾತ್ರಿ ತಾಪಮಾನದಲ್ಲಿ ತೀವ್ರ ಇಳಿಕೆಯಾಗುವ



ಉದಯವಾಹಿನಿ ಚಿತ್ರ

ಮುನ್ಸೂಚನೆ ನೀಡಿರುವುದರಿಂದ ನಗರವು ತೀವ್ರ ಚಳಿಗಾಲಕ್ಕೆ ಸಜ್ಜಾಗುತ್ತಿದೆ.

ಬೆಂಗಳೂರಿನಲ್ಲಿ ಕನಿಷ್ಠ ತಾಪಮಾನವು 12 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದ್ದು, ಇದು 2016ರ ನಂತರ ಡಿಸೆಂಬರ್‌ನಲ್ಲಿ ದಾಖಲಾದ ಅತ್ಯಂತ ಕನಿಷ್ಠ ತಾಪಮಾನವಾಗಿದೆ. ಚಳಿಯೊಂದಿಗೆ ಮಂಜು ಕವಿದ ಬೆಳಗಿನ ಸಮಯ, ಒಣ ಗಾಳಿ ಮತ್ತು ಸ್ಪಷ್ಟ ಆಕಾಶ ಇರುತ್ತದೆ.

ಇವು ದಕ್ಷಿಣ ಭಾರತದಲ್ಲಿ ಚಳಿಗಾಲವನ್ನು ತೀವ್ರಗೊಳಿಸುವ ಪರಿಸ್ಥಿತಿಗಳಾಗಿವೆ ಎಂದು ಹವಾಮಾನ ಇಲಾಖೆ ಹೇಳಿದೆ. ಕಳೆದ ವಾರದಲ್ಲಿ, ಬೆಂಗಳೂರಿನ ಕನಿಷ್ಠ ತಾಪಮಾನವು 16°C ಸುತ್ತಲೂ ಇದ್ದು ಈಗಾಗಲೇ ನಿವಾಸಿಗಳಿಗೆ ಋತುವಿನ ಚಳಿಯ ರುಚಿಯನ್ನು ನೀಡಿದೆ. ಆದರೆ ಮುಂಬರುವ ವಾರದಲ್ಲಿ ತಾಪಮಾನ ಮತ್ತಷ್ಟು ಕುಸಿತವಾಗುವ ಸಾಧ್ಯತೆ ಇದ್ದು, ತಾಪಮಾನ 12° C ಮತ್ತು 14° C ನಡುವೆ ಏರಿಳಿತಗೊಳ್ಳುವ ಸಾಧ್ಯತೆಯಿದೆ ಎಂದು IMD ಅಧಿಕಾರಿಗಳು ಹೇಳಿದ್ದಾರೆ. ದೀರ್ಘಾವಧಿಯ ಡಿಸೆಂಬರ್ ಸರಾಸರಿ 16.4° C ಗಿಂತ ಕಡಿಮೆ, ಇದು ಸಾಮಾನ್ಯಕ್ಕಿಂತ ಬಲವಾದ ಚಳಿಗಾಲವನ್ನು ಸೂಚಿಸುತ್ತದೆ.

**9 ವರ್ಷಗಳಲ್ಲಿ ಕನಿಷ್ಠ ತಾಪಮಾನ:** ಇನ್ನು ಬೆಂಗಳೂರು ಒಂಬತ್ತು ವರ್ಷಗಳ ಹಿಂದೆ ಅಂದರೆ ಡಿಸೆಂಬರ್ 11, 2016 ರಂದು ದಾಖಲಾದ 12° C ಗಿಂತ ಕಡಿಮೆ ತಾಪಮಾನ ಈ ವರೆಗೆ ಬೆಂಗಳೂರಿನಲ್ಲಿ ದಾಖಲಾದ ಕನಿಷ್ಠ ತಾಪಮಾನವಾಗಿದೆ. ಆದರೆ ಡಿಸೆಬಂರ್ 12ರಂದು ಬೆಂಗಳೂರನಲ್ಲಿ ಮತ್ತೆ 12 ಡಿಗ್ರಿ ತಾಪಮಾನ ದಾಖಲಾಗಿತ್ತು.

## ಹೊಸ ರಾಜಕೀಯ ಪಕ್ಷ ಸ್ಥಾಪಿಸುವುದಾಗಿ ಸಿಎಂ ಇಬ್ರಾಹಿಂ ಘೋಷಣೆ

• ಉದಯವಾಹಿನಿ, ಬೆಂಗಳೂರು



ಶೀಘ್ರದಲ್ಲೇ ಹೊಸ ರಾಜಕೀಯ ಪಕ್ಷ ಸ್ಥಾಪಿಸುವುದಾಗಿ ಕೇಂದ್ರದ ಮಾಜಿ ಸಚಿವ ಸಿಎಂ ಇಬ್ರಾಹಿಂ ಅವರು ಘೋಷಣೆ ಮಾಡಿದ್ದಾರೆ. ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಿಗಾಗಿ ಮೂರನೇ ಶಕ್ತಿಯನ್ನು ತರಲು ಸಿದ್ಧನಾಗಿದ್ದೇನೆ, ಪಕ್ಷದ ಚಿಹ್ನೆ ನಿರ್ಧರಿಸಲು ಕಲಬುರಗಿಯಲ್ಲಿ ಸಭೆ ನಡೆಸಲಾಗುವುದು. ನಂತರ ಮೈಸೂರು ಮತ್ತು ಬೆಳಗಾವಿಯಲ್ಲಿ ಸಮಾನ ಮನಸ್ಕ ಜನರ ಸಭೆಗಳನ್ನು ನಡೆಸಲಾಗುವುದು. ನಮ್ಮ ಹೊಸ ಪಕ್ಷ ಬಸವಣ್ಣ, ಡಾ. ಬಿ. ಆರ್. ಅಂಬೇಡ್ಕರ್ ಅವರ ಸಿದ್ಧಾಂತವನ್ನು ಅಳವಡಿಸಿಕೊಳ್ಳಲಿದೆ ಎಂದು ಹೇಳಿದರು.

ರಾಜ್ಯದ ಯಾವುದೇ ರಾಜಕೀಯ ಪಕ್ಷವು ದಲಿತ ಮತ್ತು ಮುಸ್ಲಿಂ ಮುಖ್ಯಮಂತ್ರಿಯಾಗಬೇಕೆಂದು ಹೇಳಲು ಸಿದ್ಧರಿಲ್ಲ. ಐದು ವರ್ಷಗಳ ಕಾಲ ಪರ್ಯಾಯ ಅಧಿಕಾರಕ್ಕಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಹೊಂದಾಣಿಕೆ ಮಾಡಿಕೊಂಡಂತೆ ಕಾಣುತ್ತಿದೆ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ ಕೆ ಶಿವಕುಮಾರ್ ನಡುವಿನ ಕುರ್ಚಿ ಕಿತ್ತಾಟದ ವಿಚಾರದಲ್ಲಿ ಕರ್ನಾಟಕ ಇಬ್ಭಾಗ ಆಗುತ್ತದೆ, ಇವತ್ತು ರಾಜ್ಯ ಸರ್ಕಾರ ಸಂಪೂರ್ಣ ವೈಫಲ್ಯವಾಗಿದೆ. ಒಂದೊಂದು ವಸ್ತುಗಳ ಬೆಲೆ ಹೆಚ್ಚಳವಾಗಿದೆ. ನಮ್ಮ ಹೊಸ ಪಕ್ಷಕ್ಕೆ ಎಲ್ಲಾರ ಸಹಕಾರ ಬೇಕು. ರಾಜ್ಯದ ಜನ ಸಂಕಷ್ಟದಲ್ಲಿದ್ದಾರೆ. ಸರ್ಕಾರಗಳು ಕೆಲಸ ಮಾಡುತ್ತಿಲ್ಲ. ನಾನು, ನೀನು, ಎನ್ನುವ ಹೋರಾಟ ನಡೆಯುತ್ತಿದೆ. ಬೆಳಗಾವಿಯಲ್ಲಿ ಡಿನ್ನರ್ ಮಾಡುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಕರ್ನಾಟಕ ಎರಡು ಭಾಗವಾಗುತ್ತದೆ. ಹೀಗಾಗಿ ಜನರಿಗಾಗಿ ನಾವು ಒಂದು ಪಕ್ಷವನ್ನ ಸ್ಥಾಪನೆ ಮಾಡುತ್ತಿದ್ದೇವೆ. ಎಲ್ಲಾ ಪಕ್ಷಗಳು ನಮ್ಮನ್ನ ಬಳಸಿಕೊಳ್ಳಕೊಂಡರು, ಆದರೆ, ಏನು ಮಾಡಲಿಲ್ಲ ಎಂದು ಕಿಡಿ ಕಾರಿದರು.

## ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮಹಿಳಾ ಸಿಬ್ಬಂದಿಗೆ ಸೀಮಂತ ಶಾಸ್ತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಪರಪ್ಪನ ಅಗ್ರಹಾರ ಎಂದರೆ ಎಲ್ಲರ ತಲೆಗೆ ಬರುವುದು ಅಲ್ಲಿ ಕೈದಿಗಳು ಶಿಕ್ಷೆಯನ್ನು ಅನುಭವಿಸುತ್ತಿರುತ್ತಾರೆ ಅಂತಾನೇ. ಆದರೆ ಕಾನೂನು ಪಾಲಿಸುವ ಪೊಲೀಸರ ಗಂಭೀರ ವಾತವರಣವಿರುವ ಪರಪ್ಪನ ಅಗ್ರಹಾರದಲ್ಲಿ ಇತ್ತೀಚೆಗೊಂದು ವಿಶೇಷ ಸಂಭ್ರಮ ಮನೆಮಾಡಿತ್ತು. ಜೈಲಿನ ಪೊಲೀಸ್ ಸಿಬ್ಬಂದಿಗಳು ತಮ್ಮ ಮಹಿಳಾ ಸಿಬ್ಬಂದಿಯೊಬ್ಬರಿಗೆ ಸೀಮಂತ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಿದ್ದಾರೆ.

**ಪರಪ್ಪನ ಅಗ್ರಹಾರದಲ್ಲಿ ಪೇದೆಗೆ ಸೀಮಂತ ಸಂಭ್ರಮ:**

- ಪರಪ್ಪನ ಅಗ್ರಹಾರ ಜೈಲಿನಲ್ಲಿ ಮಹಿಳಾ ಪೊಲೀಸ್ ಪೇದೆ ಉಮಾ ಅವರಿಗೆ ಸೀಮಂತ ಕಾರ್ಯಕ್ರಮ
- ಸಂಪ್ರದಾಯಬದ್ಧವಾಗಿ ನಡೆದ ಸೀಮಂತ ಶಾಸ್ತ್ರಕ್ಕೆ ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ಪೊಲೀಸ್ ಠಾಣೆ
- ಸಹೋದ್ಯೋಗಿ ರಜೆ ಬಿಳ್ಕೊಡುಗೆಗಾಗಿ ಪರಪ್ಪನ ಅಗ್ರಹಾರ ಠಾಣೆ ಮಾಡಿದ ಕಾರ್ಯ ಮೆಚ್ಚುಗೆಗೆ ಪಾತ್ರವಾಗುವಂತಿದೆ

ಪರಪ್ಪನ ಅಗ್ರಹಾರ ಜೈಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತುಂಬು ಗರ್ಭಿಣಿಯಾಗಿರುವ ಮಹಿಳಾ ಪೊಲೀಸ್ ಪೇದೆ ಉಮಾ ಅವರಿಗೆ ಹೆರಿಗೆ ರಜೆ ನೀಡುವ ಮುನ್ನ ಸೀಮಂತ ಕಾರ್ಯಕ್ರಮ ಆಯೋಜಿಸಿ, ಸಂಭ್ರಮಿಸಿದ್ದಾರೆ. ಠಾಣೆಯ ಇನ್ಸ್‌ಪೆಕ್ಟರ್ ಸತೀಶ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮ, ಪೊಲೀಸ್ ಠಾಣೆಯ ಗಂಭೀರ ವಾತಾವರಣದ ನಡುವೆಯೂ ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಯಿತು. ಈ ಸೀಮಂತ ಕಾರ್ಯಕ್ರಮದ ಬಳಿಕ ಮಾತನಾಡಿದ ಪೊಲೀಸ್ ಸಿಬ್ಬಂದಿಯೊಬ್ಬರು ಇಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲರೂ ಕೇವಲ ಸಹೋದ್ಯೋಗಿಗಳಲ್ಲ, ನಾವೆಲ್ಲರೂ ಒಂದೇ ಕುಟುಂಬದವರು. ಉಮಾ ಅವರು ನಮ್ಮೆಲ್ಲರ ಸಹೋದರಿ ಇದ್ದಂತೆ.

ಹೀಗಾಗಿ ಆಕೆಗೆ ಶುಭ ಕೋರುವುದು ನಮ್ಮೆಲ್ಲರ ಕರ್ತವ್ಯವಾಗಿತ್ತು. ಠಾಣೆಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು ನಮಗೆಲ್ಲ ಸಂತೋಷ ತಂದಿದೆ ಎಂದು ತಮ್ಮ ಸಂತಸವನ್ನು ಹಂಚಿಕೊಂಡಿದ್ದಾರೆ.

ಪೊಲೀಸರೆಂದರೆ ಗಂಭೀರ ಸ್ವಾಭಾವದವರು, ಅವರಲ್ಲಿ ಸಂಭ್ರಮಗಳಲ್ಲಿ ಭಾಗವಹಿಸುವಷ್ಟು ಸಮಯವಾಗಲಿ ಅಥವಾ ಅಂತಹ ಮನಸ್ಥಿತಿಯಾಗಲಿ ಅವರಿಗೆ ಇರುವುದಿಲ್ಲ ಎಂಬ ಸಾಮಾನ್ಯ ಕಟ್ಟುಪಾಡುಗಳು ಭಾವನೆಗಳನ್ನು ಮೀರಿ ಪರಪ್ಪನ ಅಗ್ರಹಾರ ಠಾಣೆಯಲ್ಲಿ ತಮ್ಮ ಸಹೋದ್ಯೋಗಿಯನ್ನು ತಮ್ಮ ಮನೆಮಗಳಂತೆಯೇ ಆಕೆಯ ಸಂಭ್ರಮದಲ್ಲಿ ಭಾಗಿಯಾಗಿರುವುದು ಮೆಚ್ಚುಗೆಗೆ ಪಾತ್ರವಾಗಿದೆ.



ಉದಯವಾಹಿನಿ ಚಿತ್ರ


### ಸಂಭ್ರಮಕ್ಕಾಗಿ ಸಿಂಗಾರಗೊಂಡು ಪೊಲೀಸ್ ಠಾಣೆ

**ಈ ವಿಶೇಷ ಕಾರ್ಯಕ್ರಮಕ್ಕಾಗಿ ಠಾಣೆಯ ಆವರಣ ಹೂವಿನ ಮಾಲೆಗಳು ಮತ್ತು ರಂಗೋಲಿಯಿಂದ ಕಚೇರಿ ಕಂಗೊಳಿಸುತ್ತಿತ್ತು. ಪೇದೆ ಉಮಾ ಅವರಿಗೆ ಎಲ್ಲಾ ಸಂಪ್ರದಾಯಬದ್ಧ ಶಾಸ್ತ್ರಗಳನ್ನು ನೆರವೇರಿಸಲಾಗಿದೆ. ಠಾಣೆಯ ಎಲ್ಲಾ ಪುರುಷ, ಮಹಿಳಾ ಸಹೋದ್ಯೋಗಿಗಳು, ಉಮಾ ಅವರಿಗೆ ಪ್ರೀತಿಯಿಂದ ಸೀಮಂತದ ಉಡುಗೊರೆಗಳನ್ನು ನೀಡಿ, ತಾಯಿ ಮತ್ತು ಮಗುವಿನ ಆರೋಗ್ಯಕ್ಕಾಗಿ ಶುಭ ಹಾರೈಸಿದ್ದಾರೆ. ಪರಪ್ಪನ ಅಗ್ರಹಾರ ಪೊಲೀಸರು ತೋರಿದ ಈ ಅನಿರೀಕ್ಷಿತ ಪ್ರೀತಿ ಮತ್ತು ಗೌರವ ಉಮಾ ಅವರ ಕಣ್ಣಂಚಿನಲ್ಲಿ ಆನಂದ ಭಾಷ್ಪ ಸುರಿಸುವಂತೆ ಮಾಡಿದೆ.**

## ಪಿಟಿಸಿಎಲ್ ಪ್ರಕರಣ; 28 ವರ್ಷಗಳ ನಂತರದ ಅರ್ಜಿ ಅಮಾನ್ಯ : ಹೈಕೋರ್ಟ್ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿ, ಪಂಗಡಗಳ ಸಮುದಾಯದವರಿಗೆ ಸರ್ಕಾರದಿಂದ ಮಂಜೂರಾದ ಜಮೀನನ್ನು ಮಾರಾಟ ಮಾಡಿದ ಬಳಿಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ಕೆಲವು ಜಮೀನುಗಳ ಪರಾಭಾರೆ ನಿರ್ಬಂಧ-ಪಿಟಿಸಿಎಲ್) ಕಾಯ್ದೆಯಡಿ ಮರು ಸ್ಥಾಪನೆ ಕೋರಿ 28 ವರ್ಷಗಳ ಬಳಿಕ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.'ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಈ ಅವಧಿಯನ್ನು ಸಮಂಜಸ ಅವಧಿ ಎಂದು ಪರಿಗಣಿಸಲು ಆಗದು ಎಂದು ನ್ಯಾಯಮೂರ್ತಿ ಅನು ಶಿವರಾಮನ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.



ಸರ್ಕಾರದಿಂದ ಮಂಜೂರಾಗಿದ್ದ ಜಮೀನನ್ನು ಮಾರಾಟ ಮಾಡಿದ ಬಳಿಕ ಮತ್ತೆ ಜಮೀನಿನ ಮೇಲೆ ತಮ್ಮ ಹಕ್ಕುಗಳನ್ನು ಪುನರ್‌ಸ್ಥಾಪಿಸಿ ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಲಾದ ಮೇಲ್ಮನವಿಯಲ್ಲಿ ಈ ಕುರಿತಂತೆ ಆದೇಶಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯ ವಿನೋಬಾ ನಗರದ ನಿವಾಸಿಗಳಾದ ಪೂಜಾರಿ ನಾರಾಯಣಪ್ಪ ಮತ್ತು ಅವರ ವಾರಸುದಾರರು ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಈ ಕುರಿತಂತೆ ಆದೇಶ ಹೊರಡಿಸಲಾಗಿದೆ.

# ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯಿದೆಗೆ ಹೊಸ ರೂಪ

### ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ, ನಿರ್ವಹಣೆ ವಿಧೇಯಕ 2025 ಅನ್ನು ಜಾರಿಗೆ ತರಲು ರಾಜ್ಯ ಸರ್ಕಾರದಿಂದ ಸಿದ್ಧತೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ಲಕ್ಷಾಂತರ ನಿವಾಸಿಗಳು ಮತ್ತು ಮಾಲೀಕರ ಹಿತಾಸಕ್ತಿಗಳನ್ನು ರಕ್ಷಿಸಲು, ರಾಜ್ಯ ಸರ್ಕಾರವು ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣೆ ವಿಧೇಯಕ 2025 ಅನ್ನು ಜಾರಿಗೆ ತರಲು ಯೋಜಿಸುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಬಹುನಿರೀಕ್ಷಿತ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ಮಸೂದೆ 2025 ರ ಅನುಮೋದನೆಯು, ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಚುನಾವಣೆಗಳ ಫಲಿತಾಂಶದ ಮೇಲೆ ನಿರ್ಧಾರವಾಗುವ ಸಾಧ್ಯತೆಯಿದೆ.

ಈ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆ ವತಿಯಿಂದ ವಿಧಾನಸೌಧದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮತ್ತು ಬೆಂಗಳೂರು ಅಪಾರ್ಟ್‌ಮೆಂಟ್ಸ್ ಫೆಡರೇಷನ್ ಸದಸ್ಯರು ಅಪಾರ್ಟ್‌ಮೆಂಟ್ ಮಾಲೀಕರೊಂದಿಗೆ ಶಿವಕುಮಾರ್ ಅವರು ಸಂವಾದನಡೆಸಿದ್ದಾರೆ. ಪ್ರಸ್ತಾವಿತ ವಿಧೇಯಕವನ್ನು ಅಂತಿಮಗೊಳಿಸುವ ಮೊದಲು ಎಲ್ಲಾ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಿ, ಅವರ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

**ಅಪಾರ್ಟ್‌ಮೆಂಟ್ ಮಾಲೀಕರ ಮಸೂದೆ ಎಂದರೇನು:** ಅಪಾರ್ಟ್‌ಮೆಂಟ್ ಮಾಲೀಕರ ಮಸೂದೆಯು (ಉದಾ: ಭಾರತದ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯಿದೆ, 1972) ಪ್ರತ್ಯೇಕ ಅಪಾರ್ಟ್‌ಮೆಂಟ್‌ಗಳ ಮಾಲೀಕತ್ವ, ನಿರ್ವಹಣೆ ಮತ್ತು ವರ್ಗಾವಣೆಗೆ ಕಾನೂನು ಚೌಕಟ್ಟನ್ನು ಸೃಷ್ಟಿಸುವ ಒಂದು ರಾಜ್ಯ-ನಿರ್ದಿಷ್ಟ ಕಾನೂನಾಗಿದೆ. ಇದು ಅಪಾರ್ಟ್‌ಮೆಂಟ್‌ನ ಘಟಕಗಳನ್ನು ರಿಯಲ್ ಎಸ್ಟೇಟ್ ಆಸ್ತಿಯನ್ನಾಗಿ ಮಾಡುತ್ತದೆ. ಇದು ವೈಯಕ್ತಿಕ ಅಪಾರ್ಟ್‌ಮೆಂಟ್‌ಗಳನ್ನು ಪರಭಾರೆ ಮತ್ತು ಉತ್ತರಾಧಿಕಾರ ಮಾಡಲು ಅನುಮತಿಸುತ್ತದೆ. ಅಪಾರ್ಟ್‌ಮೆಂಟ್, ಸಾಮಾನ್ಯ ಪ್ರದೇಶಗಳು, ಘೋಷಣೆ, ಮತ್ತು ಸಂಘ ದಂತಹ ಪ್ರಮುಖ ಪದಗಳಿಗೆ ಸ್ಪಷ್ಟ ವ್ಯಾಖ್ಯಾನಗಳನ್ನು ನೀಡುತ್ತದೆ. ಲಿಫ್ಟ್‌ಗಳು, ಈಜುಕೊಳಗಳು, ಉದ್ಯಾನವನಗಳಂತಹ ಹಂಚಿಕೆಯ ಸೌಲಭ್ಯಗಳ ನಿರ್ವಹಣೆ ಮತ್ತು ಪಾಲನೆಯನ್ನು ನಿಯಂತ್ರಿಸುತ್ತದೆ.



ಉದಯವಾಹಿನಿ ಚಿತ್ರ



**ಪ್ರಸ್ತಾವಿತ ಮಸೂದೆಯಲ್ಲಿನ ಪ್ರಮುಖ ಅಂಶಗಳೇನು?:**

- **ಎಂಟು ಅಥವಾ ಅದಕ್ಕಿಂತ ಹೆಚ್ಚಿನ ಅಪಾರ್ಟ್‌ಮೆಂಟ್‌ಗಳನ್ನು ಹೊಂದಿರುವ ಯೋಜನೆಗಳಿಗೆ ಈ ಮಸೂದೆ ಅನ್ವಯಿಸುತ್ತದೆ.**
- **ಸಂಘಗಳ ನೋಂದಣಿ, ಉಪ-ಕಾನೂನುಗಳ ಅನುಮೋದನೆ** ಮತ್ತು ಮೇಲ್ವಿಚಾರಣೆಯನ್ನು ನಗರಾಭಿವೃದ್ಧಿ ಇಲಾಖೆಯು ನಿರ್ವಹಿಸುತ್ತದೆ. ಇದು ಈ ಹಿಂದೆ ಇದ್ದ ಅಧಿಕಾರ ವ್ಯಾಪ್ತಿಯ ಗೊಂದಲಗಳನ್ನು ನಿವಾರಿಸುತ್ತದೆ.
- **ನಿರ್ವಹಣಾ ಶುಲ್ಕಗಳನ್ನು ಪ್ರತಿ ಅಪಾರ್ಟ್‌ಮೆಂಟ್‌ನ ಸೂಪರ್ ಬಿಲ್ಟ್-ಅಪ್ ಏರಿಯಾಗೆ ಅನುಗುಣವಾಗಿ ವಿಧಿಸಲಾಗುತ್ತದೆ.**
- **ಪ್ರಸ್ತುತ ಕಾಯಿದೆಯಡಿಯಲ್ಲಿ ರಚನೆಯಾಗಿರುವ ಅಸ್ತಿತ್ವದಲ್ಲಿರುವ ಸಂಘಗಳನ್ನು ಹೊಸ ಮಸೂದೆಯಡಿಯಲ್ಲಿ ಹಂಚಿಕೆದಾರರ ಸಂಘಗಳೆಂದು ಪರಿಗಣಿಸಲಾಗುತ್ತದೆ.**
- **ಶೇ. 50 ಕ್ಕಿಂತ ಹೆಚ್ಚು ಬುಕಿಂಗ್‌ಗಳು ಆದ ಮೂರು ತಿಂಗಳೊಳಗೆ ಕಡ್ಡಾಯವಾಗಿ ಸಂಘಗಳನ್ನು ರಚಿಸಬೇಕು. ಕ್ಲಬ್‌ಹೌಸ್, ಈಜುಕೊಳ, ಅಂಗಡಿಗಳಂತಹ ವಾಣಿಜ್ಯ ಸೌಲಭ್ಯಗಳನ್ನು ಬಳಸಿದರೆ, ಸಾಮಾನ್ಯ ನಿರ್ವಹಣಾ ಶುಲ್ಕದ ಜೊತೆಗೆ ಪ್ರತ್ಯೇಕ ಬಳಕೆ ಶುಲ್ಕಗಳನ್ನು ವಿಧಿಸಲು ಅನುಮತಿ ನೀಡಲಾಗುತ್ತದೆ.**
- **ಮಸೂದೆ ಜಾರಿಯಾದ 12 ತಿಂಗಳೊಳಗೆ ಸಾಮಾನ್ಯ ಪ್ರದೇಶಗಳಿಗಾಗಿ ಪ್ರತ್ಯೇಕ ದಸ್ತಾವೇಜುಗಳನ್ನು ಪೂರ್ಣಗೊಳಿಸಬೇಕು. ಅಪಾರ್ಟ್‌ಮೆಂಟ್ ಮಾಲೀಕರ ಶೇ. 75 ರಷ್ಟು ಅನುಮೋದನೆಯೊಂದಿಗೆ ಪುನರಾಭಿವೃದ್ಧಿಗೆ ಅವಕಾಶ ಕಲ್ಪಿಸಲಾಗಿದೆ.**
- **ಸಾಮಾನ್ಯ ಪ್ರದೇಶಗಳು ಮತ್ತು ಸೌಲಭ್ಯಗಳ ಕೆಳಗಿರುವ ಭೂಮಿಯನ್ನು ಘಟಕದ ಪ್ರದೇಶಕ್ಕೆ ಅನುಗುಣವಾಗಿ ಅಪಾರ್ಟ್‌ಮೆಂಟ್ ಮಾಲೀಕರಿಗೆ ಅವಿಭಜಿತ ಪಾಲಾಗಿ ವರ್ಗಾಯಿಸಲಾಗುತ್ತದೆ.**

### ಪ್ರಸ್ತಾವಿತ ಹೊಸ ಮಸೂದೆಯ ಪ್ರಮುಖ ಬೇಡಿಕೆಗಳು

- **ಸಾರ್ವಜನಿಕ ಸಮಾಲೋಚನೆಯಲ್ಲಿ ಅಪಾರ್ಟ್‌ಮೆಂಟ್ ನಿವಾಸಿಗಳು ಮತ್ತು ಸಂಘಟನೆಗಳು ಸರ್ಕಾರಕ್ಕೆ ಈ ಕೆಳಗಿನ ಪ್ರಮುಖ ಬೇಡಿಕೆಗಳನ್ನು ಸಲ್ಲಿಸಿವೆ.**
- **ನಿವಾಸಿಗಳ ಕಲ್ಯಾಣ ಸಂಘಟನೆಗಳ ರಚನೆಯಲ್ಲಿ ಸರ್ಕಾರದ ನೇರ ಹಸ್ತಕ್ಷೇಪ ಇರಬಾರದು. ಹೊಸ ಮಸೂದೆಯನ್ನು ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಬೇಕು.**
- **ಬಿಲ್ಡರ್‌ಗಳು ನಿಗದಿತ ಗಡುವಿನೊಳಗೆ ಭೂಮಿ ಮತ್ತು ಸಾಮಾನ್ಯ ಪ್ರದೇಶಗಳನ್ನು ಮಾಲೀಕರ ಸಂಘಗಳಿಗೆ ಹಸ್ತಾಂತರಿಸಲು ಗಡುವು ನಿಗದಿಪಡಿಸಬೇಕು.**
- **ನ್ಯಾಯಾಲಯಗಳ ಮೇಲಿನ ಹೊರೆ ಕಡಿಮೆ ಮಾಡಲು, ಸಂಘರ್ಷಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಸಮರ್ಥ ಪ್ರಾಧಿಕಾರವನ್ನು ಸ್ಥಾಪಿಸಬೇಕು.**
- **ಹೊಸ ಕಾಯಿದೆಯು ಸಾಕುಪ್ರಾಣಿಗಳು, ಸಾಮಾನ್ಯ ಪ್ರದೇಶಗಳ ಬಳಕೆ ಮುಂತಾದ ನಿಯಮಗಳನ್ನು ರೂಪಿಸದ ವಿಷಯ ಮೇಲೆ ಕೇಂದ್ರೀಕರಿಸಬೇಕು.**

# ತಮಿಳುನಾಡಿನಲ್ಲಿ ಕನ್ನಡ ಬಾವುಟ ತೆರವಿಗೆ ಬಲವಂತ

## ತಮಿಳುನಾಡಿನ ಕೆಲ ಕಿಡಿಗೇಡಿಗಳು ದೌರ್ಜನ್ಯ ಎಸಗುತ್ತಿರುವ ಕೃತ್ಯ ಕನ್ನಡಾಭಿಮಾನಿಗಳ ಕಣ್ಣು ಕೆಂಪಗಾಗಿಸುವಂತೆ ಮಾಡಿದೆ

• ಉದಯವಾಹಿನಿ, ಗುಂಡ್ಲುಪೇಟೆ

ಶಬರಿಮಲೇ ಯಾತ್ರೆಗೆ ತೆರಳುವ ಕರ್ನಾಟಕದ ಟಿಟಿ ವಾಹನ ಹಾಗೂ ಕಾರುಗಳಲ್ಲಿನ ಕನ್ನಡ ಬಾವುಟವನ್ನ ತೆರವು ಮಾಡುವಂತೆ ತಮಿಳುನಾಡಿನ ಕೆಲ ಕಿಡಿಗೇಡಿಗಳು ದೌರ್ಜನ್ಯ ಎಸಗುತ್ತಿರುವ ಕೃತ್ಯ ಕನ್ನಡಾಭಿಮಾನಿಗಳ ಕಣ್ಣು ಕೆಂಪಗಾಗಿಸುವಂತೆ ಮಾಡಿದೆ.

ಅಯ್ಯಪ್ಪನ ಭಕ್ತರ ಜೊತೆಗೆ ನಾವು ಕನ್ನಡಿಗರು ಎಂಬ ಗರ್ವದಿಂದ ಸ್ವಾಭಿಮಾನದ ಸಂಕೇತವಾದ ಕನ್ನಡ ಭಾವುಟವನ್ನ ತಮ್ಮ ತಮ್ಮ ವಾಹನಗಳಿಗೆ ಕಟ್ಟಿ ತೆರಳುತ್ತಿರುವ ಯಾತ್ರಾರ್ಥಿಗಳ ಮೇಲೆ ತಮಿಳುನಾಡಿನ ಕೆಲ ಪುಂಡರು ಅಟ್ಟಹಾಸ ಮೆರೆಯುತ್ತಿರುವುದಕ್ಕೆ ಸಾಕ್ಷಿಯಾಗಿ ಕೆಲ ವಿಡಿಯೋ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಇ ಕೆ ಸಿಲಂಬರಸನ್ ಎಂಬ ವ್ಯಕ್ತಿ ಕನ್ನಡ ಭಾವುಟವನ್ನ ತೆಗೆದು ದೇಗುಲ ದರ್ಶನಕ್ಕೆ ಹೋಗುವಂತೆ ಧಮ್ಕಿ ಹಾಕಿದ್ದಲ್ಲದೆ ಏನಾದರೂ ಅನಾಹುತ ಸಂಭವಿಸಿದ್ದೆಯಾದಲ್ಲಿ ನಾವು ಜವಬ್ದಾರರಲ್ಲ ಎಂದು ಬೆದರಿಕೆ ಹಾಕುವ ಮೂಲಕ ಕನ್ನಡಿಗರ ಕೆಂಗಣ್ಣಿಗೆ ಗುರಿಯಾಗಿದ್ದಾನೆ. ಭಾವುಟ ತೆಗೆಯದಿದ್ದಲ್ಲಿ ಕಲ್ಲಿನಿಂದ ಕಿಟಕಿ ಗ್ಲಾಸ್‌ಗಳನ್ನ ಪುಡಿಪುಡಿ ಮಾಡುತ್ತೇನೆ ಎಂದು ಜೋರು ಶಬ್ದದಲ್ಲಿ ಅರಚಾಟ ನಡೆಸಿರುವುದು ಬೆಳಕಿಗೆ ಬಂದಿದೆ. ತಮಿಳುನಾಡಿನ ಕೆಲ ಕಿಡಿಗೇಡಿಗಳ ಅಸಭ್ಯ ವರ್ತನೆ ಕನ್ನಡಿಗರನ್ನ ಕೆರಳಿಸಿದೆ ನಮ್ಮಲ್ಲಿಯೂ ಸಹ ತಮಿಳಿಗರಿದ್ದು ಮುಂದೆ ಸಂಭವಿಸಬಹುದಾದ ಅನಾಹುತಗಳಿಗೆ ನೇರವಾಗಿ ತಮಿಳಿಗರೆ ಕಾರಣರಾಗಬೇಕಾಗುತ್ತದೆ, ಕನ್ನಡಿಗರು ಸಹಿಷ್ಣುಗಳು ಆದರೆ ಹೇಡಿಗಳಲ್ಲ ತಮಿಳರು ತಮ್ಮ ಪುಂಡಾಟಿಕೆಯನ್ನು ನಿಲ್ಲಿಸಬೇಕು, ಕನ್ನಡಿಗರ ಆಕ್ರೋಶ ಸ್ಫೋಟವಾದಲ್ಲಿ ಸರಿಯಾದ ಬೆಲೆ ತೆರಬೇಕಾಗುತ್ತದೆ, ನಾಡು ನುಡಿಗೆ ಸದಾ ಕಂಕಣ ಬದ್ಧರಾಗಿ ಇರುವಂತ ನಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡದಿರುವುದೇ ಒಳ್ಳೆಯದು. ಕನ್ನಡ ಬಾವುಟವನ್ನೇ ಸಹಿಸದ ತಮಿಳಿಗರು ಕರ್ನಾಟಕದಲ್ಲಿ ಇರಲು ಅರ್ಹರೆ? ತಮಿಳುನಾಡು ಪೊಲೀಸ್ ಇಲಾಖೆ ಇಂತಹ ಕೃತ್ಯ ಎಸಗುತ್ತಿರುವವರಿಗೆ ಕಡಿವಾಣ ಹಾಕುವ ಮೂಲಕ ಎರಡು ರಾಜ್ಯಗಳ ನಡುವಿನ ಸಾಮರಸ್ಯ ಕಾಪಾಡಲು ಮುಂದಾಗಬೇಕು ಎಂದು ಕರ್ನಾಟಕ ಕಾವಲುಪಡೆ ತಾಲ್ಲೂಕು ಅಧ್ಯಕ್ಷ ಅಬ್ದುಲ್ ಮಾಲೀಕ್ ಆಗ್ರಹಿಸಿದ್ದಾರೆ.


ಉದಯವಾಹಿನಿ ಚಿತ್ರ

ಕೆಲ ಪುಂಡರ ಅಟ್ಟಹಾಸ

ತಮಿಳುನಾಡಿನ ಕಿಡಿಗೇಡಿಗಳ ಕೃತ್ಯ ಅಕ್ಷಮ್ಯ ಆಗಿದೆ, ಕನ್ನಡ ಭಾವುಟವನ್ನೇ ಸಹಿಸಲಾಗದವರು ನಮ್ಮ ರಾಜ್ಯದಲ್ಲಿ ಇರಲು ಅರ್ಹರಲ್ಲ, ಕರ್ನಾಟಕದಲ್ಲಿ ಜೀವನ ಕಂಡುಕೊಂಡಿರುವ ಅದೆಷ್ಟೋ ಮಂದಿ ತಮಿಳಿಗರಿಗೆ ಇಂತಹ ದ್ರೋಹಿಗಳಿಂದ ಅಪಾಯ ಕಟ್ಟಿಟ್ಟಬುತ್ತಿ, ಕನ್ನಡಿಗರ ಭಾವೈಕ್ಯತೆಯ ಪ್ರತೀಕವಾದ ಭಾವುಟಕ್ಕೆ ಅಪಮಾನ ಎಸಗಿದರೆ ತಕ್ಕ ಪಾಠ ಕಲಿಸಬೇಕಾಗುತ್ತದೆ.

-ರಾಜೇಂದ್ರ ನಾಯಕ್
ಕ.ರ.ವೇ ಚಾ.ನಗರ ಜಿಲ್ಲಾ ಉಪಾಧ್ಯಕ್ಷ

### ಸಹನೆ ಕಟ್ಟೆ ಹೊಡೆಯುವಂತೆ ಮಾಡಿದೆ

ಶಬರಿಮಲೇ ಯಾತ್ರಾರ್ಥಿಗಳಿಗೆ ಕೇರಳದಲ್ಲಿ ಅಷ್ಟೇನೂ ಸಮಸ್ಯೆಗಳಿಲ್ಲ ಆದರೆ ತಮಿಳುನಾಡು ಮಾರ್ಗವಾಗಿ ದರ್ಶನಕ್ಕೆ ತೆರಳುವ ವಾಹನಗಳನ್ನ ತಡೆದು ತೊಂದರೆ ನೀಡಲಾಗುತ್ತಿದೆ, ಕರ್ನಾಟಕದಲ್ಲಿ ವಾಸ್ತವ್ಯ ಹೂಡಿರುವ ತಮಿಳಿಗರ ಜೊತೆ ನಮ್ಮದು ಯಾವುದೇ ತಂಟೆ ತಕರಾರುಗಳಿಲ್ಲ ಆದರೆ ಶಬರಿಮಲೇ ಯಾತ್ರಾರ್ಥಿಗಳ ಮೇಲೆ ನಿರಂಕುಶವಾಗಿ ಅಸಭ್ಯ ವರ್ತನೆ ಮಾಡುತ್ತಿರುವುದು ನಮ್ಮ ಸಹನೆ ಕಟ್ಟೆ ಹೊಡೆಯುವಂತೆ ಮಾಡಿದೆ ಎಂದು ಅಯ್ಯಪ್ಪ ಯಾತ್ರಾರ್ಥಿಯೊಬ್ಬರು ತಿಳಿಸಿದ್ದಾರೆ.

# ಬಂಜಾರ ಭವನ ಉದ್ಘಾಟನೆ; ತಾಂಡಾ ಅಭಿವೃದ್ಧಿಗೆ ನೂರಾರು ಕೋಟಿ ವೆಚ್ಚ

• ಉದಯವಾಹಿನಿ, ತುಮಕೂರು


ಉದಯವಾಹಿನಿ ಚಿತ್ರ

ಅಸಮಾನತೆ ತೊಡೆದು ಹಾಕಿ, ಸಮ ಸಮಾಜ ನಿರ್ಮಿಸುವುದು ಸರ್ಕಾರದ ಉದ್ದೇಶ. ಇದಕ್ಕೆ ಪೂರಕವಾಗಿ ಕಳೆದ 2 ವರ್ಷದಲ್ಲಿ ತಾಂಡಾಗಳ ಅಭಿವೃದ್ಧಿಗೆ ನೂರಾರು ಕೋಟಿ ವ್ಯಯಿಸಲಾಗಿದೆ' ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಹೇಳಿದರು.

ನಗರದಲ್ಲಿ ತಾಂಡಾ ಅಭಿವೃದ್ಧಿ ನಿಗಮ, ಜಿಲ್ಲಾ ಬಂಜಾರ ಸೇವಾಲಾಲ್ ಸೇವಾ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಬಂಜಾರ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು. 3.40 ಕೋಟಿ ವೆಚ್ಚದಲ್ಲಿ ಭವನ ನಿರ್ಮಿಸಲಾಗಿದೆ. ತಾಂಡಾಗಳ ಮೂಲಭೂತ ಸೌಲಭ್ಯಕ್ಕೆ 50 ಕೋಟಿ ವೆಚ್ಚ ಮಾಡಲಾಗಿದೆ. 500ಕ್ಕೂ ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಲಾಗಿದೆ. 10 ಸಾವಿರ ಲಂಬಾಣಿ ಯುವಕ, ಯುವತಿಯರಿಗೆ ಕೌಶಲ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ, ಜಾತಿ ವ್ಯವಸ್ಥೆ ಮನುಷ್ಯನನ್ನು ಕುಗ್ಗಿಸಿದೆ. ಜಾತಿ, ಉಪಜಾತಿ ಎಂದು ಒಡೆದು ಚೂರಾದರೆ ಅವಕಾಶ ದೂರವಾಗುತ್ತದೆ. ಜಾತೀಯತೆ ಇಲ್ಲದಿದ್ದರೆ ಭಾರತ ಮತ್ತಷ್ಟು ಶಕ್ತಿಯುತವಾಗುತ್ತಿತ್ತು. ತಳ ಸಮುದಾಯವನ್ನು ಸಮಾಜದ ಮುನ್ನೆಲೆಗೆ ತರುವ ಉದ್ದೇಶದಿಂದ ಸಂವಿಧಾನದಲ್ಲಿ ಕಾನೂನಾತ್ಮಕವಾಗಿ ಶಕ್ತಿ ಕೊಡಲಾಯಿತು. ದುರ್ದೈವದ ಸಂಗತಿ ಇಂದಿಗೂ ಜಾತಿ ವ್ಯವಸ್ಥೆ ಜೀವಂತವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿಧಾನಸಭೆ ಉಪ ಸಭಾಪತಿ ರುದ್ರಪ್ಪ ಮಾನಪ್ಪ ಲಮಾಣಿ, ರಾಜ್ಯದ 14 ಜಿಲ್ಲೆಗಳಲ್ಲಿ ಬಂಜಾರ ಭವನ ನಿರ್ಮಿಸಲಾಗಿದೆ. ಅನೇಕ ಜನಪರ ಯೋಜನೆ ರೂಪಿಸಲಾಗಿದೆ.ಸಮುದಾಯದ ಸಮಗ್ರ ಅಭಿವೃದ್ಧಿಗೆ ಅಗತ್ಯ ಅನುದಾನ ನೀಡಲಾಗಿದೆ. ಊರು ಬಿಟ್ಟು ವಲಸೆ ಹೋಗದೆ, ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಸಮಾಜದ ಜನರು ಒಂದಾಗಿರಬೇಕು' ಎಂದು ಸಲಹೆ ಮಾಡಿದರು.

**ಪರಮೇಶ್ವರ 2013ರಲ್ಲಿ ಸಿಎಂ ಆಗಬೇಕಿತ್ತು:** ಜಿ.ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಮುಖಂಡರು ಈಗ ಒತ್ತಾಯಿಸುತ್ತಿದ್ದಾರೆ. 2013ರಲ್ಲೇ ಸಿಎಂ ಆಗಬೇಕಿತ್ತು. ಆಗ ಸುಮ್ಮನಿದ್ದು ಈಗ ಕೇಳುತ್ತಿದ್ದೀರಿ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು. ಸಚಿವ ಪರಮೇಶ್ವರ ವೇದಿಕೆ ಬರುತ್ತಿದ್ದಂತೆ ಮುಂದಿನ ಮುಖ್ಯಮಂತ್ರಿ ಪರಮೇಶ್ವರಗೆ ಜೈ ಎಂದು ಮುಖಂಡರು ಘೋಷಣೆ ಕೂಗಿದರು.

ಮಹದೇವಪ್ಪ ಮಾತನಾಡುವಾಗ ಅವರ ಭಾಷಣಕ್ಕೆ ಅಡ್ಡಿಪಡಿಸಿದ ಮುಖಂಡರು ಪರಮೇಶ್ವರ ಪರ ಘೋಷಣೆ ಕೂಗಿದರು. ಲಂಬಾಣಿಗರ ಬೇಡಿಕೆಗೆ ಜಯವಾಗಲಿ ಎಂದು ಮಹದೇವಪ್ಪ ಆಶಿಸಿದರು. ದಿನ ಬೆಳಗಾದರೆ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಮಾತನಾಡುವವರು ಹೆಚ್ಚಾಗಿದ್ದಾರೆ. ಈ ಕುರಿತು ಪಕ್ಷದ ವರಿಷ್ಠರು ತೀರ್ಮಾನಿಸುತ್ತಾರೆ' ಎಂದು ಪರಮೇಶ್ವರ ಹೇಳಿದರು.

# ಯೋಜನೆಗೆ ಜಾಗದ ಸಮಸ್ಯೆ ಇಲ್ಲ

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ಲಾಭದಾಯಕವಾಗಿರುವ ನಂದಿನಿ ಉತ್ಪನ್ನಗಳನ್ನು ಕೋಲಾರದ ಹಾಲು ಒಕ್ಕೂಟದಲ್ಲೇ (ಕೋಮುಲ್) ತಯಾರಿಸಲು ಸುಮಾರು 200 ಕೋಟಿ ವೆಚ್ಚದಲ್ಲಿ ಘಟಕ ಸ್ಥಾಪಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಶಾಸಕ ಹಾಗೂ ಕೋಮುಲ್ ಅಧ್ಯಕ್ಷ ಕೆ.ವೈ.ನಂಜೇಗೌಡ ಹೇಳಿದರು. ತಾಲ್ಲೂಕಿನ ಬೆಳಗಾನಹಳ್ಳಿಯಲ್ಲಿರುವ ಹಾಲು ಒಕ್ಕೂಟದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸಂಬಂಧ ಯೋಜನೆ ರೂಪಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆಡಳಿತ ಮಂಡಳಿ ನಿರ್ದೇಶಕರು ಕೂಡ ಉತ್ಸುಕರಾಗಿದ್ದಾರೆ. ಆದಷ್ಟು ಬೇಗ ಈ ಯೋಜನೆ ಈಡೇರಲಿದೆ ಎಂದರು. ಈ ಯೋಜನೆಗೆ ಜಾಗದ ಸಮಸ್ಯೆ ಇಲ್ಲ. ಹೊಸ ಡೇರಿ ನಿರ್ಮಾಣವಾಗಿ ಸ್ಥಳಾಂತರವಾದಾಗ ಈಗಿರುವ ಸ್ಥಳ ಲಭ್ಯವಾಗುತ್ತದೆ ಎಂದು ಮಾಹಿತಿ ನೀಡಿದರು.

ಜನವರಿ ಅಥವಾ ಫೆಬ್ರುವರಿಯಲ್ಲಿ ಎಂವಿಕೆ ಗೋಲ್ಡನ್ ಡೇರಿ, ಸೌರ ಘಟಕ ಉದ್ಘಾಟಿಸಲಾಗುವುದು. ಈ ಸಂಬಂಧ ಮುಖ್ಯಮಂತ್ರಿ ಸಮಯ ಕೇಳಲಾಗುವುದು ಎಂದು ತಿಳಿಸಿದರು. 250 ಕೋಟಿ ವೆಚ್ಚದಲ್ಲಿ ಗೋಲ್ಡನ್ ಡೇರಿ ನಿರ್ಮಾಣ ಮಾಡಲಾಗುತ್ತಿದೆ. ಇನ್ನೂ ಕಾಮಗಾರಿ ಬಾಕಿ ಇದೆ. ಅಧಿಕಾರಿಗಳಿಗೆ, ಗುತ್ತಿಗೆದಾರರಿಗೆ ಗುರಿ ನೀಡಿದ್ದು, ತ್ವರಿತಗತಿಯಲ್ಲಿ ಗುಣಮಟ್ಟದ ಕಾಮಗಾರಿ ನಡೆಸಲು ಸೂಚಿಸಿದ್ದೇನೆ. ಎಂದು ನುಡಿದರು.

12 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ಘಟಕ ಉದ್ಘಾಟನೆಗೆ ಸಿದ್ಧವಾಗಿದೆ. ಒಕ್ಕೂಟಕ್ಕೆ ಇದರಿಂದ ತಿಂಗಳಿಗೆ ಸುಮಾರು 80 ಲಕ್ಷ ವಿದ್ಯುತ್ ಶುಲ್ಕ ಉಳಿತಾಯವಾಗುತ್ತಿದೆ. ಜಿಲ್ಲೆಯಲ್ಲಿರುವ ಎಲ್ಲಾ ಬಿಎಂಸಿಗೂ ಸಂಪರ್ಕ ಕಲ್ಪಿಸಲು ನಿರ್ಧರಿಸಿದ್ದೇವೆ. ಇದರಿಂದ ತಿಂಗಳಿಗೆ 1.5 ಕೋಟಿ ಉಳಿತಾಯವಾಗುತ್ತದೆ ಎಂದರು.

ಚಿಂತಾಮಣಿಯಲ್ಲಿ ಐಸ್ ಕ್ರೀಂ ಘಟಕ ನಿರ್ಮಿಸಿದ್ದೆವು. ಹೈನುಗಾರರ ಹೆಣ್ಣು ಮಕ್ಕಳಿಗೆ ಬೆಂಗಳೂರಿನಲ್ಲಿ ಹಾಸ್ಟೆಲ್ ವ್ಯವಸ್ಥೆ ಕೂಡ ಮಾಡಿದ್ದೇವೆ. ಬೆಂಗಳೂರಿನಿಂದ ಕೋಲಾರ ಒಕ್ಕೂಟ ಪ್ರತ್ಯೇಕವಾಗಿ 40 ವರ್ಷಗಳಾಗಿದೆ. ಇಂಥ ಕೆಲಸ ಮಾಡಲು ಯಾರಿಂದಲೂ ಸಾಧ್ಯವಾಗಿರಲಿಲ್ಲ. ನಮ್ಮ ಒಕ್ಕೂಟ ಸಾಲಕ್ಕೆ ಸಿಲುಕಿಕೊಂಡಿಲ್ಲ ಎಂದು ಹೇಳಿದರು.

ನಂಜೇಗೌಡ ಅವರು ನಿರ್ದೇಶಕರು ಹಾಗೂ ಅಧಿಕಾರಿಗಳ ಜತೆ ಗೋಲ್ಡನ್ ಡೇರಿ ಕಟ್ಟಡ ಹಾಗೂ ಯಂತ್ರಗಳನ್ನು ಪರಿಶೀಲಿಸಿದರು. ಕೆಲ ಸಲಹೆ, ಸೂಚನೆ ನೀಡಿದರು.

# ಪೊಲೀಸ್ ಠಾಣೆ ಪರಿಶೀಲಿಸಿದ ಐಜಿಪಿ

• ಉದಯವಾಹಿನಿ, ಚಿಕ್ಕನಾಯಕನಹಳ್ಳಿ

ಪಟ್ಟಣದ ಪೊಲೀಸ್ ಠಾಣೆಯ ಆಡಳಿತಾತ್ಮಕ ನಿರ್ವಹಣೆ ಮತ್ತು ಸಿಬ್ಬಂದಿಯ ಕಾರ್ಯವೈಖರಿ ತೃಪ್ತಿದಾಯಕವಾಗಿದೆ ಎಂದು ಕೇಂದ್ರ ವಲಯ ಐಜಿಪಿ ಲಾಬೂರಾಮ್ ಪ್ರಶಂಸಿಸಿದರು. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮೂರು ತಾಸು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಠಾಣೆಯಲ್ಲಿನ ಅಪರಾಧ ದಾಖಲೆಗಳು, ಪ್ರಕರಣಗಳ ಪಟ್ಟಿಗಳ ವಿವರ ಪರಿಶೀಲಿಸಲಾಗಿದೆ. ಹಳೆಯ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ಸ್ಥಳೀಯ ಅಧಿಕಾರಿಗಳು ಹೆಚ್ಚಿನ ಆಸಕ್ತಿ ತೋರಿದ್ದಾರೆ. ಇದೇ ಶಿಸ್ತನ್ನು ಮುಂದೆಯೂ ಕಾಯ್ದುಕೊಳ್ಳಬೇಕು ಎಂದು ಸೂಚಿಸಿದರು.

ಠಾಣೆಗೆ ಬರುವ ಜನ ಸಾಮಾನ್ಯರ ದೂರುಗಳಿಗೆ ತಕ್ಷಣ ಸ್ಪಂದಿಸಿ ನ್ಯಾಯ ಒದಗಿಸಬೇಕು. ಸಾರ್ವಜನಿಕರು ಸಂಕಷ್ಟದಲ್ಲಿದ್ದಾಗ ಪೊಲೀಸ್ ಠಾಣೆಗಳು ಭರವಸೆ ಕೇಂದ್ರಗಳಾಗಿ ಕೆಲಸ ಮಾಡಬೇಕು ಎಂದರು. ಮದ್ಯ ಅಕ್ರಮ ಮಾರಾಟ ಸೇರಿದಂತೆ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳ ವಿರುದ್ಧ ಶೂನ್ಯ ಸಹನೆ ಹೊಂದಿರಬೇಕು. ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದರು.

### ಸಿಸಿಟಿವಿ ಕ್ಯಾಮೆರಾಗೆ ಮನವಿ

ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ವಿಶೇಷ ಅನುದಾನ ಬಳಸಿಕೊಂಡು ಸಿಸಿಟಿವಿ ಯೋಜನೆಯನ್ನು ಜಾರಿಗೆ ತರಬೇಕು. ಪಟ್ಟಣದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಾಹನ ದಟ್ಟಣೆ ಹಿನ್ನೆಲೆಯಲ್ಲಿ, ಸಾರ್ವಜನಿಕರ ಸುರಕ್ಷತೆ, ಅಪರಾಧ ತಡೆಗಟ್ಟುವಿಕೆಗಾಗಿ ಪಟ್ಟಣದ ಪ್ರಮುಖ ರಸ್ತೆಗಳು, ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಚಂದ್ರಶೇಖರ್ ಮನವಿ ಸಲ್ಲಿಸಿದರು.

# ವೀರಶೈವ-ಲಿಂಗಾಯತರ ಸಭೆಯಲ್ಲಿ ರಾಜಕೀಯ ಚರ್ಚೆ ನಡೆದಿಲ್ಲ

• ಉದಯವಾಹಿನಿ, ಮೈಸೂರು



ನಗರದ ಖಾಸಗಿ ಹೋಟೆಲ್‌ನಲ್ಲಿ ಸಂಜೆ ನಡೆದ ವೀರಶೈವ ಲಿಂಗಾಯತ ಮುಖಂಡರ ಸಭೆಯಲ್ಲಿ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ. ಯಾರೋ ಅತೃಪ್ತರು ಮಾಧ್ಯಮಗಳಿಗೆ ತಪ್ಪು ಹೇಳಿಕೆ ನೀಡಿದ್ದಾರೆ ಎಂದು ಬಿಜೆಪಿಯ ವೀರಶೈವ ಲಿಂಗಾಯತ ಮುಖಂಡರು ಸ್ಪಷ್ಟನೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಮುಖಂಡ ಬಿ.ಎನ್. ಸದಾನಂದ, ಬಿಜೆಪಿ ನಾಯಕರ ಬಗ್ಗೆ ಸಭೆಯಲ್ಲಿ ಅಸಮಾಧಾನ ವ್ಯಕ್ತವಾಯಿತು ಎಂಬ ಸುದ್ದಿ ಸತ್ಯಕ್ಕೆ ದೂರವಾದುದು. ನಾವೆಲ್ಲರೂ ಸಭೆಯಲ್ಲಿ ಭಾಗವಹಿಸಿದ್ದು ನಿಜ. ಆದರೆ, ಅಲ್ಲಿ ಪಕ್ಷದ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ಕೇವಲ ಸಮುದಾಯ ಚಿಂತನ ಮಂಥನ ಸಭೆ ನಡೆಸಲಾಯಿತು ಎಂದರು. ಪಕ್ಷದ ಗ್ರಾಮಾಂತರ ಘಟಕದ ಪ್ರಧಾನ ಕಾರ್ಯದರ್ಶಿ ನಂಜನಗೂಡಿನ ಎಸ್.ವಿ.ವಿನಯ್ ಕುಮಾರ್, ಬಿಜೆಪಿಯಲ್ಲಿ ಲಿಂಗಾಯತರಿಗೆ ಅನ್ಯಾಯ ಆಗಿಲ್ಲ. ಪಕ್ಷದ ನಾಯಕರು ಗ್ರಾಮಾಂತರ ಘಟಕದಲ್ಲಿ ಹೆಚ್ಚುವರಿಯಾಗಿ ಹುದ್ದೆಗಳನ್ನು ನೀಡಿದ್ದಾರೆ. ಸಭೆಯಲ್ಲಿ ಭಾಗವಹಿಸುವಂತೆ ಬಹುತೇಕರಿಗೆ ಶರತ್ ಪುಟ್ಟಬುದ್ದಿ, ಗೆಜ್ಜಗಳ್ಳಿ ಮಹೇಶ್ ಅವರೇ ಆಹ್ವಾನ ನೀಡಿದ್ದರು. ಬಿಜೆಪಿ ಜೊತೆಗೆ ಕಾಂಗ್ರೆಸ್, ಜೆಡಿಎಸ್ ಕಾರ್ಯಕರ್ತರೂ ಸಭೆಯಲ್ಲಿದ್ದರು. ಅಲ್ಲಿ ಪಕ್ಷದ ಬಗ್ಗೆ ಚರ್ಚೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

### ಸಮಾಜಕ್ಕೆ ತಪ್ಪು ಸಂದೇಶ ನೀಡಬೇಡಿ

ನಗರ ಘಟಕದ ಅಧ್ಯಕ್ಷರು ಸಹ ಸಮನಾಗಿ ಹುದ್ದೆಗಳನ್ನು ನೀಡಿದ್ದಾರೆ. ಯಾರಿಗೂ ದ್ರೋಹ ಬಗೆದಿಲ್ಲ. ಯಾರಿಗೆ ಪಕ್ಷದ ಬಗ್ಗೆ ಅಸಮಾಧಾನವಿದೆ, ಅವರು ನೇರವಾಗಿ ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡಿ ನಿಮ್ಮ ಬೇಸರ ತೋಡಿಕೊಳ್ಳಿ. ಆದರೆ, ಈ ರೀತಿ ಸಮಾಜಕ್ಕೆ ತಪ್ಪು ಸಂದೇಶ ನೀಡಬೇಡಿ ಎಂದು ಹೇಳಿದರು.

# 140 ಮಕ್ಕಳಿಗೆ ಜನನ ಪತ್ರ ಲಭ್ಯ

• ಉದಯವಾಹಿನಿ, ಕೊಳ್ಳೇಗಾಲ


ಉದಯವಾಹಿನಿ ಚಿತ್ರ

ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಹನೂರು ಹಾಗೂ ಕೊಳ್ಳೇಗಾಲ ತಾಲ್ಲೂಕುಗಳ 10 ಬುಡಕಟ್ಟು ಆಶ್ರಮ ಶಾಲೆಯಲ್ಲಿ ಆಧಾರ್ ಕಾರ್ಡ್ ರಹಿತ 140 ಮಕ್ಕಳಿಗೆ ಜನನ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆ ಯಶಸ್ವಿಯಾಯಿತು.

ಹನೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಕಾಡಂಚಿನ ಪ್ರದೇಶದಲ್ಲಿ 90 ಗಿರಿಜನ ಹಾಡಿಗಳಿದ್ದು, ಇಲ್ಲಿನ ನಿವಾಸಿಗಳ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತವಾಗಬಾರದೆಂದು ಸರ್ಕಾರ ಅಲ್ಲಲ್ಲಿ ಬುಡಕಟ್ಟು ಆಶ್ರಮ ಶಾಲೆಯಲ್ಲಿ ಆರಂಭಿಸಿತ್ತು. ಆದರೆ, ಅದೆಷ್ಟೋ ಪೋಷಕರು ತಮ್ಮ ಮಕ್ಕಳಿಗೆ ಸಕಾಲದಲ್ಲಿ ಜನನ ಪ್ರಮಾಣ ಪತ್ರ ಸಕಾಲದಲ್ಲಿ ನೀಡದಿರುವ ಕಾರಣ ಆಶ್ರಮ ಶಾಲೆಗಳಲ್ಲಿ ಮಕ್ಕಳ ದಾಖಲಾತಿಗೆ ತೊಡಕಾಗಿತ್ತು. ಆದರೂ ಆಶ್ರಮ ಶಾಲೆಯ ಶಿಕ್ಷಕರು, ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಡಿಯ ಮಕ್ಕಳಿಗೆ ಆಯಾ ಪಾಲಕರ ಆಧಾರ್ ಕಾರ್ಡ್ ದಾಖಲೆ ಆಧರಿಸಿ ಶಾಲೆಗಳಿಗೆ ಪ್ರವೇಶಾತಿ ನೀಡಿದ್ದರು. ಇಂತಹ ವಿದ್ಯಾರ್ಥಿಗಳಿಗೆ ಕಾನೂನು ಬದ್ಧ ಜನನ ಪ್ರಮಾಣ ಪತ್ರ, ಆಧಾರ್ ಕಾರ್ಡ್ ದೊರಕಿಸಲು ಕ್ರಮವಹಿಸಿದ್ದರು. ಇದರ ಭಾಗವಾಗಿ ಅಧಿಕಾರಿಗಳು ನಗರದ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮಕ್ಕಳ ಜನನ ಪ್ರಮಾಣ ಪತ್ರ ಪಡೆಯಲು ಪ್ರಕರಣ ದಾಖಲಿಸಿದ್ದರು.

ಇದೀಗ ಜನನಪ್ರಮಾಣ ಪತ್ರ ನೀಡುವ ಸಂಬಂಧ ಜೆಎಂಎಫ್‌ಸಿ ನ್ಯಾಯಾಲಯ ಡಿ.11, ಡಿ.12 ರಂದು ನ್ಯಾಯಾಲಯದಲ್ಲಿ ಆಯೋಜಿಸಿದ್ದ ಲೋಕ ಅದಾಲತ್‌ನಲ್ಲಿ 140 ಮಂದಿಗೆ ಜನನ ಪ್ರಮಾಣ ಪತ್ರ ನೀಡುವ ಕುರಿತಾದ ಪ್ರಕರಣದ ವಿಚಾರಣೆಯಲ್ಲಿ ಬುಡಕಟ್ಟು ಮಕ್ಕಳ ಪೋಷಕರು, ವಕೀಲರು ಹಾಗೂ ಅಧಿಕಾರಿಗಳು ಭಾಗವಹಿಸಿ, ನ್ಯಾಯಾಧೀಶರಲ್ಲಿ ಮಕ್ಕಳಿಗೆ ಜನನ ಪ್ರಮಾಣ ಪತ್ರ ದಾಖಲೆ ಹೊಂದಲು ಕಂದಾಯ ಇಲಾಖೆಗೆ ಆದೇಶ ನೀಡುವಂತೆ ಮನವಿ ಮಾಡಿದ್ದರು.

ನ್ಯಾಯಾಲಯದ ಆದೇಶದನ್ವಯ 90 ಹಾಡಿಗಳ ಆಯಾ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಮತ್ತು ಲೆಕ್ಕಾಧಿಕಾರಿಗಳು ಜನನ ಪ್ರಮಾಣ ಪತ್ರ ನೀಡಲಿದ್ದು, ಇದರನ್ವಯ ಮುಂದಿನ ದಿನದಲ್ಲಿ ಜನನ ಪ್ರಮಾಣ ಪತ್ರ, ವಂಚಿತ ಆಶ್ರಮ ಶಾಲೆಯ 140 ಮಕ್ಕಳಿಗೆ ಸಾಮೂಹಿಕವಾಗಿ ಕಾನೂನು ಬದ್ಧವಾಗಿ ಆಧಾರ್ ಕಾರ್ಡ್ ಲಭಿಸಿ ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ.

-ರಾಜೇಶ್ , ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ

# ಸರ್ಕಾರಿ ಶಾಲೆ ಉಳಿವಿಗೆ ಉಪವಾಸ ಸತ್ಯಾಗ್ರಹ

• ಉದಯವಾಹಿನಿ, ಮಂಡ್ಯ


ಉದಯವಾಹಿನಿ ಚಿತ್ರ

ಮ್ಯಾಗ್ನೆಟ್ ಶಾಲೆಗಳು ಹಾಗೂ ಕೆಪಿಎಸ್ ಶಾಲೆಗಳು ಎಂಬ ಹೆಸರಿನಲ್ಲಿ 40 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿ ಶಾಶ್ವತವಾಗಿ ಸರ್ಕಾರಿ ಶಾಲೆಗಳಿಗೆ ಬೀಗ ಹಾಕಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ದಲ್ಲಾಳಿಯಾಗಿ ನಡೆದುಕೊಳ್ಳುವುದನ್ನು ಬಿಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಎಸ್‌ಡಿಎಂಸಿ ಸಂಘದ ಕಾರ್ಯಕರ್ತರು ನಗರದಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ನಗಗರದ ಸರ್‌ಎಂ.ವಿ.ಪ್ರತಿಮೆ ಎದುರು ಜಮಾವಣೆಗೊಂಡ ಕಾರ್ಯಕರ್ತರು ಮೂರು ದಿನಗಳವರೆಗೆ ಧರಣಿ ಆರಂಭಿಸಿದ್ದು, ಕೆಆರ್‌ಎಸ್. ಕರುನಾಡ ಸಂಘಟನೆ, ನೆರವು ಸಂಸ್ಥೆಯ ಮುಖಂಡರು ಬೆಂಬಲ ನೀಡಿದರು. ರಾಜ್ಯದ 41,905 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲೂ ಎಲ್‌ಕೆಜಿ ಯಿಂದ ಐದನೇ ತರಗತಿವರೆಗೆ ದ್ವಿಭಾಷೆಯಲ್ಲಿ ಸಿಬಿಎಸ್‌ಸಿ ಶಿಕ್ಷಣ ಹಾಗೂ ಮೂಲ ಸೌಕರ್ಯ ಒದಗಿಸಬೇಕು. ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಆರನೇ ತರಗತಿಯಿಂದ ಪಿಯುಸಿವರೆಗೆ ನವೋದಯ ಮಾದರಿ ಸಿಬಿಎಸ್‌ಸಿ ವಸತಿ ಶಾಲಾ ಶಿಕ್ಷಣ ನೀಡಬೇಕು ಎಂದು ಆಗ್ರಹಿಸಿದರು. ಸರ್ಕಾರದ ಕೈಯಲ್ಲಿ ಆಗದಿದ್ದರೆ ಶಿಕ್ಷಣ ಇಲಾಖೆಗೆ ನೀಡುವ ಅನುದಾನವನ್ನು ನೇರವಾಗಿ ಪ್ರತಿಯೊಂದು ಸರ್ಕಾರಿ ಶಾಲೆಯ ಎಸ್‌ಡಿಎಂಸಿ ಖಾತೆಗೆ ವರ್ಗಾಹಿಸಿದರೆ, ಹಾಲಿನ ಡೇರಿ ರೀತಿ, ಎಸ್‌ಡಿಎಂಸಿಯವರೇ ಶಿಕ್ಷಕರ ನೇಮಕ ಮಾಡಿ. ಮೂಲ ಸೌಕರ್ಯ ಒದಗಿಸಿ ಶಾಲೆಗಳನ್ನು ಮುನ್ನಡೆಸಿ ಸರ್ಕಾರಿ ಶಾಲೆಗಳಿಗೆ ಬೀಗ ಹಾಕುವ ಕೆಲಸಕ್ಕೆ ಶಾಶ್ವತವಾಗಿ ತೆರೆ ಎಳೆಯುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸುಮಾರು 40 ಲಕ್ಷ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಅವರ ಪೋಷಕರನ್ನೆಲ್ಲ ಸೇರಿಸಿದರೆ ಸುಮಾರು ಒಂದು ಕೋಟಿಗೂ ಹೆಚ್ಚು ಜನರು ಸಿಗುತ್ತಾರೆ ಆದರೆ ಇವರೆಲ್ಲರೂ ಒಂದು ದಿನ ಬೀದಿಗಿಳಿದು ಹೋರಾಟ ಮಾಡಿದೆ ಸರ್ಕಾರಕ್ಕೆ ಎಚ್ಚರಿಕೆ ನೀಡುವ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ ಕೆಲಸ ಮಾಡೋಣ ಇನ್ನಾದರೂ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ ಕಡೆ ಗಮನ ಹರಿಸಬೇಕು ಎಂದು ಧರಣಿ ನಿರತರು ಆಗ್ರಹಿಸಿದರು.

## ಮಿನಿ ನ್ಯೂಸ್

### ಕಾಡಾನೆ ದಾಳಿಗೆ ರೈತ ಬಲಿ

• ಉದಯವಾಹಿನಿ, ರಾಮನಗರ

ಜಿಲ್ಲೆಯಲ್ಲಿ ಮಾನವ, ಕಾಡಾನೆ ನಡುವಣ ಸಂಘರ್ಷ ಮುಂದುವರಿದಿದ್ದು, ತಾಲ್ಲೂಕಿನ ದುಮ್ಮಸಂದ್ರ ಗ್ರಾಮದಲ್ಲಿ ಕಾಡಾನೆ ದಾಳಿಗೆ ರೈತರೊಬ್ಬರು ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ. ಪುಟ್ಟಮಾದೇಗೌಡ ಮೃತ ರೈತ. ಗ್ರಾಮದಲ್ಲಿರುವ ತಮ್ಮ ಜಮೀನಿಗೆ ನೀರು ಹರಿಸುವುದಕ್ಕಾಗಿ ಪುಟ್ಟಮಾದೇಗೌಡ ಅವರು, ಬೆಳಿಗ್ಗೆಯೇ ಹೋಗಿದ್ದರು. ನೀರು ಹಾಯಿಸುತ್ತಿರುವಾಗ ಏಕಾಏಕಿ ಕಾಡಾನೆ ದಾಳಿ ನಡೆಸಿ, ತುಳಿದು ಹಾಕಿದೆ. ದಾಳಿಯ ತೀವ್ರತೆಗೆ ಪುಟ್ಟಮಾದೇಗೌಡ ಅವರು ಸ್ಥಳದಲ್ಲೇ ಕೊನೆಯುಸಿರೆಳೆದರು. ಜಮೀನಿಗೆ ಹೋದ ಪುಟ್ಟಮಾದೇಗೌಡ ಅವರು ಎಷ್ಟೊತ್ತಾದರೂ ಮನೆಗೆ ಬಾರದಿದ್ದರಿಂದ ಹಾಗೂ ಮೊಬೈಲ್ ಫೋನ್ ಕರೆ ಸಹ ಸ್ವೀಕರಿಸದಿದ್ದರಿಂದ, ಕುಟುಂಬದವರು ಜಮೀನಿಗೆ ಹುಡುಕಿಕೊಂಡು ಹೋಗಿದ್ದಾರೆ. ಆಗ, ಜಮೀನಿನಲ್ಲಿ ಪುಟ್ಟಮಾದೇಗೌಡ ಅವರ ಶವವು ಅರೆನಗ್ನಾವಸ್ಥೆಯಲ್ಲಿ ಬಿದ್ದಿರುವುದು ಕಂಡುಬಂದಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಸಂಬಂಧಿಕರು ಹಾಗೂ ಗ್ರಾಮಸ್ಥರು ಸ್ಥಳದಲ್ಲಿ ಜಮಾಯಿಸಿದರು. ಘಟನೆ ಖಂಡಿಸಿ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟಿಸಿದರು. ಸ್ಥಳಕ್ಕೆ ಪೊಲೀಸರು ಬಂದು ಪರಿಸ್ಥಿತಿ ನಿಯಂತ್ರಿಸಿದರು. ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದರು. ಬಳಿಕ, ಕುಟುಂಬದವರಿಗೆ ಸಮಾಧಾನಪಡಿಸಿ, ಶವವನ್ನು ಆಸ್ಪತ್ರೆಗೆ ಸಾಗಿಸಿದರು.

### ವ್ಯಾಘ್ರದಾಳಿಗೆ ಮತ್ತೊಂದು ಹಸು ಬಲಿ : ಬೊಮ್ಮಲಾಪುರದಲ್ಲಿ ಘಟನೆ

• ಉದಯವಾಹಿನಿ, ಗುಂಡ್ಲುಪೇಟೆ

ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದಲ್ಲಿ ಮತ್ತೇ ವ್ಯಾಘ್ರ ದಾಳಿ ನಿರಂತರವಾಗಿ ಸಂಭವಿಸುತ್ತಿದ್ದು ಹೈನುಗಾರಿಕೆ ನಂಬಿದ್ದ ಅನ್ನದಾತ ಅಕ್ಷರಶಃ ಬೆಚ್ಚಿಬಿದ್ದಿದ್ದಾನೆ. ಭಾನುವಾರ ಮುಂಜಾನೆ ಗ್ರಾಮದ ಅನತಿ ದೂರದಲ್ಲೇ ಹಸುವೊಂದನ್ನ ಎಳೆದೊಯ್ದಿರುವ ಘಟನೆ ಬೊಮ್ಮಲಾಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಹೇಶ್‌ಎಂಬವರು ಮಠದ ಆಸುಪಾಸಿನ ಅಂಗಳದಲ್ಲಿ ಹಸುವನ್ನ ಕಟ್ಟಿಹಾಕಿ ಮನೆಗೆ ತೆರಳಿದ್ದ ವೇಳೆ ಪ್ರತ್ಯಕ್ಷವಾದ ವ್ಯಾಘ್ರ ಸರಿಸುಮಾರು 300 ಮೀಟರ್ ನಷ್ಟು ದೂರ ಹಸುವನ್ನ ಎಳೆದೊಯ್ದು ಭಕ್ಷಿಸಿದೆ, ಹಸು ಇಲ್ಲದ್ದನ್ನ ನೋಡಿ ಅನುಮಾನಗೊಂಡು ಹುಡುಕಾಟ ನಡೆಸಿದಾಗ ಹುಲಿ ಎಳೆದೊಯ್ದಿರುವ ಕುರಿತು ಖಾತರಿಯಾಗಿದೆ, ಬೊಮ್ಮಲಾಪುರದಲ್ಲಿ ಇದುವರೆಗೆ ಹನ್ನೊಂದು ಹಸುಗಳು ಹುಲಿ ಬಾಯಿಗೆ ತುತ್ತಾಗಿದ್ದು ಕಡಿವಾಣ ಹಾಕುವಲ್ಲಿ ವಿಫಲರಾದ ಅರಣ್ಯ ಇಲಾಖೆ ವಿರುದ್ಧ ರೈತರು ಆಕ್ರೋಶ ಹೊರಹಾಕಿದ್ದಾರೆ. ಸದ್ಯ ಇಲಾಖೆಯ ಪರಿಹಾರ ಹಣವನ್ನ ನಿರಾಕರಿಸಿರುವ ಸ್ಥಳೀಯರು ಕೂಂಬಿಂಗ್ ಕಾರ್ಯಾಚರಣೆ ನಡೆಸುವಂತೆ ಒತ್ತಾಯಿಸಿದ್ದಾರೆ.

### ಬಿಸಾನತ್ತದಿಂದ ಆಂಧ್ರ ಗಡಿವರೆಗೂ ರಸ್ತೆ

• ಉದಯವಾಹಿನಿ, ಬಂಗಾರಪೇಟೆ

ಬಿಸಾನತ್ತ ರೈಲ್ವೆ ನಿಲ್ದಾಣದಿಂದ ಆಂಧ್ರಪ್ರದೇಶದ ಗಡಿ ಭಾಗದವರೆಗೆ ರಸ್ತೆ ನಿರ್ಮಾಣ ಅಭಿವೃದ್ಧಿ ಸಹಿಸದ ಕೆಲವರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಜೆಡಿಎಸ್ ಹಿರಿಯ ಮುಖಂಡ ಜಿ.ವಿ ಶ್ರೀನಿವಾಸಮೂರ್ತಿ ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೋಣಿಮಡಗು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬಿಸಾನತ್ತ ರೈಲ್ವೆ ನಿಲ್ದಾಣದಿಂದ ಆಂಧ್ರಪ್ರದೇಶದ ಗಡಿಭಾಗದವರೆಗೆ ಸಿಸಿ ರಸ್ತೆ ಕಾಮಗಾರಿ ವೈನ್ ಶಾಪ್‌ಗೆ ಅನುಕೂಲವಾಗುವಂತೆ ನಿರ್ಮಾಣ ಮಾಡಿದ್ದಾರೆ ಎಂದು ಆರೋಪಿಸಿರುವುದು ಸತ್ಯಕ್ಕೆ ದೂರವಾದದ್ದು. ರಾಜಕೀಯ ಉದ್ದೇಶಕ್ಕಾಗಿ ಆರೋಪಿಸುತ್ತಿದ್ದಾರೆ. 15 ಲಕ್ಷ ಅನುದಾನ ಮಂಜೂರು ಆಗಿದೆ. ಗುಣಮಟ್ಟದಿಂದ ರಸ್ತೆ ನಿರ್ಮಾಣವಾದರೆ ಕೆಜಿಎಫ್ ಮತ್ತು ಆಂಧ್ರಪ್ರದೇಶದ ಕುಪ್ಪಂ, ದ್ರಾವಿಡ ವಿಶ್ವವಿದ್ಯಾಲಯ, ಹೂವಿನ ಮಾರುಕಟ್ಟೆಗೆ ಅನುಕೂಲಕರವಾಗಿದೆ ಎಂದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸೋಮಶೇಖರ್ ರೆಡ್ಡಿ, ಈ ರಸ್ತೆಯು ಆಂಧ್ರಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿದೆ ಇಲ್ಲಿವರೆಗೆ ಯಾರೂ ಕೂಡ ಈ ರಸ್ತೆಯನ್ನು ನಿರ್ಮಾಣ ಮಾಡಿಲ್ಲ. ಅಭಿವೃದ್ಧಿಗೆ ಅಡ್ಡಿಪಡಿಸುವುದು ಸರಿ ಅಲ್ಲ ಎಂದರು.

### ಡಿ.21ರಿಂದ 24ರವರೆಗೆ ಪಲ್ಸ್ ಪೋಲಿಯೊ

• ಉದಯವಾಹಿನಿ, ಮಂಡ್ಯ

ಜಿಲ್ಲೆಯಲ್ಲಿ ಡಿಸೆಂಬರ್ 21ರಿಂದ ನಾಲ್ಕು ದಿನ ಪಲ್ಸ್ ಪೋಲಿಯೊ ಅಭಿಯಾನ ನಡೆಯಲಿದ್ದು, ಸಾರ್ವಜನಿಕರಿಗೆ ಇದರ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಿ ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು. ಭಾನುವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಡಿ.21ರಿಂದ 24ರವರೆಗೆ ಹಮ್ಮಿಕೊಳ್ಳಲಾಗಿರುವ ಪಲ್ಸ್ ಪೋಲಿಯೊ ಕಾರ್ಯಕ್ರಮದ ಪೂರ್ವಸಿದ್ಧತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸದರಿ ಕಾರ್ಯಕ್ರಮದಲ್ಲಿ ಐದು ವರ್ಷ ಒಳಪಟ್ಟ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡಲಾಗುವುದು ಎಂದು ತಿಳಿಸಿದರು. ಪಲ್ಸ್ ಪೋಲಿಯೊ ಕುರಿತಾಗಿ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದರು.

## ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಜನಜಾಗೃತಿ ಹೆಚ್ಚಿದರೂ ನಿಲ್ಲುತ್ತಿಲ್ಲ ಪೋಕ್ಸೋ ಪ್ರಕರಣ, ಯುವಕರು ಪ್ರೀತಿಗೆ ಬಲಿಯಾಗಿ ಜೈಲು ಸೇರುತ್ತಿದ್ದಾರೆ

# ಕಾರಾಗೃಹದಲ್ಲಿ ಪೋಕ್ಸೊ ಕೇಸ್‌ಗಳೇ ಹೆಚ್ಚು

• ಉದಯವಾಹಿನಿ, ಚಿಕ್ಕಬಳ್ಳಾಪುರ

ಪೋಕ್ಸೊ ಕಾಯಿದೆ ಸಾಕಷ್ಟು ಪ್ರಬಲವಾಗಿದೆ. ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಜನಜಾಗೃತಿಯೂ ಹೆಚ್ಚಾಗೇ ನಡೆಯುತ್ತಿದೆ. ಆದರೂ ಪೋಕ್ಸೊ ಪ್ರಕರಣಗಳ ಸಂಖ್ಯೆ ಮಾತ್ರ ಕಡಿಮೆಯಾಗುತ್ತಿಲ್ಲ. ಬಿಗಿ ಕಾನೂನಿನ ಕಾರಣ ಜೈಲುಗಳಲ್ಲೂ ಹೆಚ್ಚು ಮಂದಿ ಪೋಕ್ಸೊ ಪ್ರಕರಣದಲ್ಲೇ ಬಂಧಿಗಳಾಗಿದ್ದಾರೆ. ಪೋಕ್ಸೊ ಕಾಯಿದೆ ಕುರಿತು ಅರಿವಿದ್ದರೂ ಜಿಲ್ಲೆಯಲ್ಲಿ ಯುವಕರು ಕುರುಡು ಪ್ರೇಮಕ್ಕೆ ಬಲಿಯಾಗಿ ಜೈಲು ಪಾಲಾಗುತ್ತಿರುವ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಬಿಗಿ ಕಾನೂನು ಜನಜಾಗೃತಿಯ ಹೊರತಾಗಿಯೂ ವರ್ಷದಿಂದ ವರ್ಷಕ್ಕೆ ಪೋಕ್ಸೊ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಸಮಾಜದಲ್ಲಿ ಆತಂಕಕ್ಕೆ ಕಾರಣವಾಗಿದೆ.

**ಮಾಹಿತಿ ಇದ್ದರೂ ಹೆಚ್ಚಳ:** ಈ ಹಿಂದೆ ಪೋಕ್ಸೊ ಕಾಯಿದೆ ಜಾಗೃತಿ ಕೊರತೆಯಿಂದ ಅಪ್ರಾಪ್ತ ಬಾಲಕಿಯರ ಮೇಲೆ ಅತ್ಯಾಚಾರ , ಲೈಂಗಿಕ ದೌರ್ಜನ್ಯ ನಡೆದರೆ ಯುವಕರು ಜೈಲು ಪಾಲಾಗುತ್ತಿದ್ದರು. ಆದರೆ, ಇತ್ತೀಚಿನ ವರ್ಷಗಳಲ್ಲಿ ಪೋಕ್ಸೊ ಕಾಯಿದೆಯಡಿ ಅಪರಾಧ ಸಾಬೀತಾದರೆ ಕಠಿಣ ಶಿಕ್ಷೆ ನೀಡಲಾಗುತ್ತಿದೆ. ಏನೆಲ್ಲಾ ಸಮಸ್ಯೆಯಾಗುತ್ತದೆ ಎಂಬುದರ ಮಾಹಿತಿ ಇದ್ದರೂ ಯುವಕರು ಜೈಲು ಸೇರುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಸದ್ಯ ನಗರದ ಜಿಲ್ಲಾ ಕಾರಾಗೃಹದಲ್ಲಿರುವ 282 ಕೈದಿಗಳ ಪೈಕಿ 180ಕ್ಕೂ ಹೆಚ್ಚು ಮಂದಿ ಪೋಕ್ಸೊ ಕಾಯಿದೆಯಡಿ ದಾಖಲಾದ ಯುವಕರು ಇದ್ದಾರೆ. ಪ್ರಬಲ ಕಾನೂನಿದ್ದರೂ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿತಪ್ಪಿತಸ್ಥರಾಗುತ್ತಿದ್ದು, ನಾನಾ ಚರ್ಚೆಗೆ ಗ್ರಾಸವಾಗಿದೆ.


ಜೈಲಿನಲ್ಲಿ ಕೊಳೆಯುವ ಪರಿಸ್ಥಿತಿ

**ಬಾಲ್ಯದಲ್ಲೇ ಪ್ರೀತಿಯ ಜಾಢ್ಯ:** 2012ರಿಂದ ಪೋಕ್ಸೊ ಕಾಯಿದೆ ಆರಂಭವಾಗಿದೆ, ಅಂದಿನಿಂದಲೇ ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾಯಿದೆ ಕುರಿತು ಕಟ್ಟುನಿಟ್ಟಿನ ಕ್ರಮ ವಹಿಸುವುದರ ಜತೆಗೆ ಶಾಲಾ ಕಾಲೇಜುಗಳಲ್ಲಿನಿರಂತರ ಜಾಗೃತಿ ಮೂಡಿಸುವ ಕೆಲಸಗಳು ನಡೆಯುತ್ತಿವೆ. ಇಷ್ಟಾದರೂ 18 ವರ್ಷ ಪೂರ್ಣಗೊಳ್ಳದ ಬಾಲಕಿಯರನ್ನು ಯುವಕರು ಪ್ರೀತಿಸಿ ಕೊನೆಗೆ ಠಾಣೆ ಮೆಟ್ಟಿಲೇರುವ ಪ್ರಕರಣಗಳು ಹೆಚ್ಚಾಗುತ್ತಿರುವುದು ಕಳವಳಕ್ಕೆ ಕಾರಣವಾಗಿದೆ.

**ಯುವಕರ ಭವಿಷ್ಯಕ್ಕೆ ತೊಂದರೆ:** ಹದಿಹರೆಯದ ಪ್ರೇಮ ಪ್ರಕರಣಗಳಲ್ಲಿ ಹೆಚ್ಚಾಗಿ ಬಾಲಕಿಯ ಮನೆಯವರು ಪೊಲೀಸ್ ಠಾಣೆಯಲ್ಲಿಪ್ರಕರಣ ದಾಖಲಿಸಿದಾಗ ಪೋಕ್ಸೊ ಕಾಯಿದೆಯಡಿ ಪ್ರಕರಣ ದಾಖಲಾಗುತ್ತದೆ. ಆಗ ಆರೋಪಿಗೆ ಜೈಲು ಶಿಕ್ಷೆ ಗ್ಯಾರಂಟಿ ಇಂತಹ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಲೇ ಇವೆ. ಹೀಗಾಗಿ ಚಿಕ್ಕ ವಯಸ್ಸಿನಲ್ಲೇ ಪ್ರೇಮಪಾಶಕ್ಕೆ ಸಿಲುಕಿ ಜೈಲು ಪಾಲಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಭವಿಷ್ಯ ಕಟ್ಟಿಕೊಳ್ಳುವ ಹೊತ್ತಲ್ಲಿಪ್ರೇಮ ಪ್ರೀತಿಯ ಆಕರ್ಷಣೆಗೆ ಓಡಿ ಹೋಗಿ ಪ್ರೇಮ ವಿವಾಹವಾಗುತ್ತಿರುವ ಪ್ರಕರಣಗಳು ಪೋಕ್ಸೊ ಪ್ರಕರಣದಡಿ ದಾಖಲಾಗುತ್ತಿವೆ. ಇಂತಹ ಪ್ರಕರಣಗಳಲ್ಲಿವಯಸ್ಸಿನ ಕಾರಣ ಯುವಕರು ಜೈಲಿನಲ್ಲಿ ಕೊಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ.

**635 ಪ್ರಕರಣ ದಾಖಲು:** 2022 ರಿಂದ ಈ ವರ್ಷದ ನವೆಂಬರ್ ಅಂತ್ಯದವರೆಗೂ ಜಿಲ್ಲೆಯಲ್ಲಿ ಒಟ್ಟು 635ಕ್ಕೂ ಹೆಚ್ಚು ಪೋಕ್ಸೊ ಪ್ರಕರಣಗಳು ದಾಖಲಾಗಿವೆ. 2022ರಲ್ಲಿ141, 2023ರಲ್ಲಿ169, 2024ರಲ್ಲಿ190, 2025ರಲ್ಲಿಈವರೆಗೆ 135 ಪ್ರಕರಣಗಳು ದಾಖಲಾಗಿವೆ. ಇಷ್ಟೂ ಪ್ರಕರಣಗಳ ಪೈಕಿ 4 ಮಂದಿಗೆ ಶಿಕ್ಷೆಯಾಗಿದ್ದು, ಉಳಿದ ಪ್ರಕರಣಗಳು ವಿಚಾರಣೆಯ ನಾನಾ ಹಂತಗಳಲ್ಲಿವೆ.

ಪೋಕ್ಸೊ ಪ್ರಕರಣಗಳು ಹೆಚ್ಚಾಗಲು ಬಡತನ, ಪೋಷಕರ ನಿರ್ಲಕ್ಷ್ಯ, ಅರಿವಿನ ಕೊರತೆ, ಹದಿಹರೆಯದ ಪ್ರೇಮ ಸೇರಿದಂತೆ ನಾನಾ ಕಾರಣಗಳಿವೆ. ಇದೇ ಕಾರಣಕ್ಕೆ ಇಂತಹ ಪ್ರಕರಣಗಳು ಮರುಕಳಿಸಬಾರದು ಎಂಬ ಕಾರಣಕ್ಕೆ ಪೋಕ್ಸೊದಂತಹ ಹಲವು ಕಾನೂನು ಕ್ರಮಗಳನ್ನು ತಂದಿದ್ದರೂ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇವುಗಳಿಗೆ ಕಡಿವಾಣ ಹಾಕುವುದೇ ಈಗ ದೊಡ್ಡ ಸವಾಲಾಗಿ ಪರಿಣಮಿಸಿದೆ.



ನಗರದ ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ ವೇಳೆ ಕಾರಾಗೃಹದಲ್ಲಿರುವ 282 ಕೈದಿಗಳ ಪೈಕಿ 180ಕ್ಕೂ ಹೆಚ್ಚು ಕೈದಿಗಳು ಪೋಕ್ಸೊ ಕಾಯಿದೆ ಅಡಿ ದಾಖಲಾದ ಯುವಕರಿದ್ದಾರೆ. ಇದರ ಬಗ್ಗೆ ಬಹಳ ಬೇಸರವೂ ಆಯಿತು. ನಮ್ಮ ಯುವ ಪಡೆ ಎತ್ತ ಸಾಗುತ್ತಿದೆ, ಸಮಾಜದ ಪ್ರತಿಯೊಬ್ಬರು ಈ ತರಹದ ವಿಚಾರಗಳ ಬಗ್ಗೆ ಗಮನ ಹರಿಸುವುದು ಸೂಕ್ತ.

– ಶಶಿಧರ್ ಕೋಸಂಬೆ, ಅಧ್ಯಕ್ಷ, ಮಕ್ಕಳ ರಕ್ಷಣಾ ಆಯೋಗ

ಜಿಲ್ಲೆಯಲ್ಲಿ ಪೋಕ್ಸೊ ಕಾನೂನು ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಪೋಷಕರಲ್ಲಿಅರಿವು ಮೂಡಿಸಲು ನಾನಾ ಕ್ರಮಗಳನ್ನು ಕೈಗೊಂಡಿದ್ದೇವೆ. ಶಾಲಾ ಕಾಲೇಜುಗಳಿಗೆ ತೆರಳಿ ಪೋಕ್ಸೊ ಪ್ರಕರಣದ ಗಂಭೀರತೆಯ ಅರಿವು ಮಾಡಿಸುತ್ತಿದ್ದೇವೆ. ಬಾಲ್ಯ ವಿವಾಹಕ್ಕೂ ಕಡಿವಾಣ ಹಾಕುತ್ತಿದ್ದು, 18 ವರ್ಷ ಒಳಗಿನ ಬಾಲಕಿಯರನ್ನು ಮದುವೆಯಾದರೆ ಅವರ ಮೇಲೆ ಪೋಕ್ಸೊ ಪ್ರಕರಣ ದಾಖಲು ಮಾಡುತ್ತಿದ್ದೇವೆ. 16-17 ವರ್ಷ ಮೇಲ್ಪಟ್ಟವರು ಮನೆಗಳಿಂದ ಓಡಿ ಹೋಗುವ ಪ್ರಕರಣಗಳು ಹೆಚ್ಚಾಗುತ್ತಿವೆ.

- ನೌತಾಜ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ

ಅಂತರಾಳದಿಂದ...
EDITORIAL

# ವಾಯು ಮಾಲಿನ್ಯ: ಉಸಿರಾಡಲು ಒದ್ದಾಡುತ್ತಿರುವ ಸರಕಾರ

ಭಾರತದ ನಗರಗಳು ಇತ್ತೀಚಿನ ದಿನಗಳಲ್ಲಿ ವಾಯು ಮಾಲಿನ್ಯಗಳಿಗಾಗಿ ವಿಶ್ವಮಟ್ಟದಲ್ಲಿ ಸುದ್ದಿಯಾಗುತ್ತಿವೆ. ಅಂತರ್‌ರಾಷ್ಟ್ರೀಯ ವರದಿಗಳು ವಾಯುಮಾಲಿನ್ಯದಲ್ಲಿ ಭಾರತದ ಕಳಪೆ ಸಾಧನೆಗಳ ಕಡೆಗೆ ಬೆಟ್ಟು ಮಾಡುತ್ತಿವೆ. ಇತ್ತ ಅಡಿಗೆ ಬಿದ್ದರೂ ಮೂಗು ಮೇಲೆ ಎಂಬಂತೆ, ಅಂತರ್‌ರಾಷ್ಟ್ರೀಯ ಸಂಸ್ಥೆಗಳು ಪ್ರಕಟಿಸುವ ವಾಯು ಗುಣಮಟ್ಟದ ಶ್ರೇಯಾಂಕಗಳಿಗೆ ಅಧಿಕೃತ ಮಾನ್ಯತೆ ಇಲ್ಲ ಎಂದು ಸ್ಪಷ್ಟನೆ ನೀಡುವ ಮೂಲಕ ಕೇಂದ್ರ ಸರಕಾರ ತನ್ನ ಮಾನ ಉಳಿಸಿಕೊಳ್ಳುವ ವ್ಯರ್ಥ ಪ್ರಯತ್ನದಲ್ಲಿದೆ. ಅಸ್ಸಾಮಿನ ಬರ್ನಿಹಾಟ್ ಅಗ್ರಸ್ಥಾನದಲ್ಲಿದ್ದರೆ, ಹೊಸದಿಲ್ಲಿಯನ್ನು ವಿಶ್ವದ ಅತಿ ಹೆಚ್ಚು ಮಾಲಿನ್ಯಗೊಂಡ ರಾಜಧಾನಿ ಎಂದು ಗುರುತಿಸಲಾಗಿದೆ. ಕಳೆದ ಕೆಲವು ತಿಂಗಳುಗಳಿಂದ ವಾಯುಮಟ್ಟ ಸೂಚ್ಯಂಕ ಅಪಾಯಕಾರಿ ಮಟ್ಟಕ್ಕೆ ಕುಸಿದಿರುವುದು ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಲೇ ಇದೆ. ಸಂಸತ್‌ನಲ್ಲಿ ಈ ಬಗ್ಗೆ ಸ್ಪಷ್ಟೀಕರಣ ನೀಡಿದ ಕೇಂದ್ರ ಸರಕಾರವು, ದೇಶವು ವಾಯು ಮಾಲಿನ್ಯ ಸಮಸ್ಯೆಯನ್ನು ಎದುರಿಸಲು ತನ್ನದೇ ಆದ ಮಾನದಂಡಗಳನ್ನು ಹೊಂದಿದೆ. ಅಂತರ್‌ರಾಷ್ಟ್ರೀಯ ಮಾನದಂಡಗಳಿಗೆ ದೇಶ ಬದ್ಧವಾಗಿರಬೇಕಾಗಿಲ್ಲ ಎನ್ನುತ್ತಾ ದೇಶದ ಕಳಪೆ ವಾಯು ಮಾಲಿನ್ಯವನ್ನು ಸಮರ್ಥಿಸಿಕೊಳ್ಳಲು ಮುಂದಾಗಿದೆ. ಈ ಹಿಂದೆ ಭಾರತವು ಹಸಿವಿನ ಸೂಚ್ಯಂಕದಲ್ಲಿ ಅತ್ಯಂತ ಕಳಪೆ ಸಾಧನೆ ಮಾಡಿದಾಗಲೂ ಸರಕಾರ ಸೂಚ್ಯಂಕಕ್ಕೆ ಅನುಸರಿಸಿದ ಮಾನದಂಡವೇ ಸರಿಯಿಲ್ಲ ಎಂದು ಹೇಳಿ ವರದಿಯನ್ನು ನಿರಾಕರಿಸಿತ್ತು. ವಾಯು ಮಾಲಿನ್ಯಕ್ಕೆ ಸಂಬಂಧಿಸಿಯೂ ಸರಕಾರ ಅದೇ ವಾದವನ್ನು ಮುಂದಿಡುತ್ತಿದೆ.ಕಳೆದ ಡಿಸೆಂಬರ್‌ನಲ್ಲಿ ದಿಲ್ಲಿಯಲ್ಲಿ ಸಾರ್ವಜನಿಕರು ಹೆಚ್ಚುತ್ತಿರುವ ವಾಯುಮಾಲಿನ್ಯ ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತಿದೆ ಎಂದು ಬೀದಿಗಿಳಿದು ಪ್ರತಿಭಟಿಸಿದ್ದರು. ಈ ಸಂದರ್ಭದಲ್ಲಿ ಆಕ್ರೋಶಿತ ಪ್ರತಿಭಟನಾಕಾರರು ಪ್ರತಿಭಟನೆಯನ್ನು ತಡೆಯಲು ಯತ್ನಿಸಿದ ಪೊಲೀಸರ ವಿರುದ್ಧ ದಾಳಿ ನಡೆಸಿದರು. ಸುಮಾರು 20 ಮಂದಿ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿದರು. ಇವರೆಲ್ಲರೂ ವಿಶ್ವಸಂಸ್ಥೆಯ ವರದಿಯನ್ನು ಮುಂದಿಟ್ಟು ಪ್ರತಿಭಟನೆ ನಡೆಸಿರುವುದಲ್ಲ. ಪರಿಸರ ಮಾಲಿನ್ಯದ ನೇರ ಸಂತ್ರಸ್ತರು ಇವರು. ವಿಶ್ವಸಂಸ್ಥೆ ಅನುಸರಿಸಿದ ಮಾನದಂಡದಲ್ಲಿ ತಪ್ಪಿದೆ ಎಂದು ಹೆಗಲು ಜಾರಿಸಿಕೊಳ್ಳಲು ನೋಡುತ್ತಿರುವ ಸರಕಾರ, ಪರಿಸರ ಮಾಲಿನ್ಯದ ನೇರ ಸಂತ್ರಸ್ತರಾಗಿರುವ ದಿಲ್ಲಿಯ ಜನರ ಆಕ್ರೋಶಕ್ಕೆ ಏನು ಉತ್ತರಿಸುತ್ತದೆ? ವಿಪರ್ಯಾಸವೆಂದರೆ ದಿಲ್ಲಿಯಲ್ಲಿ ವಾಯು ಮಾಲಿನ್ಯದ ವಿರುದ್ಧ ಪ್ರತಿಭಟನೆ ಮಾಡಿದ ಜನರಿಗೆ ನಕ್ಸಲ್ ಸಂಪರ್ಕವಿದೆ ಎಂದು ಸರಕಾರ ಆರೋಪಿಸಲು ಮುಂದಾಯಿತು. ಪ್ರತಿಭಟನೆಯಲ್ಲಿ ಎನ್‌ಕೌಂಟರ್‌ಗೆ ಬಲಿಯಾಗಿರುವ ನಕ್ಸಲೀಯನ ಪರವಾಗಿ ಪೋಸ್ಟರ್ ಪ್ರದರ್ಶಿಸಲಾಗಿತ್ತು ಎಂದು ಆರೋಪಿಸುವ ಮೂಲಕ ಈ ಪ್ರತಿಭಟನೆಗೆ ನಕ್ಸಲ್‌ವಾದದ ಜೊತೆ ಸಂಬಂಧ ಜೋಡಿಸಿತು. ಭಾರತದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಗಿಂತ ಎಂಟು ಪಟ್ಟು ಹೆಚ್ಚು ವಾಯು ಮಾಲಿನ್ಯವಿದೆ. ಇದರಿಂದಾಗಿ ಭಾರತೀಯರ ಜೀವಿತಾವಧಿ 3.5 ವರ್ಷ ಕಡಿತವಾಗುತ್ತಿದೆ. ಅಸ್ತಮಾ ಸೇರಿದಂತೆ ಹಲವು ರೋಗಗಳಿಗೆ ಅವರು ಬಲಿಯಾಗುತ್ತಿದ್ದಾರೆ. ಮಾಲಿನ್ಯ ಕೇವಲ ಉಸಿರಾಟದ ಸಮಸ್ಯೆಯಾಗಿ ಉಳಿದಿಲ್ಲ.

> **ಇತ್ತೀಚೆಗೆ ಸ್ವಿಸ್‌ವಾಯು ಗುಣಮಟ್ಟ ಮೇಲ್ವಿಚಾರಣಾ ಸಂಸ್ಥೆಯ ದತ್ತಾಂಶವು ಭಾರತವು 2024ಕ್ಕೆ ವಿಶ್ವಸಂಸ್ಥೆಯ ವಾಯು ಗುಣಮಟ್ಟ ಮಾನದಂಡಗಳನ್ನು ಪೂರೈಸಲು ವಿಫಲವಾಗಿದೆ ಎನ್ನುವುದನ್ನು ಬಹಿರಂಗಪಡಿಸಿತ್ತು. ಕಳೆದ ಮಾರ್ಚ್‌ನಲ್ಲಿ ಬಿಡುಗಡೆಯಾದ ವರದಿಯ ಪ್ರಕಾರ ಭಾರತವು ವಾಯು ಮಾಲಿನ್ಯದಲ್ಲಿ ಜಾಗತಿಕವಾಗಿ ಐದನೇ ಸ್ಥಾನದಲ್ಲಿದೆ. ವಿಶ್ವದ 20 ಅತಿ ಹೆಚ್ಚು ಮಾಲಿನ್ಯಗೊಂಡ ನಗರಗಳಲ್ಲಿ 13 ನಗರಗಳು ಭಾರತದಲ್ಲಿವೆ ಎಂದು ವರದಿ ಹೇಳುತ್ತಿದೆ.**

ದೇಹ ಮತ್ತು ಮೆದುಳುಗಳ ಮೇಲೆ ನೇರ ಪರಿಣಾಮಗಳನ್ನು ಬೀರುತ್ತಿದೆ. ಸ್ಟೇಟ್ ಆಫ್ ಗ್ಲೋಬಲ್ ಏರ್ 2025ರ ವರದಿಯ ಪ್ರಕಾರ, ಭಾರತದಲ್ಲಿ ದಾಖಲಾಗಿರುವ ಸುಮಾರು 20 ಲಕ್ಷ ಸಾವುಗಳು ವಾಯುಮಾಲಿನ್ಯಕ್ಕೆ ಸಂಬಂಧಿಸಿದ್ದಾಗಿದೆ. 2000ದ ಬಳಿಕ ಇದು ಶೇ. 43ರಷ್ಟು ಹೆಚ್ಚಳವಾಗಿದೆ. ಭಾರತದಲ್ಲಿ ಪ್ರತಿ ಒಂದು ಲಕ್ಷ ಜನರಲ್ಲಿ ವಾಯುಮಾಲಿನ್ಯಕ್ಕೆ ಸಂಬಂಧಿಸಿದ 186 ಸಾವುಗಳು ಸಂಭವಿಸುತ್ತಿವೆ. ಇದು ಹೆಚ್ಚು ಆದಾಯದ ದೇಶಗಳಿಗೆ ಹೋಲಿಸಿದರೆ ಸುಮಾರು 10 ಪಟ್ಟು ಅಧಿಕವಾಗಿದೆ. ಹೆಚ್ಚುತ್ತಿರುವ ವಾಯುಮಾಲಿನ್ಯಗಳ ವಿರುದ್ಧ ಸುಪ್ರೀಂಕೋರ್ಟ್ ಪದೇ ಪದೇ ಆದೇಶಗಳನ್ನು ನೀಡುತ್ತಾ ಬರುತ್ತಿದೆ. ಇದು ಕೇವಲ ದಿಲ್ಲಿಗೆ ಮಾತ್ರ ಸಂಬಂಧಿಸಿ ಸಮಸ್ಯೆಯಲ್ಲ. ಮುಂಬೈಯಲ್ಲಿ ಹೆಚ್ಚುತ್ತಿರುವ ವಾಯುಮಾಲಿನ್ಯದ ವಿರುದ್ಧ ಹೈಕೋರ್ಟ್ ಕಳೆದ ಜನವರಿಯಲ್ಲಿ ಸೂಚನೆಗಳನ್ನು ನೀಡಿತ್ತು. ಬೆಂಗಳೂರಿನಲ್ಲೂ ವಾಯು ಗುಣಮಟ್ಟ ಕಳಪೆಯಾಗುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ವಾಯು ಮಾಲಿನ್ಯದ ಕಾರಣದಿಂದಾಗಿ ದಿಲ್ಲಿಯಲ್ಲಿ ನಡೆಯುತ್ತಿರುವ ಅಧಿವೇಶನವನ್ನೇ ಬೇರೆಡೆಗೆ ವರ್ಗಾಯಿಸುವ ಬಗ್ಗೆ ಸಲಹೆಗಳು ಸಂಸದರಿಂದಲೇ ಬರುತ್ತಿವೆ. ಸರಕಾರ ವಾಯುಮಾಲಿನ್ಯವನ್ನು ಮುಚ್ಚಿಡಲು ಪ್ರಯತ್ನ ನಡೆಸುತ್ತಿದ್ದರೂ, ಅದು ಸ್ವತಃ ಉಸಿರಾಡುವುದಕ್ಕೆ ಹೆಣಗಾಡುತ್ತಿರುವುದು, ಸಂಸತ್ತಿನಲ್ಲಿ ಸ್ಪಷ್ಟೀಕರಣ ನೀಡುವ ಹೆಸರಿನಲ್ಲಿ ಕೆಮ್ಮುತ್ತಿರುವುದನ್ನು ದೇಶದ ಜನತೆ ಗಮನಿಸುತ್ತಿದ್ದಾರೆ. ದೇಶದ ಪ್ರಮುಖ ನದಿಗಳು ಈಗಾಗಲೇ ಕುಡಿಯುವುದಕ್ಕೆ ಅರ್ಹವಲ್ಲ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಷ್ಟಾದರೂ ಗಂಗಾನದಿಯೂ ಸೇರಿದಂತೆ ದೇಶದ ಪ್ರಮುಖ ನದಿಗಳ ಮಾಲಿನ್ಯ ತಡೆಯಲು ಕಠಿಣ ಕ್ರಮ ತೆಗೆದುಕೊಳ್ಳಲು ಸರಕಾರ ವಿಫಲವಾಗಿದೆ. ಸರಕಾರದ ನೇತೃತ್ವದಲ್ಲೇ ನಡೆದ ಬೃಹತ್ ಕುಂಭಮೇಳ ನದಿಗಳನ್ನು ಇನ್ನಷ್ಟು ಕೆಡಿಸಿ ಹಾಕಿತು. ಇದೀಗ ವಾಯುಮಾಲಿನ್ಯದ ವಿಷಯದಲ್ಲೂ ಸರಕಾರ ಬೇಜವಾಬ್ದಾರಿಯನ್ನು ಪ್ರದರ್ಶಿಸುತ್ತಿದೆ. ಕನಿಷ್ಠ ಹಬ್ಬಗಳ ಹೆಸರಿನಲ್ಲಿ ಬಳಸುವ ಪಟಾಕಿಗಳಿಗೆ ಕಡಿವಾಣ ಹಾಕಿದರೂ ಈ ಮಾಲಿನ್ಯದಿಂದ ನಗರಗಳನ್ನು ಸಣ್ಣ ಪ್ರಮಾಣದಲ್ಲಿ ರಕ್ಷಿಸಿದಂತಾಗುತ್ತದೆ. ಕಳೆದ ವರ್ಷ ನವೆಂಬರ್‌ನಲ್ಲಿ ದೀಪಾವಳಿ ಹಬ್ಬದ ಬಳಿಕ ದಿಲ್ಲಿಯ ವಾಯುಮಾಲಿನ್ಯ ವಿಶ್ವ ಆರೋಗ್ಯ ಸಂಸ್ಥೆಯ ಸುರಕ್ಷತಾ ಮಿತಿಗಿಂತ 14 ಪಟ್ಟು ಹೆಚ್ಚಳವಾಗಿತ್ತು. ನಿಷೇಧದ ನಡುವೆಯೇ ಸಾರ್ವಜನಿಕರು ಪಟಾಕಿಗಳನ್ನು ಸಿಡಿಸಿದ್ದರು. ಸರಕಾರ ಜನರ ಬೇಜವಾಬ್ದಾರಿಯ ಮುಂದೆ ಅಸಹಾಯಕವಾಗಿತ್ತು.

# ರಾಮಾಯಣ



## ಕಬಂಧನು ಹೇಳಿದ ಸುಗ್ರೀವನ ವೃತ್ತಾಂತ

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಉತ್ತಮವಾದ ಕಮಲಗಳಿಂದ ಪರಿಮಳಯುಕ್ತವಾಗಿಯೂ ಆರೋಗ್ಯಕರವಾಗಿಯೂ ಇರುವ ಮನೋಹರವಾದ ಉದಕವನ್ನು ತಾವರೆ ಎಲೆಯ ಪೊಟ್ಟಣಗಳಲ್ಲಿ ಲಕ್ಷ್ಮಣನು ನಿನಗೆ ತಂದುಕೊಡುವನು. ಅವುಗಳನ್ನು ಸ್ವೀಕರಿಸಿ ಪಂಪಾತೀರಕ್ಕೆ ಉದಕನಿಮಿತ್ತವಾಗಿ ಬರುವ ನಾನಾ ವಿಚಿತ್ರವಾದ ಮೃಗಗಳನ್ನು ನೋಡುತ್ತ ನಿನ್ನ ಮನಸ್ಸಿನಲ್ಲಿರುವ ದುಃಖವನ್ನು ಸ್ವಲ್ಪ ಮಟ್ಟಿಗೆ ಪರಿಹರಿಸಿಕೊಳ್ಳಬಹುದು. ಆ ವನದಲ್ಲಿರುವ ಪುಷ್ಪಗಳು ಕಂದುವುದೂ ಇಲ್ಲ, ಒಣಗುವುದೂ ಇಲ್ಲ. ಅದೇನು ಕಾರಣವೆಂದರೆ : ಆ ವನದಲ್ಲಿ ತಪಸ್ಸು ಮಾಡಿಕೊಂಡಿದ್ದ ಮತಂಗನೆಂಬ ಮಹರ್ಷಿಯ ಶಿಷ್ಯರು ವನಾಂತರದಲ್ಲಿ ಸಂಚರಿಸಿ ಅಲ್ಲಲ್ಲಿರುವ ಪುಷ್ಪಗಳನ್ನು ಹೊತ್ತುಕೊಂಡು ಬರುವಾಗ ಅವರ ಶರೀರದ ಬೆವರಹನಿಗಳು ಭೂಮಿಯ ಮೇಲೆ ಬೀಳುತ್ತಿದ್ದವು. ಆ ಬಿಂದುಗಳು ಅಂಥ ಪುಷ್ಪಗಳಾಗಿವೆ. ಆ ಋಷಿಗಳೆಲ್ಲರೂ ಸ್ವರ್ಗವನ್ನೈದಿದರು. ಹಾಗಾದರೂ ಅವರ ಸೇವೆಯನ್ನು ಮಾಡಿಕೊಂಡಿದ್ದ ಶಬರಿಯೆಂಬವಳು ವಿರಕ್ತೆಯಾಗಿ ಚಿರಂಜೀವಿಯಾಗಿ ಈಗಲೂ ಇದ್ದಾಳೆ. ಶ್ರೀರಾಮ, ಸರ್ವಲೋಕಪೂಜ್ಯನಾಗಿ ಪರಮಪುರುಷಾವತಾರನಾದ ನಿನ್ನ ದರ್ಶನವನ್ನು ಮಾಡಿ ಆಕೆಯು ಸ್ವರ್ಗಲೋಕಕ್ಕೆ ಹೋಗುವಳು. ಆದಕಾರಣ ನೀನು ಅವಶ್ಯವಾಗಿ ಪಂಪಾತೀರಕ್ಕೆ ಹೋಗಿ ಅದರ ತೀರದ ಪಡುವಣ ತಡಿಯನ್ನು ಹತ್ತಿನೋಡಿದರೆ ಒಂದು ಆಶ್ರಮವು ಕಾಣಿಸುವುದು. ಆ ಆಶ್ರಮವು ಮಹಾಗೋಪ್ಯವಾಗಿರುವುದು. ಆನೆಗಳೂ ಸರ್ಪಗಳೂ ಮತಂಗಮುನಿಯ ಪ್ರಭಾವದಿಂದ ಆ ಆಶ್ರಮಕ್ಕೆ ಹೋಗಲಾರವು. ಅದರಲ್ಲಿರುವ ವನದಲ್ಲಿ ಮತಂಗ ಮುನೀಶ್ವರನು ತಪಸ್ಸು ಮಾಡಿಕೊಂಡಿದ್ದನು. ಆದ್ದರಿಂದ ಅದು ಮತಂಗವನವೆಂದು ಪ್ರಸಿದ್ಧವಾಗಿದೆ. ಋಷ್ಯಮೂಕ ಪರ್ವತವು ಪಂಪಾತೀರದ ಮೂಡಣ ಭಾಗದಲ್ಲಿ ಅನೇಕ ಪುಷ್ಪಫಲಸಮೇತವಾದ ವನಗಳಿಂದ ಮನೋಹರವಾಗಿರುವುದು. ಆ ಪರ್ವತವನ್ನು ಹತ್ತುವುದಕ್ಕೆ ಯಾರಿಗೂ ಅಸಾಧ್ಯವು.

ಅದರ ಮೇಲುಭಾಗದಲ್ಲಿ ನಿದ್ರೆ ಮಾಡತಕ್ಕವನಿಗೆ ಸ್ವಪ್ನದಲ್ಲಿ ಧನರಾಶಿಯು ಕಂಡರೆ ಎಚ್ಚರವಾದಾಗ ಅದು ಅವನಿಗೆ ದೊರೆಯುವುದು. ಆಚಾರಹೀನನು ಆ ಪರ್ವತವನ್ನು ಹತ್ತಬಾರದು. ಹತ್ತಿದರೆ ಅವನನ್ನು ರಾಕ್ಷಸರು ಎತ್ತಿಕೊಂಡು ಹೋಗಿ ಕೊಲ್ಲುವರು. ಮತಂಗಾರಣ್ಯದಲ್ಲಿರುವ ಮರಿಯಾನೆಗಳು ವಾದ್ಯಧ್ವನಿ ಮಾಡುತ್ತಿರುವುವು. ದೊಡ್ಡ ಆನೆಗಳು ಮೇಘಗಳಂತೆ ನೀಲವರ್ಣವಾಗಿಯೂ ಘನಗಾತ್ರವಾಗಿಯೂ ಅತಿವೇಗವುಳ್ಳವಾಗಿಯೂ ಇರುವುವು. ಮತ್ತೊಂದು ವನದಿಂದ ಬರುವ ಆನೆಗಳನ್ನು ತಿವಿದು ಕೆಡಹಿ ಕೊಂಬುಗಳು ರಕ್ತಮಸಗಿರುವವು. ಆ ಆನೆಗಳು ಪಂಪಾತೀರಕ್ಕೆ ಬಂದು ನಿರ್ಮಲವಾದ ಉದಕವನ್ನು ಪಾನಮಾಡಿಕೊಂಡು ವನದಲ್ಲಿ ಸಂಚರಿಸಿಕೊಂಡಿರುವುವು. ಶ್ರೀರಾಮ ಮತ್ತು ಆ ವನದಲ್ಲಿ ನೀಲವರ್ಣವಾಗಿಯೂ ಹೊಂಬಣ್ಣವಾಗಿಯೂ ಇರುವ ಕರಡಿ ಕೃಷ್ಣಸಾರಂಗ ಮೊದಲಾದ ಮೃಗಗಳು ಸಂಚರಿಸುತ್ತಿರುವುವು.

ಮುಂದುವರಿಯುವುದು...

# ಸುರಕ್ಷೆ, ಸಂಸ್ಕೃತಿ, ಶೌರ್ಯಗಳ ಜಾಗೃತಿ

• ಉದಯವಾಹಿನಿ, ದೆಹಲಿ

ದೆಹಲಿಯಲ್ಲಿ ನಡೆಯುತ್ತಿರುವ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ ಕೇವಲ ಉತ್ಸವವಲ್ಲ, ಇದು ಭಾರತದ ಸಾಂಸ್ಕೃತಿಕ ಪುನರುಜ್ಜೀವನದ ಘೋಷಣೆಯಾಗಿದೆ. ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮನ ಪುನಪ್ರ್ರತಿಷ್ಠಾಪನೆಯ ನಂತರ ಕಾಲಚಕ್ರ ಬದಲಾಗುತ್ತಿರುವುದು ಮತ್ತು ಭಾರತೀಯ ಸಂಸ್ಕೃತಿಯು ಮತ್ತೆ ಉದಯವಾಗುತ್ತಿರುವುದು ಕಂಡುಬರುತ್ತಿದೆ. ದೇಶವು ಇಂದು ಸಾಂಸ್ಕೃತಿಕ ಬದಲಾವಣೆಯ ಸ್ಥಿತಿಯನ್ನು ಅನುಭವಿಸುತ್ತಿದೆ. ಸನಾತನ ಧರ್ಮವು ಯಾರದ್ದೇ ವಿರುದ್ಧವಿಲ್ಲ; ಆದರೆ ಸನಾತನ ಪ್ರವಾಹಕ್ಕೆ ಅಡ್ಡಿಪಡಿಸುವವರನ್ನು ಸಹಿಸಲಾಗುವುದಿಲ್ಲ ಎಂದು ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಶ್ರೀ. ಗಜೇಂದ್ರ ಸಿಂಗ್ ಶೇಖಾವತ್ ಅವರು ದೃಢವಾಗಿ ಪ್ರತಿಪಾದಿಸಿದರು.

ಅವರು ನವದೆಹಲಿಯ ಭಾರತ್ ಮಂಡಪಮ್ ನಲ್ಲಿ ನಡೆದ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದಲ್ಲಿ ಮಾತನಾಡುತ್ತಿದ್ದರು. ಮಾನ್ಯ ಶೇಖಾವತ್ ಅವರು ಮುಂದುವರಿದು, ಸನಾತನ ಸಂಸ್ಥೆಯ ಸಂಸ್ಥಾಪಕರಾದ ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆ ಅವರು ಕಳೆದ 25 ವರ್ಷಗಳಲ್ಲಿ ಸಂಸ್ಥೆಯ ಕಾರ್ಯಗಳ ಮೂಲಕ ಕೇವಲ ಸಾಧಕರ ಆಧ್ಯಾತ್ಮಿಕ ಉನ್ನತಿಯನ್ನು ಮಾತ್ರವಲ್ಲ, ಬದಲಿಗೆ ಸಮಾಜದಲ್ಲಿ ನೈತಿಕತೆ, ರಾಷ್ಟ್ರಪ್ರಜ್ಞೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಧರ್ಮಚೇತನವನ್ನು ನಿರ್ಮಿಸಿದ್ದಾರೆ ಎಂದರು.

**ಕಾಶಿ-ಮಥುರಾ ಮಾತ್ರವಲ್ಲ, ದೇಶದ ಪ್ರತಿಯೊಂದು ಮಂದಿರ ಮುಕ್ತವಾಗುವವರೆಗೆ ಹೋರಾಟದ ನಿರ್ಧಾರ ಮಾಡಿ! ನ್ಯಾಯವಾದಿ ವಿಷ್ಣು ಶಂಕರ್ ಜೈನ್:** ಅನೇಕ ರಾಜ್ಯಗಳಲ್ಲಿ ಸರಕಾರವು ಕೇವಲ ಹಿಂದೂಗಳ ದೇವಸ್ಥಾನಗಳನ್ನೇಕೆ ಸ್ವಾಧೀನಪಡಿಸಿಕೊಳ್ಳುತ್ತದೆ ಸರ್ಕಾರಕ್ಕೆ ಮಸೀದಿಗಳು ಚರ್ಚ್‌ಗಳ ಅವ್ಯವಸ್ಥೆ ಕಾಣುವುದಿಲ್ಲವೇ ಸರ್ಕಾರದ ನಿಯಂತ್ರಣದಿಂದ ದೇವಸ್ಥಾನಗಳು ಯಾವಾಗ ಮುಕ್ತವಾಗಲಿವೆ ಮತ್ತು ನಾವೆಲ್ಲರೂ ಹಿಂದೂ ವಿರೋಧಿ ಕಾನೂನುಗಳನ್ನು ಕೊನೆಗೊಳಿಸುವಂತೆ ಬೇಡಿಕೆ ಇಡಬೇಕು ಕೇವಲ ಕಾಶಿ ವಿಶ್ವನಾಥ ಮತ್ತು ಶ್ರೀಕೃಷ್ಣ ಜನ್ಮಭೂಮಿ ಮಾತ್ರವಲ್ಲ, ದೇಶದ ಅತಿಕ್ರಮಣಕ್ಕೊಳಗಾದ ಪ್ರತಿಯೊಂದು ಹಿಂದೂ ಮಂದಿರವೂ ಮುಕ್ತವಾಗುವವರೆಗೆ ನಾವು ಸುಮ್ಮನೆ ಕೂರುವುದಿಲ್ಲ ಎಂಬ ನಿರ್ಧಾರವನ್ನು ಮಾಡಬೇಕು ಎಂದು ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿ ವಿಷ್ಣು ಶಂಕರ್ ಜೈನ್ ಅವರು ಕರೆ ನೀಡಿದರು.

**ಜನಸಂಖ್ಯಾ ಜಿಹಾದ್ ಅನ್ನು ತಡೆಯುವುದು ಅತ್ಯಗತ್ಯ ! - ಡಾ. ಸುರೇಶ್ ಚವ್ಹಾಣ್ಕೆ, ಸುದರ್ಶನ್ ನ್ಯೂಸ್ ನೆಟ್ವರ್ಕ್: ಹಿಂದೂಗಳು ಶಸ್ತ್ರಾಸ್ತ್ರಗಳ ಹೋರಾಟದಲ್ಲಿ ಸಮರ್ಥರಾಗಿದ್ದಾರೆ;** ಆದರೆ ಅವರು ವೈಚಾರಿಕ ಹೋರಾಟದಲ್ಲಿ ಹಿಂದುಳಿಯುತ್ತಾರೆ. ಹಿಂದೂಗಳಿಗೆ ನಾವಿಬ್ಬರು, ನಮಗಿಬ್ಬರು ಮಕ್ಕಳು ಎಂಬ ಶಿಕ್ಷಣವನ್ನು ನೀಡಲಾಯಿತು ಮತ್ತು ಇಂದು ಹಿಂದೂಗಳ ಜನನ ಪ್ರಮಾಣ ದೆಹಲಿಯಲ್ಲಿ 1.1 ಮುಂಬೈನಲ್ಲಿ 1.3 ರಷ್ಟು ದಯನೀಯ ಸ್ಥಿತಿಯಲ್ಲಿದೆ. ಅನೇಕ ದೇಶಗಳು ಜನನ ಪ್ರಮಾಣವನ್ನು ಹೆಚ್ಚಿಸುವುದರಿಂದ ಇಸ್ಲಾಮಿಕ್ ದೇಶಗಳಾಗಿವೆ, ಇನ್ನು ಕೆಲವು ದೇಶಗಳು ಒಳನುಗ್ಗುವಿಕೆಯಿಂದ ಇಸ್ಲಾಮಿಕ್ ಆಗಿವೆ. ಒಳನುಗ್ಗುವವರನ್ನು ದೇಶದಿಂದ ಹೊರಹಾಕಲು ದೇಶದಲ್ಲಿ ಎನ್.ಆರ್.ಸಿ. ಜಾರಿಗೊಳಿಸಬೇಕು ಎಂದು ಸುದರ್ಶನ್ ನ್ಯೂಸಿನ ಸಂಪಾದಕರಾದ ಡಾ. ಸುರೇಶ್ ಚವ್ಹಾಣ್ಕೆ ಅವರು ಪ್ರತಿಪಾದಿಸಿದರು.




**ಶಂಖನಾದ ಮಹೋತ್ಸವದಿಂದ ಧರ್ಮ-ಅಧರ್ಮದ ಯುದ್ಧದಲ್ಲಿ ಧರ್ಮದ ವಿಜಯ ನಿಶ್ಚಿತ ! - ಶ್ರೀ. ಅಲೋಕ್ ಕುಮಾರ್, ವಿಹಿಂಪ**

> ಧರ್ಮ-ಅಧರ್ಮದ ಯುದ್ಧದ ಸಮಯದಲ್ಲಿ ಶಂಖನಾದವನ್ನು ಮಾಡಲಾಗುತ್ತದೆ. ಭಾರತದ ರಾಜಧಾನಿಯಲ್ಲಿ ನಡೆಯುತ್ತಿರುವ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದಿಂದಾಗಿ ಧರ್ಮ-ಅಧರ್ಮದ ಯುದ್ಧದಲ್ಲಿ ಧರ್ಮದ ವಿಜಯ ನಿಶ್ಚಿತ ಎಂಬ ವಿಶ್ವಾಸ ಮೂಡಿತು. ದೆಹಲಿಯಲ್ಲಿ ಇತ್ತೀಚೆಗೆ ಭಯೋತ್ಪಾದಕ ದಾಳಿ ನಡೆಯಿತು. ಈ ಭಯೋತ್ಪಾದಕರು ಉನ್ನತ ಶಿಕ್ಷಣ ಪಡೆದವರಾಗಿದ್ದರೂ, ಜಿಹಾದ್ ಬಡತನ, ಅನಕ್ಷರತೆ, ಮೂಲಭೂತ ಸೌಕರ್ಯಗಳ ಕೊರತೆ ಇತ್ಯಾದಿಗಳಿಂದ ಉಂಟಾಗುವ ಹತಾಶೆಯಿಂದಗಿದೆ ಎಂಬ ಭ್ರಮೆಯು ನಾಶವಾಗಿದೆ. ಅಲ್ಪಸಂಖ್ಯಾತರಿಗೆ ನೀಡಿದ ವಿಶೇಷ ಸವಲತ್ತುಗಳ ಬಗ್ಗೆ ಪುನರ್ವಿಮರ್ಶೆಯಾಗಬೇಕು ಎಂದು ವಿಶ್ವ ಹಿಂದೂ ಪರಿಷತ್ತಿನ ಅಂತಾರಾಷ್ಟ್ರೀಯ ಕಾರ್ಯಾಧ್ಯಕ್ಷ ಶ್ರೀ. ಅಲೋಕ್ ಕುಮಾರ್ ಹೇಳಿದರು.

# ಆರೋಗ್ಯದಲ್ಲಿ ಹಿಂಗೆಲ್ಲಾ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿದ್ದರೆ

ಇಂದಿನ ವೇಗದ ಜೀವನದಲ್ಲಿ ಒತ್ತಡವು ಸಾಮಾನ್ಯ ಸಮಸ್ಯೆಯಾಗಿದೆ. ಒತ್ತಡವನ್ನು ಬೇಡದ ಅತಿಥಿ ಎಂದು ಪರಿಗಣಿಸಬಹುದು, ಯಾವುದೇ ಸಮಯದಲ್ಲಿ ಯಾರ ಮನೆ ಬಾಗಿಲಿಗೆ ಬರಬಹುದು.ಈ ಒತ್ತಡ ಎನ್ನುವುದು ಇಂದಿನ ದಿನಗಳಲ್ಲಿ ಮಕ್ಕಳು, ಯುವಕರು ಅಥವಾ ವೃದ್ಧರು ಆಗಿರಲಿ ಯಾವುದೇ ವಯಸ್ಸಿನ ಜನರ ಮೇಲೆ ಪರಿಣಾಮ ಬೀರುತ್ತದೆ. ಒತ್ತಡವು ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಇಂದಿನ ವೇಗದ ಜೀವನಶೈಲಿಯಲ್ಲಿ ಒತ್ತಡ ಎನ್ನುವುದು ಈಗ ಪ್ರತಿಯೊಬ್ಬರ ಜೀವನದಲ್ಲಿಯೂ ಸಾಮಾನ್ಯ ಸಮಸ್ಯೆ ಆಗಿಬಿಟ್ಟಿದೆ ಅತಿಯಾದ ಕೆಲಸದ ಒತ್ತಡ, ಸಾಂಸಾರಿಕ ಜೀವನದಲ್ಲಿ ನೆಮ್ಮದಿ ಇಲ್ಲದಿರುವುದು, ಮನಸ್ಸಿಗೆ ಆಘಾತ ಉಂಟು ಮಾಡುವಂತಹ ದಿನನಿತ್ಯ ಎದುರಾಗುವ ಅಹಿತಕರ ಘಟನೆಗಳು, ದಿನನಿತ್ಯದ ಮನೆಯ ಖರ್ಚಿಗೂ ಹಣ ಹೊಂದಿಸಲಾಗದ ಪರಿಸ್ಥಿತಿ, ಇವೆಲ್ಲಾದರ ಜೊತೆಗೆ ದೀರ್ಘಕಾಲದ ಆರೋಗ್ಯ ಸಮಸ್ಯೆ ಹೀಗೆ ಹಲವಾರು ಕಾರಣಗಳಿಂದಾಗಿ ಇಂದು ಮನುಷ್ಯ ಅತಿಯಾಗಿ ಒತ್ತಡಕ್ಕೆ ಒಳಗಾಗಿ, ತನ್ನೆಲ್ಲಾ ಸಮಸ್ಯೆಗಳನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು ತಾನೇ ನೋವು ಅನುಭವಿಸುತ್ತಾ, ತನ್ನ ಮನಸಿನ ನೆಮ್ಮದಿ ಕಳೆದುಕೊಳ್ಳುವುದರ ಜೊತೆಗೆ ಮಾನಸಿಕವಾಗಿ ತುಂಬಾನೇ ಕುಗ್ಗಿ ಕೊನೆಗೆ ಮಾನಸಿಕ ಖಿನ್ನತೆಗೆ ಒಳಗಾಗುತ್ತಾನೆ. ಈ ಮಾನಸಿಕ ಖಿನ್ನತೆ ಎನ್ನುವುದು ಸಮಸ್ಯೆಯಿಂದ ಇಂದಿನ ದಿನಗಳಲ್ಲಿ ಬಹಳಷ್ಟು ಜನರು ಬಳಲುತ್ತಿದ್ದಾರೆ.

> **ಜೀರ್ಣಕಾರಿ ಸಮಸ್ಯೆಗಳು ಹೊಟ್ಟೆನೋವು, ಹೊಟ್ಟೆಯುಬ್ಬರ, ಮಲಬದ್ಧತೆ, ಅತಿಸಾರ ಅಥವಾ ಕೆರಳಿಸುವ ಕರುಳಿನ ಸಹಲಕ್ಷಣಗಳಂತಹ ಸಮಸ್ಯೆಗಳು ಒತ್ತಡದ ನೇರ ಲಕ್ಷಣಗಳಾಗಿವೆ. ಕರುಳು ಮತ್ತು ಮೆದುಳು ಕರುಳು-ಮೆದುಳಿನ ಅಕ್ಷ ಎಂದು ಕರೆಯಲ್ಪಡುವ ಆಳವಾದ ಸಂಪರ್ಕವನ್ನು ಹೊಂದಿವೆ.**

**ಒತ್ತಡ ನಿಯಂತ್ರಣ ತಪ್ಪುತ್ತಿದ್ದರೆ :** ಇಂದಿನ ದಿನಗಳಲ್ಲಿ ಶಾಲೆಗೆ ಹೋಗುವ ಯುಕೆಜಿ ಮಕ್ಕಳಿಂದ ಹಿಡಿದು ಹಿರಿಯರ ವರೆಗೂ ಕೂಡ ಈಗ ಒತ್ತಡ ಎನ್ನುವುದು ಸಾಮಾನ್ಯ ಸಮಸ್ಯೆಯಾಗಿ ಬಿಟ್ಟಿದೆ.ಅದು ಎಲ್ಲರಿಗೂ ಸಂಭವಿಸುತ್ತದೆ. ಆದರೆ ಈ ಒತ್ತಡವು ದೀರ್ಘ ಕಾಲದವರೆಗೆ ಮುಂದುವರಿದಾಗ, ದೇಹವು ಅದನ್ನು ನಿಭಾಯಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳಲು ಪ್ರಾರಂಭಿಸಿದಾಗ, ಅದು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು. ಅಂತಹ ಪರಿಸ್ಥಿತಿಯಲ್ಲಿ, ನಿಮ್ಮ ದೇಹಕ್ಕೆ ಇನ್ನು ಮುಂದೆ ಒತ್ತಡವನ್ನು ನಿಭಾಯಿ ಸಲು ಸಾಧ್ಯವಿಲ್ಲ ಮತ್ತು ನಿಮಗೆ ಸಹಾಯದ ಅಗತ್ಯವಿದೆ ಎಂಬುದನ್ನು ಗುರು ತಿಸುವುದು ಮುಖ್ಯ. ಇದನ್ನು ಪತ್ತೆಹಚ್ಚಲು ನಿಮಗೆ ಸಹಾಯ ಮಾಡುವ ಕೆಲವೊಂದು ರೋಗಲಕ್ಷಣಗಳ ಬಗ್ಗೆ ಇಂದಿನ ಲೇಖನದಲ್ಲಿ ನೋಡೋಣ



**ಈ ಬಗ್ಗೆ ತಜ್ಞರು ಹೇಳುವುದೇನು :** ಈ ಬಗ್ಗೆ ಡಾ. ಸಪರೆ ರೋಹಿತ್ ಕನ್ಸಲ್ಟೆಂಟ್ ಸೈಕಿಯಾಟ್ರಿ, ಸ್ಪರ್ಶ ಆಸ್ಪತ್ರೆ, ಯಲಹಂಕ ಬೆಂಗಳೂರು ಇವರು ಜೊತೆ ಹಂಚಿ ಕೊಂಡಿರುವ ಮಾಹಿತಿಯ ಪ್ರಕಾರ ಮನುಷ್ಯನ ಆರೋಗ್ಯದಲ್ಲಿ ಒತ್ತಡದ ಹಾರ್ಮೋನು ನಿಯಂತ್ರಣ ತಪ್ಪಿದಾಗ ಅದರ ರೋಗಲಕ್ಷಣಗಳು, ಸಾಮಾನ್ಯ ಆರೋಗ್ಯ ಸಮಸ್ಯೆಗಳಂತೆಯೇ ಇರುತ್ತದೆ. ನಿರಂತರ ತಲೆನೋವು, ದವಡೆಯ ಬಿಗಿತ, ಆಮ್ಲೀಯತೆ ಅಥವಾ ವಿವರಿಸಲಾಗದ ಆಯಾಸವು ನರಮಂಡಲವು ಅತಿಯಾಗಿ ಮುಳುಗಿರುವ ಆರಂಭಿಕ ದೈಹಿಕ ಸೂಚನೆಗಳಾಗಿವೆ. ಒತ್ತಡದ ಮಟ್ಟವು ಹೆಚ್ಚಾದಾಗ ದೇಹವು ಸ್ವಯಂಚಾಲಿತವಾಗಿ ಬದುಕುಳಿಯುವ ಸ್ಥಿತಿಗೆ ಬದಲಾಗುತ್ತದೆ. ಇದರಿಂದ ಸರಿಯಾಗಿ ನಿದ್ದೆ ಬರದೇ ಇರುವುದು, ಹಠಾತ್ ದೇಹದ ತೂಕದಲ್ಲಿ ಬದಲಾವಣೆಗಳು, ಆಗಾಗ್ಗೆ ಶೀತ ನೆಗಡಿ ಅಥವಾ ಮೊಡವೆ, ಎಸ್ಜಿಮಾ ದಂತಹ ಚರ್ಮದ ಸ್ಥಿತಿಗಳ ಉಲ್ಬಣಗಳಾಗಿ ಕಾಣಿಸಿಕೊಳ್ಳಬಹುದು. ಕಿರಿಕಿರಿ, ನಿರಂತರ ಚಿಂತೆಯಂತಹ ಕೆಲವು ಭಾವನಾತ್ಮಕ ಚಿಹ್ನೆಗಳನ್ನು ಹೆಚ್ಚಾಗಿ ಮನಸ್ಥಿತಿ ಸಮಸ್ಯೆಗಳೆಂದು ಪರಿಗಣಿಸಲಾಗುತ್ತದೆ ವಾಸ್ತವದಲ್ಲಿ ಅವು ವಿಶ್ರಾಂತಿ, ನಿಯಂತ್ರಣವನ್ನು ಕೇಳುವ ಒತ್ತಡದ ಸಂಕೇತಗಳಾಗಿವೆ.



# ಮನೆಯಲ್ಲಿ ಈ ರೀತಿ ಮಟನ್ ಪೆಪ್ಪರ್ ಸೂಪ್ ಮಾಡಿ!

ಜ್ವರ, ನೆಗಡಿಗೆ ರಾಮಬಾಣ.. ಕೀಲು ನೋವು, ಬಾಡಿ ಪೇನ್‌ಗೆ ಮುಕ್ತಿ..! ಚಳಿಗಾಲದ ಈ ಸ್ಪೆಷಲ್ ಸೂಪ್ ಕುಡಿದರೆ ಡಾಕ್ಟರ್ ಅವಶ್ಯಕತೆ ಇಲ್ಲ. ಹೌದು, ಚಳಿಗಾಲದ ಆಗಮನದೊಂದಿಗೆ, ದೇಹಕ್ಕೆ ಉಷ್ಣತೆ ಹಾಗೂ ಶಕ್ತಿ ನೀಡುವ ಆಹಾರಗಳಿಗೆ ಬೇಡಿಕೆ ಹೆಚ್ಚುತ್ತದೆ. ಮಾಂಸಾಹಾರ ಪ್ರಿಯರಿಗೆ, ಈ ಋತುವಿನಲ್ಲಿ ಬಿಸಿಬಿಸಿಯಾದ ಸಾರು ಅಥವಾ ಸೂಪ್ ಕುಡಿಯುವುದು ಹಿತಕರ. ಇಂತಹಾ ಪೌಷ್ಟಿಕ ಮತ್ತು ರುಚಿಕರ ಆಯ್ಕೆಗಳಲ್ಲಿ ಮಟನ್ ಪೆಪ್ಪರ್ ಸೂಪ್ ಪ್ರಮುಖವಾಗಿದೆ. ಮಟನ್ ಪೆಪ್ಪರ್ ಸೂಪ್ ರುಚಿಗೆ ಮಾತ್ರವಲ್ಲ, ಆರೋಗ್ಯಕ್ಕೂ ಪೂರಕ. ಪ್ರೋಟೀನ್, ಅಗತ್ಯ ಖನಿಜಗಳು ಮತ್ತು ಕಾಳುಮೆಣಸಿನ ಔಷಧೀಯ ಗುಣಗಳಿಂದ ಸಮೃದ್ಧವಾಗಿರುವ ಈ ಪಾನೀಯವು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ಚಳಿಗಾಲದ ಕಾಯಿಲೆಗಳಿಂದ ದೇಹವನ್ನು ರಕ್ಷಿಸುತ್ತದೆ. ಈ ಸೂಪ್ ಪೋಷಕಾಂಶಗಳು, ಕೊಲಾಜನ್, ಖನಿಜಾಂಶಗಳು ಮತ್ತು ಆಂಟಿಆಕ್ಸಿಡೆಂಟ್‌ಗಳಿಂದ ಕೂಡಿದೆ. ಇದು ಶೀತ, ನೆಗಡಿ, ಆಯಾಸದಿಂದ ದೇಹವನ್ನು ದೂರವಿಡಲು ಸಹಕಾರಿ. ವೈದ್ಯರು, ಪೌಷ್ಟಿಕತಜ್ಞರು ಚಳಿಗಾಲದಲ್ಲಿ ದೇಹಕ್ಕೆ ಉಷ್ಣತೆ, ಪೋಷಣೆಗಾಗಿ ಇದರ ಸೇವನೆಯನ್ನು ಶಿಫಾರಸು ಮಾಡುತ್ತಾರೆ. ಮಟನ್ ಮೂಳೆಗಳು ಮತ್ತು ಕಾಳುಮೆಣಸಿನ ಸಂಯೋಜನೆ ದೇಹವನ್ನು ಆಂತರಿಕವಾಗಿ ಬೆಚ್ಚಗಿರಿಸಲು ಪರಿಣಾಮಕಾರಿ.

**ಮಟನ್ ಪೆಪ್ಪರ್ ಸೂಪ್ ತಯಾರಿಸಲು ಬೇಕಾಗುವ ಸಾಮಗ್ರಿಗಳು**

- ಮಟನ್ (ಮೂಳೆ ಸಹಿತ) - 300 ಗ್ರಾಂ
- ತಾಜಾ ಪುಡಿಮಾಡಿದ ಕಾಳುಮೆಣಸು - 1 ರಿಂದ 1.5 ಚಮಚ
- ಶುಂಠಿ-ಬೆಳ್ಳುಳ್ಳಿ ಪೇಸ್ಟ್ - 1 ಚಮಚ
- ಸಣ್ಣಗೆ ಹೆಚ್ಚಿದ ಈರುಳ್ಳಿ - 1
- ಅರಿಶಿನ - ½ ಚಮಚ
- ಉಪ್ಪು - ರುಚಿಗೆ ತಕ್ಕಷ್ಟು
- ದೇಸಿ ತುಪ್ಪ / ಎಣ್ಣೆ - 1 ಚಮಚ
- ನೀರು - 4-5 ಕಪ್
- ಕೊತ್ತಂಬರಿ ಸೊಪ್ಪು - ಸ್ವಲ್ಪ.

**ಕೀಲು ನೋವು ನಿವಾರಣೆ :** ಕೀಲು ನೋವು ನಿವಾರಣೆಗೂ ಸಹಾಯಕವಾದ ಈ ಸೂಪ್ ಅನ್ನು ಮನೆಯಲ್ಲೇ ಆರೋಗ್ಯಕರವಾಗಿ ಹೇಗೆ ತಯಾರಿಸುವುದು ಎಂಬ ಬಗ್ಗೆ ಈ ಲೇಖನದಲ್ಲಿ ತಿಳಿಸಲಾಗಿದೆ. ಇದು ಸರಳ ಹಾಗೂ ಕಡಿಮೆ ಸಮಯದಲ್ಲಿ ಸಿದ್ಧಪಡಿಸಬಹುದಾದ ರೆಸಿಪಿಯಾಗಿದೆ.

**ಮಟನ್ ಪೆಪ್ಪರ್ ಸೂಪ್ ತಯಾರಿಸುವ ವಿಧಾನ :** ಪೌಷ್ಟಿಕ ಹಾಗೂ ರುಚಿಕರ ಮಟನ್ ಪೆಪ್ಪರ್ ಸೂಪ್ ತಯಾರಿಸಲು ಪ್ರೆಶರ್ ಕುಕ್ಕರ್ ಬಳಸುವುದು ಸುಲಭ. ಇದು ಸಮಯ ಉಳಿತಾಯಕ್ಕೂ ನೆರವಾಗುತ್ತದೆ. ಇದನ್ನು ಹೀಗೆ ತಯಾರಿಸಿ. - ಮೊದಲು, ಕುಕ್ಕರ್‌ಗೆ ತುಪ್ಪ ಅಥವಾ ಎಣ್ಣೆ ಹಾಕಿ ಬಿಸಿ ಮಾಡಿ. ಕತ್ತರಿಸಿದ ಈರುಳ್ಳಿ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಸುವರ್ಣ ಕಂದು ಬರುವವರೆಗೆ ಹುರಿಯಿರಿ. - ನಂತರ ಅರಿಶಿನ ಪುಡಿ, ತಾಜಾ ಪುಡಿಮಾಡಿದ ಕಾಳುಮೆಣಸು ಸೇರಿಸಿ ಕೆಲ ಕ್ಷಣ ಹುರಿಯಿರಿ. - ಇದಾದ ನಂತರ ಮೂಳೆ ಸಹಿತ ಮಟನ್ ತುಂಡುಗಳನ್ನು ಸೇರಿಸಿ. ಹೆಚ್ಚಿನ ಉರಿಯಲ್ಲಿ 3-4 ನಿಮಿಷ ಚೆನ್ನಾಗಿ ಹುರಿಯಬೇಕು. ಇದು ಸೂಪ್‌ಗೆ ಉತ್ತಮ ರುಚಿ ಹಾಗೂ ಪರಿಮಳ ನೀಡುತ್ತದೆ. - ಇದಕ್ಕೆ 4-5 ಕಪ್ ನೀರು ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ. ಕುಕ್ಕರ್ ಮುಚ್ಚಳ ಮುಚ್ಚಿ ಮಧ್ಯಮ ಉರಿಯಲ್ಲಿ 5-6 ಸಿಟಿ ಬರುವವರೆಗೆ ಬೇಯಿಸಿ. - ಮಟನ್ ಮೃದುವಾಗಿ, ಮೂಳೆಗಳಿಂದ ಪೋಷಕಾಂಶ ಹಾಗೂ ಕೊಲಾಜನ್ ಸೇರುವುದು ಮುಖ್ಯ. - ಕುಕ್ಕರ್‌ನ ಒತ್ತಡ ತಗ್ಗಿದ ಬಳಿಕ ಮುಚ್ಚಳ ತೆಗೆದು, ಮಿಶ್ರಣವನ್ನು ಕಲಸಿ. ಸೂಪ್ ತೆಳುವಾಗಿದ್ದರೆ, ಗಟ್ಟಿಯಾಗುವವರೆಗೆ ಸ್ವಲ್ಪ ಕುದಿಸಿ. - ಅಂತಿಮವಾಗಿ ಪರಿಮಳಕ್ಕೆ ಪುಡಿಮಾಡಿದ ಕಾಳುಮೆಣಸು, ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ. ಇಷ್ಟು ಮಾಡಿದರೆ ಸಾಕು ಬಿಸಿಬಿಸಿ ಮಟನ್ ಪೆಪ್ಪರ್ ಸೂಪ್ ಸಿದ್ಧ. ಇದನ್ನು ತಕ್ಷಣ ಸವಿಯಬಹುದು.

# ನಾಟ್ಯಭೈರವಿ ಕಲಾಕುಟೀರದ ಪ್ರತಿಭೆಗಳಿಂದ ಕಣ್ಮನ ಸೂರೆಗೊಂಡ ನೃತ್ಯರಂಜನೆ

■ ಉದಯವಾಹಿನಿ, ವಿಶೇಷ

ಪ್ರತಿಭಾವಂತ ನಾಟ್ಯಗುರು-ನೃತ್ಯಕಲಾವಿದೆ ಮಂಜುಭೈರವಿ ಪ್ರದೀಪ್ ತಮ್ಮ 'ನಾಟ್ಯ ಭೈರವಿ ಕಲಾಕುಟೀರ' ನೃತ್ಯಸಂಸ್ಥೆಯಿಂದ ನಿನ್ನೆ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ನೃತ್ಯಾರ್ಚನೆ- ನೃತ್ಯಹಬ್ಬ-2025 ಸುಮಾರು 80 ಮಂದಿ ಉದಯೋನ್ಮುಖ ಕಲಾವಿದರಿಂದ ಅತ್ಯಂತ ವೈವಿಧ್ಯಪೂರ್ಣ ನೃತ್ಯಾವಳಿಗಳಿಂದ ಮನರಂಜಿಸಿತು. ಪುಟಾಣಿ ಮಕ್ಕಳಿಂದ ಹಿಡಿದು ಹಿರಿಯ ವಿದ್ಯಾರ್ಥಿಗಳವರೆಗೆ ನೃತ್ಯದ ವಿವಿಧ ಆಯಾಮಗಳನ್ನು ತೆರೆದಿಡುವ ಭರತನಾಟ್ಯದ ಸಾಂಪ್ರದಾಯಕ ಕೃತಿಗಳ ಜೊತೆ ಅನೇಕ ದೈವೀಕ ಕೃತಿಗಳು ಸೊಗಸಾಗಿ, ವರ್ಣರಂಜಿತವಾಗಿ ಕಣ್ಮನ ತುಂಬಿಕೊಂಡವು.

ಪುಷ್ಪಾಂಜಲಿ, ದೇವರನಾಮ, ಶ್ಲೋಕಗಳು, ಧರು ವರ್ಣ, ಶಿವಸ್ತುತಿ ಮುಂತಾದವುಗಳಲ್ಲದೆ ಲವಲವಿಕೆಯ ಕುಣಿತದ ಜಾನಪದ ನೃತ್ಯಗಳು, ಹಿತ್ತಾಳೆಯ ತಟ್ಟೆಯ ಮೇಲೆ ನಿಂತು ದೀಪಗಳನ್ನು ಧರಿಸಿ ಮಾಡಿದ 'ಹಚ್ಚೇವು ಕನ್ನಡದ ದೀಪ' ನೃತ್ಯವಂತೂ ಅಮೋಘವಾಗಿತ್ತು. ಗುರು ಮಂಜುಭೈರವಿ ಅವರ ಆಕರ್ಷಕ ನೃತ್ಯ ಸಂಯೋಜನೆಗಳನ್ನು ಪ್ರೇಕ್ಷಕರು ಮೆಚ್ಚಿಕೊಂಡು ಭಾರೀ ಕರತಾಡನ ನೀಡಿದರು.

ಪ್ರತಿವರ್ಷ ನಾಟ್ಯಭೈರವಿ ಕಲಾಕುಟೀರ ತನ್ನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪುಟ್ಟಮಕ್ಕಳಿಗೂ ವೇದಿಕೆಯನ್ನು ಒದಗಿಸಿ, ಎಲ್ಲರಿಗೂ ಪ್ರಮಾಣಪತ್ರವನ್ನು ವಿತರಿಸಿ ಪ್ರೋತ್ಸಾಹಿಸುವುದು ವಾಡಿಕೆ. ಅದರಂತೆ ನಿನ್ನೆ ರವೀಂದ್ರ ಕಲಾಕ್ಷೇತ್ರ ಮಕ್ಕಳ ಕಲರವದಿಂದ- ಹೆಜ್ಜೆ-ಗೆಜ್ಜೆಗಳ ಮಾರ್ದನಿಯಿಂದ ತುಂಬಿಹೋಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಲೇಖಕಿ- ಕಲಾ ವಿಮರ್ಶಕಿ ವೈ.ಕೆ.ಸಂಧ್ಯಾ ಶರ್ಮ, ನೃತ್ಯಗುರುಗಳಾದ ಕಾಮಾಕ್ಷಿ, ಪದ್ಮಜಾ ಜಯರಾಂ, ಗೌರಿ ವಿಶ್ವನಾಥ್ ಮತ್ತು ಪತ್ರಕರ್ತ ಉಮೇಶ್ ಉಪಸ್ಥಿತರಿದ್ದರು.



# ರಾಷ್ಟ್ರ, ಸಂಸ್ಕೃತಿ, ಮಂದಿರ ರಕ್ಷಣಾ ಗೋಷ್ಠಿ

• ಉದಯವಾಹಿನಿ, ದೆಹಲಿ

ಚಿಕ್ಕಮಗಳೂರಿನಿಂದ 30 ಕಿಲೋಮೀಟರ್ ದೂರದಲ್ಲಿರುವ ದತ್ತಪೀಠದಲ್ಲಿ ಶ್ರೀ ಗುರು ದತ್ತಾತ್ರೇಯರು ಸಾಧನೆ ಮಾಡಿದ್ದರು; ಆದರೆ ಟಿಪ್ಪು ಸುಲ್ತಾನನು ಅಲ್ಲಿ ಬಾಬಾ ಬುಡನ್ ದರ್ಗಾವನ್ನು ಸ್ಥಾಪಿಸಿದ. ಅದರ ನಂತರ ಅಲ್ಲಿನ ನೂರಾರು ಎಕರೆ ಪ್ರದೇಶದ ಇಸ್ಲಾಮೀಕರಣವು ಮಜಾರ್‌ಗಳು, ಸಮಾಧಿಗಳು, ದಫನಭೂಮಿ, ದರ್ಗಾ ಮತ್ತು ಗೋಮಾಂಸ ಭಕ್ಷಣದಿಂದಾಗಿತ್ತು; ಆದರೆ ಕಳೆದ 30 ವರ್ಷಗಳಿಂದ ವಿಶ್ವ ಹಿಂದೂ ಪರಿಷತ್, ಶ್ರೀರಾಮ ಸೇನೆ ಮತ್ತು ಹಿಂದುತ್ವನಿಷ್ಠ ಸಂಘಟನೆಗಳು ಮಾಡಿದ ಆಂದೋಲನಗಳು ಮತ್ತು ನ್ಯಾಯಾಲಯದಲ್ಲಿ ನಡೆಸಿದ ಹೋರಾಟದಿಂದಾಗಿ 90% ಪ್ರದೇಶವು ದತ್ತ ಭಕ್ತರದ್ದಾಗಿದೆ. ಈಗ ಶುಕ್ರವಾರದಂದು ನಮಾಜ್ ಪಠಣ ಮಾಡಲು ಮೌಲ್ವಿಯು ಬರುತ್ತಾರೆ. ಅದು ಕೂಡ ನ್ಯಾಯಾಲಯದ ಆದೇಶದ ಮೇರೆಗೆ ಶೀಘ್ರದಲ್ಲಿಯೇ ನಿಲ್ಲಲಿದ ಎಂದು ಕರ್ನಾಟಕದ ಶ್ರೀರಾಮ ಸೇನೆಯ ಸಂಸ್ಥಾಪಕರಾದ ಶ್ರೀ ಪ್ರಮೋದ ಮುತಾಲಿಕ್ ಅವರು ಹೇಳಿದರು.




**ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ**

**ಶ್ರೀರಾಮ ಮಂದಿರಕ್ಕಾಗಿ ನ್ಯಾಯಾಲಯದಲ್ಲಿನ ಹೋರಾಟ ಶ್ರೀರಾಮನೇ ನೀಡಿದ ಅನುಭವ ! - ನ್ಯಾಯವಾದಿ ಶ್ರೀಧರ ಪೊತರಾಜು:** ಈ ಸಂದರ್ಭದಲ್ಲಿ ಮಂದಿರ ರಕ್ಷಣಾ ಚರ್ಚಾಗೋಷ್ಠಿಯಲ್ಲಿ ಮಾತನಾಡಿದ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶ್ರೀಧರ ಪೊತರಾಜು ಅವರು, 'ಶ್ರೀರಾಮ ಮಂದಿರಕ್ಕಾಗಿ ಹಿಂದೂಗಳು ನ್ಯಾಯಾಲಯದ ಹೊರಗೆ ನಡೆಸಿದ ಹೋರಾಟ ಅದ್ಭುತವಾದದ್ದು; ಆದರೆ ನಾವು ನ್ಯಾಯವಾದಿಗಳು ನ್ಯಾಯಾಲಯದಲ್ಲಿ ನಡೆಸಿದ ಹೋರಾಟವು ಶ್ರೀರಾಮನು ನಮಗೆಲ್ಲರಿಗೂ ತನ್ನ ಅಸ್ತಿತ್ವದ ಬಗ್ಗೆ ನೀಡಿದ ಅನುಭವವೇ ಆಗಿದೆ. ಶ್ರೀರಾಮನ ಕೃಪೆಯಿಂದಲೇ ಋಷಿ ಸಮಾನ ಹಿರಿಯ ನ್ಯಾಯವಾದಿ ಕೇಶವ ಪರಾಸರನ್ ಅವರು ತಮ್ಮ 92ನೇ ವಯಸ್ಸಿನಲ್ಲಿಯೂ ಈ ಹೋರಾಟವನ್ನು ಹುರುಪಿನಿಂದ ನಡೆಸಿದರು. ಅವರಲ್ಲಿ ಅಸಾಧ್ಯವಾದ ಶ್ರದ್ಧೆಯನ್ನು ಮೂಡಿಸಿದವನು ಕೂಡ ಶ್ರೀರಾಮನೇ ಆಗಿದ್ದನು.

**ಮಂದಿರ ಸಂಸ್ಕೃತಿಯ ರಕ್ಷಣೆಗಾಗಿ ಹಿಂದೂಗಳು ಒಗ್ಗೂಡಬೇಕು ! ಶ್ರೀ ಸುನೀಲ ಘನವಟ್, ಹಿಂದೂ ಜನಜಾಗೃತಿ ಸಮಿತಿ:** ಮಂದಿರಗಳು ಹಿಂದೂ ಧರ್ಮದ ಆಧಾರಶಿಲೆಯಾಗಿದೆ; ಆದ್ದರಿಂದ ಮಂದಿರಗಳು ಮತ್ತು ಮಂದಿರ ಸಂಪ್ರದಾಯಗಳ ರಕ್ಷಣೆಗಾಗಿ ಮಂದಿರ ಮಹಾಸಂಘವು 15 ಸಾವಿರ ಮಂದಿರಗಳನ್ನು ಸಂಘಟಿಸಿದೆ. ಅದರಿಂದ 2 ಸಾವಿರದ 300 ಕ್ಕಿಂತ ಹೆಚ್ಚು ಮಂದಿರಗಳಲ್ಲಿ ವಸ್ತ್ರಸಂಹಿತೆಯನ್ನು ಜಾರಿಗೊಳಿಸಲಾಗಿದೆ. ಇದರ ಪರಿಣಾಮವಾಗಿ ದೇಶದಲ್ಲಿ ಮಾತ್ರವಲ್ಲ, ಆಸ್ಟ್ರೇಲಿಯಾದಂತಹ ದೇಶದಲ್ಲಿಯೂ ವಸ್ತ್ರಸಂಹಿತೆ ಜಾರಿಯಾಗಿದೆ. ಮಂದಿರಗಳು ಧರ್ಮ ಶಿಕ್ಷಣದ ಕೇಂದ್ರಗಳಾಗಲು ಮಾಡಿದ ಪ್ರಯತ್ನಗಳಿಂದಾಗಿ ಪ್ರತಿವಾರ 20 ಸಾವಿರ ಹಿಂದೂಗಳು ಆರತಿಗಾಗಿ ಒಗ್ಗೂಡುತ್ತಾರೆ. ಹಾಗಾಗಿ ಅವುಗಳ ರಕ್ಷಣೆಗಾಗಿ ಒಂದಾಗುವುದು ನಮ್ಮ ಧರ್ಮಕರ್ತವ್ಯವೇ ಆಗಿದೆ ಎಂದು ಹಿಂದೂ ಜನಜಾಗೃತಿ ಸಮಿತಿಯ ಮಹಾರಾಷ್ಟ್ರ ಮತ್ತು ಛತ್ತೀಸ್‌ಗಢ ರಾಜ್ಯಗಳ ಸಂಘಟಕರು ಹಾಗೂ ಮಂದಿರ ಮಹಾಸಂಘದ ರಾಷ್ಟ್ರೀಯ ಸಂಘಟಕ ಶ್ರೀ ಸುನೀಲ ಘನವಟ್ ಅವರು ತಿಳಿಸಿದರು. ಪತ್ರಕರ್ತೆ ಶ್ವೇತಾ ತ್ರಿಪಾಠಿ ಅವರು ಈ ಗೋಷ್ಠಿಯ ಸೂತ್ರಸಂಚಾಲನೆಯನ್ನು ನಡೆಸಿದರು.

**ಭಾರತವನ್ನು ಕೆಣಕುವವರನ್ನು ಈಗ ಸುಮ್ಮನೆ ಬಿಡುವುದಿಲ್ಲ! ಸಂಜಯ್ ಸೇಠ್, ರಾಜ್ಯ ರಕ್ಷಣಾ ಸಚಿವರು:** ಭಾರತ ಭೂಮಿಯು ಛತ್ರಪತಿ ಶಿವಾಜಿ ಮಹಾರಾಜರು, ಮಹಾರಾಣಾ ಪ್ರತಾಪ, ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಮತ್ತು ರಾಣಿ ಲಕ್ಷ್ಮೀಬಾಯಿ ಅವರ ಶೌರ್ಯದ ಮತ್ತು ವಿಶ್ವ ಕಲ್ಯಾಣವನ್ನು ಬಯಸುವ ಸನಾತನ ಸಂಸ್ಕೃತಿಯ ನಾಡಾಗಿದೆ. ದುರದೃಷ್ಟವಶಾತ್, ಕಳೆದ 60 ರಿಂದ 65 ವರ್ಷಗಳಲ್ಲಿ, ಅಕ್ಬರ್-ಬಾಬರ್‌ನಂತಹ ಆಕ್ರಮಣಕಾರರನ್ನು ಮಹಾನ್ ಎಂದು ಕರೆಯುವ ಮೂಲಕ ನಮ್ಮನ್ನು ಗುಲಾಮಗಿರಿಯ ಮನಸ್ಥಿತಿಯಲ್ಲಿ ಬಂಧಿಸಲಾಯಿತು. ಆ ಗುಲಾಮಗಿರಿಯ ಎಲ್ಲಾ ಚಿಹ್ನೆಗಳು ಸರಪಳಿಗಳನ್ನು ಈಗ ಸಂಪೂರ್ಣವಾಗಿ ಮುರಿಯಲಾಗುತ್ತಿದೆ. ಈಗ ಹೊಸ ಭಾರತ ಎಚ್ಚರಗೊಂಡಿದೆ. ಅದು ಯಾರಿಗೂ ತಲೆಬಾಗುವುದಿಲ್ಲ ಆಪರೇಷನ್ ಸಿಂಧೂರ' ನಲ್ಲಿ ನಮ್ಮ ಸೈನಿಕರು ತೋರಿದ ಶೌರ್ಯ ಜಗತ್ತಿಗೆ ಸಾಬೀತಾಗಿದೆ. ಭಾರತವನ್ನು ಕೆಣಕುವವರನ್ನು ನಾವು ಈಗ ಸುಮ್ಮನೆ ಬಿಡುವುದಿಲ್ಲ ಎಂದು ಕೇಂದ್ರೀಯ ರಾಜ್ಯ ರಕ್ಷಣಾ ಸಚಿವ ಶ್ರೀ ಸಂಜಯ್ ಸೇಠ್ ಪ್ರತಿಪಾದಿಸಿದರು. ಅವರು ನವದೆಹಲಿಯ ಭಾರತ್ ಮಂಟಪಂನಲ್ಲಿ ನಡೆದ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದಲ್ಲಿ ರಾಷ್ಟ್ರೀಯ ಸುರಕ್ಷತೆಯಲ್ಲಿ ಸಾಮಾಜಿಕ-ಸಾಂಸ್ಕೃತಿಕ ಸಂಸ್ಥೆಗಳ ಕೊಡುಗೆ' ಎಂಬ ವಿಷಯದ ಕುರಿತು ಮಾತನಾಡುತ್ತಿದ್ದರು.

ಸರ್ಕಾರದಿಂದ ಮೂಲಭೂತ ಸೌಕರ್ಯ ಇಲ್ಲಾ, ಮನೆಗಳ ಪರಿಸ್ಥಿತಿ ದುಸ್ಥಿತಿಯಾಗಿದೆ ಎಂಬುವುದು ಬಹಳ ನೋವಿನ ಸಂಗತಿ

# 20 ವರ್ಷ ಗತಿಸಿದರೂ ಬಡವರಿಗೆ ಸಿಗದ ಮನೆಯ ಪ್ರವೇಶ ಭಾಗ್ಯ

**ಉದಯವಾಹಿನಿ ವಿಶೇಷ**

- ಮಹೇಬೂಬಶಾ ಅಣವಾರ
- ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ಪಟ್ಟಣದ ಹೊರವಲಯದ ಈದ್ಗಾ ಮೈದಾನದ ಹತ್ತಿರ ಇರುವ ಕೊಳಚೆ ನಿರ್ಮೂಲನೆ ಮಂಡಳಿ ವತಿಯಿಂದ ನಿರ್ಮಿಸಿದ ಮನೆಗಳು 20ವರ್ಷ ಗತಿಸಿದರೂ ಸಹ ಬಡವರಿಗೆ ಸಿಗದ ಮನೆಯ ಪ್ರವೇಶ ಭಾಗ್ಯ, ಮನೆಗಳು ಅನಾಥವಾಗಿ ಹಾಳು ಬಿದ್ದಿವೆ. 2005-2006 ರಲ್ಲಿ ಜೆಡಿಎಸ್ ಪಕ್ಷದ ರಾಜ್ಯ ಸರ್ಕಾರ ಇದ್ದಾಗ ಜೆಡಿಎಸ್ ಪಕ್ಷದಿಂದ ಗೆಲುವು ಸಾಧಿಸಿದ ಜನಪ್ರೀಯ ಶಾಸಕರು ದಿ.ವೈಜನಾಥ ಪಾಟೀಲ್ ರವರ ಅಧಿಕಾರ ಅವಧಿಯಲ್ಲಿ ಬಡವರಿಗೋಸ್ಕರ 275 ಮನೆಗಳ ಸ್ಥಳ ಮಂಜೂರು ಮಾಡಿಸಿ ಮನೆಗಳು ನಿರ್ಮಿಸುವ ಕಾರ್ಯ ಕೈಗೊಂಡಿದರು.

ಆದರೆ ಇಲ್ಲಿಯವರೆಗೆ ದಶಕಗಳೆ ಗತಿಸಿಹೋದರು ಮುಂದೆ ಬಂದವರು ಶಾಸಕರು ಸಂಸದರೂ ಅಧಿಕಾರಿಗಳೂ ಇಲ್ಲಿಯವರೆಗೆ ಬಡವರಿಗೆ ಹಕ್ಕುಪತ್ರ ವಿತರಣೆ ಮಾಡಿಲ್ಲಾ ಕೆಲವರಿಗೆ ಹಕ್ಕುಪತ್ರ ವಿತರಿಸಿದರೂ ಬಡವರು ಮನೆಗಳಿಗೆ ಹೋಗಿ ಇರಲು ಸರ್ಕಾರದಿಂದ ಮೂಲಭೂತ ಸೌಕರ್ಯ ಇಲ್ಲಾ, ಮನೆಗಳ ಪರಿಸ್ಥಿತಿ ದುಸ್ಥಿತಿಯಾಗಿದೆ ಎಂಬುವುದು ಬಹಳ ನೋವಿನ ಸಂಗತಿಯಾಗಿದೆ.

275ಮನೆಗಳ ಸ್ಥಳ ಒಂದು ಮನೆ ನಿರ್ಮಾಣಕ್ಕೆ 3.75ಲಕ್ಷ ರೂ.ಸರ್ಕಾರ ಮಂಜೂರು ಮಾಡಿದೆ ಆದರೆ ಗುರುತಿಸಿದ ಕೆಲವರ ಫಲಾನುಭವಿಗಳ ಮನೆಗಳ ಕಟ್ಟಡ ಗುತ್ತಿಗೆದಾರರು ನಿರ್ಮಾಣ ಕಳಪೆ ಕಾಮಗಾರಿ ನಗೆಸಿ ಕೈತೊಳೆದುಕೊಂಡಿದ್ದಾರೆ, ಹಲವಾರು ಫಲಾನುಭವಿಗಳು ಸಾಲಸೂಲ ಮಾಡಿ ಮನೆಗಳು ಅರ್ಧಕ್ಕೆ ಕಟ್ಟಡ ನಿರ್ಮಾಣ ಮಾಡಿದ್ದಾರೆ ಆದರೆ ಪುರಸಭೆ ವತಿಯಿಂದ ಹಣ ಬಿಡುಗಡೆ ಮಾಡಿಲ್ಲಾ 20ವರ್ಷಗಳಲ್ಲಿ ಹಲವಾರು ಬಾರಿ ಪುರಸಭೆಯ ಮುಖ್ಯಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಈಗಿನ ಶಾಸಕ ಡಾ.ಅವಿನಾಶ ಜಾಧವರವರಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲಾ ಎಂದು ನೊಂದ ಫಲಾನುಭವಿ ಪತ್ರಕರ್ತರೊಂದಿಗೆ ಮಾತನಾಡಿ ಅಳಲುತೋಡಿಕೊಂಡರು. ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಾಣ ಮಾಡಿದ ಮನೆಗಳ ಕಟ್ಟಡ ಹಲವಾರು ಮನೆಗಳು ಕುಸಿದಿವೆ ಮತ್ತು ವಿದ್ಯುತ್‌ನ ಸೌಲಭ್ಯವಿಲ್ಲಾ, ಕುಡಿಯುವ ನೀರಿನ ಸೌಲಭ್ಯವಿಲ್ಲ, ಸಾಮೂಹಿಕ ಶೌಚಾಲಯ ಇಲ್ಲಾ,ಈ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದರೆ ಬಡ ಕುಟುಂಬಗಳು ವಾಸ ಮಾಡುತ್ತಾರೆ ಎಂಬುವುದು ಫಲಾನುಭವಿಗಳ ಮಾತಾಗಿದೆ.

ರಾಜ್ಯ ಸರ್ಕಾರಗಳು ಬಡವರಿಗೊಸ್ಕರ ಅನೇಕ ಯೋಜನೆಗಳು ಸಿದ್ಧಪಡಿಸುತ್ತವೆ ಆದರೆ ತಾಲ್ಲೂಕ ಮಟ್ಟದಲ್ಲಿ ಗ್ರಾಮ ಮಟ್ಟದಲ್ಲಿ ಆನೇಕ ಯೋಜನೆಗಳು ನೆನೆಗುದಿಗೆ ಬಿದ್ದಿವೆ.

**ಉದಾಹರಣೆಗೆ;-** ಶುದ್ದ ಕುಡಿಯುವ ನೀರಿಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೋಟಿಗಟ್ಟಲೆ ಹಣ ಬಿಡುಗಡೆ ಮಾಡುತ್ತಾರೆ ಆದರೆ ತಾಲೂಕಾಮಟ್ಟ ಗ್ರಾಮ ಮಟ್ಟದಲ್ಲಿ ಶುದ್ಧ ನೀರು ಸಿಗುವುದಿಲ್ಲ, ನೀರಿನ ಟ್ಯಾಂಕ್, ನೀರಿನ ಮೋಟರ್ ಸೇರಿದಂತೆ ಇನ್ನಿತರ ಯಂತ್ರೋಪಕರಣಗಳು,ಕೂಡ ಸಿಗುವುದಿಲ್ಲ ಎಲ್ಲವೂ ಮಾಯಾವಾಗಿ ಬಿಟ್ಟಿವೆ ಅಧಿಕಾರಿಗಳು ಮಾತ್ರ ಮೌನವಾಗಿ ಬಿಟ್ಟಿದ್ದಾರೆ,ಚಿಂಚೋಳಿ ಪಟ್ಟಣದಲ್ಲಿಯೇ ಎರಡ್ಮೂರು ಶುದ್ಧ ಕುಡಿಯುವ ನೀರಿನ ಘಟಕವಿದ್ದರೂ ಒಂದೇ ಒಂದು ಘಟಕ ಪ್ರಾರಂಭವಿಲ್ಲ ಇದು ಚಿಂಚೋಳಿ ಪಟ್ಟಣದ ಸ್ಥಿತಿಯಾಗಿದೆ. ಮನೆಗಳು ವಿತರಣೆ ಮಾಡಿದರೆ ಬಡವರಿಗೆ ಅನೂಕುಲವಾಗುತ್ತದೆ ಎಷ್ಟು ಬಡ ಕುಟುಂಬಗಳು ಅವಳಿ ಪಟ್ಟಣವಾದ ಚಿಂಚೋಳಿ-ಚಂದಾಪೂರದಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ, ಅಂಥ ಕುಟುಂಬಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಈಗಿನ ಜನಪ್ರೀಯ ಶಾಸಕ ಡಾ.ಅವಿನಾಶ ಜಾಧವ ಅವರು ಬಡವರ ನೇರವಿಗೆ ಆಗಮಿಸಿ ಮನೆ ಇಲ್ಲದವರಿಗೆ ಈ ಸ್ಥಳದಲ್ಲಿ ಮನೆಗಳ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡಿ ಅರ್ಹ ಫಲಾನುಭವಿಗಳಿಗೆ ಮನೆಗಳು ಮೂಲಭೂತ ಸೌಕರ್ಯ ಕಲ್ಪಿಸಿಕೊಡಬೇಕು ಎಂಬುವುದೆ ಬಡವರ ಅಶಯವಾಗಿದೆ. 2005-2006ರಲ್ಲಿ ಪಟ್ಟಣದ ಬಡ ಕುಟುಂಬಗಳಿಗೆ ಆಯ್ಕೆಯಾದ ಸಮಾರು 500 ಕ್ಕಿಂತ ಹೆಚ್ಚು ಪ್ಲಾಟ್‌ಗಳು ಇವೆ, 2015-2016 ರಲ್ಲಿ 200 ಮನೆಗಳು ಪಟ್ಟಣದ ಕಡುಬಡವರಿಗೆ ಆಯ್ಕೆಯಾಗಿವೆ ಆದರೂ ಸ್ಥಳೀಯ ಶಾಸಕರು ಅಧಿಕಾರಿಗಳು ಬಡವರ ಪರ ಯಾವುದೇ ಕಾಳಜಿ ವಹಿಸದೆ ನಿರ್ಲಕ್ಷ್ಯ ತೋರುವುದು ಕಂಡುಬರುತ್ತದೆ.



**ಈಗಾಗಲೇ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ 2005-2006ರಲ್ಲಿ ನಿರ್ಮಿಸಿದ ಮನೆಗಳು ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಸಂಬಂಧ ಪಟ್ಟ ಇಲಾಖೆಗೆ ಪತ್ರ ಬರೆಯಲಾಗಿದೆ, ತಹಶೀಲ್ದಾರ್ ಮತ್ತು ಜೆಸ್ಕಾಂ ಇಲಾಖೆ ಜೊತೆ ಸ್ಥಳಕ್ಕೆ ಹೋಗಿ ಮನೆಗಳು ಪರಿಶೀಲನೆ ನಡೆಸಿದ್ದು ಶೀಘ್ರದಲ್ಲೇ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅರ್ಹ ಫಲಾನುಭವಿಗಳಿಗೆ ಮನೆಗಳು ವಿತರಿಸಲಾಗುವುದು. ಮೊದಲಿನ ಅಧಿಕಾರಿಗಳು ಮಾಡಿದ್ದು ಗೊತ್ತಿಲ್ಲ ನಾನು ಹೊಸದಾಗಿ ಬಂದ ಮೇಲೆ ಕೆಲ ಮನೆಗಳ ದುರಸ್ಥಿ ಸೇರಿದಂತೆ ಅನೇಕ ಕೆಲಸಗಳು ಮಾಡಿ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದೇನೆ ಅತಿ ಶೀಘ್ರದಲ್ಲೇ ಮನೆಗಳು ವಿತರಿಸುತ್ತೇವೆ.**

**- ನಿಂಗಮ್ಮಾ ಬಿರಾದಾರ, ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ.**



**20 ವರ್ಷಗಳ ಹಿಂದೆ ನಿರ್ಮಿಸಿದ ಮನೆಗಳಿವೆ ಬಡ ಕುಟುಂಬಗಳಿಗೆ ಮನೆಗಳು ವಿತರಣೆ ಮಾಡುವ ಸ್ಥಿತಿಯಲ್ಲಿ ಮನೆಗಳಿಲ್ಲ, ಮನೆಗಳ ನಿರ್ಮಾಣ ಆದ ಮೇಲೆ ಹಸ್ತಾಂತರ ಮಾಡದೆ ಪುರಸಭೆ ವತಿಯಿಂದ 2ಬಾರಿ ದೊಡ್ಡಮಟ್ಟದ ಅನುದಾನ ತಂದು ದುರಸ್ಥಿ ನಾಮಕೆವಾಸ್ತೆ ಮಾಡಿ ಹಣ ಲೂಟಿ ಮಾಡಿದ್ದಾರೆ,ಜನಪ್ರತಿನಿಧಿಗಳು ಅಧಿಕಾರಿಗಳಿಗೆ ಹಣ ಲೂಟಿ ಮಾಡಲು ಒಳ್ಳೆಯ ಯೋಜನೆ ಆಗಿದೆ, ಇದನ್ನು ಉನ್ನತಮಟ್ಟದ ತನಿಖೆ ಮಾಡಬೇಕು,ಹಾಗೂ ಇಂಜಿನಿಯರ್ ಅಧಿಕಾರಿಗಳನ್ನು ಆಹ್ವಾನಿಸಿ ಮನೆಗಳು ಪರೀಶೀಲನೆ ಮಾಡಿದ ನಂತರ ಮನೆಗಳು ಹಕ್ಕುಪತ್ರ ನೀಡಬೇಕು ಮತ್ತು ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸಂಪರ್ಕ, ಸಿಸಿ ರಸ್ತೆಗಳು,ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸಿ ಶೀಘ್ರದಲ್ಲೆ ಮನೆಗಳು ವಿತರಿಸಬೇಕು ಇಲ್ಲಾದಿದ್ದರೆ ಪುರಸಭೆ ಮುತ್ತಿಗೆ ಹಾಕಲಾಗುವುದು.**

**- ರವಿಶಂಕರರೆಡ್ಡಿ ಮುತ್ತಂಗಿ, ಜೆಡಿಎಸ್ ತಾಲ್ಲೂಕಾಧ್ಯಕ್ಷ ಚಿಂಚೋಳಿ.**



**ಕೊಳಚೆ ನಿರ್ಮೂಲನೆ ಮಂಡಳಿ ವತಿಯಿಂದ ನಿರ್ಮಿಸಿದ ಮನೆಗಳು ಬಡವರಿಗೆ ಹಕ್ಕುಪತ್ರ ವಿತರಿಸಿ ಫಲಾನುಭವಿಗಳಿಗೆ ಮನೆಗಳು ವಿತರಣೆ ಮಾಡಬೇಕು ಹಾಗೂ ಬಡವರು ಸಾಲಸೂಲ ಮಾಡಿ ಮನೆಗಳು ಅರ್ಧಕ್ಕೆ ಕಟ್ಟಿದ ಮನೆಗಳ ಬಿಲ್ ಪಾವತಿ ಮಾಡಬೇಕು ಇಲ್ಲಾದಿದ್ದರೆ ಬರುವ ದಿನಗಳಲ್ಲಿ ಪುರಸಭೆಯನ್ನು ಮುತ್ತಿಗೆ ಹಾಕಿ ಪ್ರತಿಭಟನೆ ಮಾಡುತ್ತೇವೆ ಹಾಗೂ ಶಾಸಕರಿಗೆ ಘೇರಾವ್ ಹಾಕುತ್ತೇವೆ. - ಗೋಪಾಲ ಇಡಗೋಟ್ಟಿ, ವೀರ ಕನ್ನಡಿಗ ಸೇನೆ ತಾಲ್ಲೂಕಾಧ್ಯಕ್ಷ ಚಿಂಚೋಳಿ.**

## ಸುವರ್ಣ ಸೌಧದ ಎದುರು ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಹೋರಾಟ

- ಉದಯವಾಹಿನಿ, ಯಲಬುರ್ಗಾ

ರಾಜ್ಯದ 14 ಸಾವಿರ ಪತ್ರಕರ್ತರಿಗೆ ಮೂಲಭೂತ ರಕ್ಷಣೆ ಕಾಯ್ದೆ, ಬಸ್ ಪಾಸ್ ಸೇರಿದಂತೆ ಇನ್ನಿತರ ಬೇಡಿಕೆ ಈಡೇರಿಸುವಂತೆ ಬೆಳಗಾವಿಯಲ್ಲಿ 15 ರಂದು ಪ್ರತಿಭಟನೆ ನಡೆಸಲಾಗುತ್ತಿದ್ದು ಇದಕ್ಕೆ ರಾಜ್ಯದ ಸಮಸ್ತ ಪತ್ರಕರ್ತರು ಬೆಂಬಲ ಸೂಚಿಸಬೇಕು ಎಂದು ಕರ್ನಾಟಕ ಪತ್ರಕರ್ತರ ಧ್ವನಿ ತಾಲ್ಲೂಕ ಅಧ್ಯಕ್ಷ ಶ್ರೀಕಾಂತ ಗೌಡ ಮಾಲಿ ಪಾಟೀಲ್ ಅವರು ಕರೆ ನೀಡಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಶ್ರೀಕಾಂತ ಗೌಡ ಅವರು ಮಾತನಾಡುತ್ತ ಪ್ರಜಾ ಪ್ರಭುತ್ವದ ನಾಲ್ಕನೇ ಅಂಗವಾದ ಪತ್ರಿಕಾ ರಂಗಕ್ಕೆ ತನ್ನದೇ ಆದ ಇತಿಹಾಸವಿದೆ ಆದರೆ ವಾಸ್ತವ ಸಂಗತಿ ತಿಳಿಸುವ ನಿಟ್ಟಿನಲ್ಲಿ ಕಾರ್ಯನಿರತವಾಗುವ ಪತ್ರಕರ್ತರಿಗೆ ಸೂಕ್ತ ರಕ್ಷಣೆ ಹಾಗೂ ಮೂಲಭೂತ ಸೌಲಭ್ಯ ಇಲ್ಲದೆ ಇರುವುದನ್ನು ಖಂಡಿಸಿ ನಮ್ಮ ರಾಜ್ಯ ಅಧ್ಯಕ್ಷರು ಆದ ಬಂಗ್ಲೆ ಮಲ್ಲಿಕಾರ್ಜುನ ಸ್ಥಾಪಿತ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಇದೆ ಡಿ.15 ರಂದು ಬೆಳಗಾವಿ ನಡೆಯಲಿರುವ ಚಳಿಗಾಲದ ಅಧಿವೇಶನದ ನಿಮಿತ್ಯವಾಗಿ ಸುವರ್ಣಸೌಧದ ಮುಂದೆ ಮುಖ್ಯಮಂತ್ರಿಗಳ ಸಚಿವರ ಮಧ್ಯೆ ಪ್ರತಿಭಟನೆ ಆಯೋಜಿಸಲಾಗಿದ್ದು ಈ ಪ್ರತಿಭಟನೆಗೆ ರಾಜ್ಯಾಧ್ಯಕ್ಷರ ಮನವಿಯ ಮೇರೆಗೆ ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕ ಅಧ್ಯಕ್ಷರು ಮತ್ತು ಸದಸ್ಯರುಗಳು ಭಾಗವಹಿಸಿ ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕು ಪತ್ರಕರ್ತರಿಗೆ ಸೂಕ್ತ ರಕ್ಷಣಾ ಕಾಯಿದೆ ಹಾಗೂ ಮೂಲಭೂತ ಸೌಲಭ್ಯ ಪಡೆದುಕೊಳ್ಳುವಲ್ಲಿ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ತಾಲ್ಲೂಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಪದಾಧಿಕಾರಿಗಳು. ಶ್ರೀ ಶರಣಬಸಪ್ಪ ದಾನಕ್ಕೆ ಗೌರವಾಧ್ಯಕ್ಷರು. ಶ್ರೀ ಮಲ್ಲಿಕಾರ್ಜುನ ಹಡಪದ. ಕಾರ್ಯದರ್ಶಿ ಶ್ರೀ ಹುಸೇನ ಮೊತೇಖಾನ. ಉಪಾಧ್ಯಕ್ಷರು. ಶ್ರೀ ಸಿ ಎ ಆದಿ. ಶ್ರೀ ಬಸವರಾಜ ಮುಂಡರಗಿ. ಶ್ರೀ ಶ್ರೀಕಾಂತ ಅಂಗಡಿ. ಶ್ರೀ ಮೌನೇಶ ಮದ್ದೂರು. ಶ್ರೀ ನೀಲಪ್ಪ ವೀ, ಖಾನಾವಳಿ. ಶ್ರೀ ವಿ.ಎಸ್. ಶಿವಪ್ಪಯ್ಯನಮಠ. ಶ್ರೀ ಈರಣ್ಣ ತೋಟದ. ಶ್ರೀ ಶ್ಯಾಮೀದಸಾಬ ತಾಳಕೇರಿ ಇತರರು ಇದ್ದರು.

**ಗ್ರಾಮೀಣ ಭಾಗದ ಪತ್ರಕರ್ತರಿಗೆ ಬಸ್ ಪಾಸ್ ನೀಡಿದರು ಸಹ ಯಾವುದೇ ರೀತಿಯ ಪ್ರಯೋಜನ ವಿಲ್ಲದಂತಾಗಿದೆ. ರಕ್ಷಣಾ ಕಾಯಿದೆ, ಮೂಲಭೂತ ಸೌಕರ್ಯಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡುವುದು ಸೇರಿದಂತೆ ಸರ್ಕಾರಕ್ಕೆ ಪತ್ರಕರ್ತರ ಒಗ್ಗಟ್ಟು ಪ್ರದರ್ಶಿಸುವ ಅವಶ್ಯಕತೆ ಇದ್ದು ಎಲ್ಲಾ ಪತ್ರಕರ್ತರು ಈ ಸಂದರ್ಭದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು.**

**-ಶ್ರೀಕಾಂತ ಗೌಡ ಮಾಲಿ ಪಾಟೀಲ್**

## ಕಳಪೆ ಮೆಕ್ಕೆಜೋಳ; ಖರೀದಿ ಸ್ಥಗಿತ: ರೈತರ ಅಕ್ರೋಶ

- ಉದಯವಾಹಿನಿ ಕೆರೂರ

ಕಳಪೆ ಗುಣಮಟ್ಟದ ಮೆಕ್ಕೆಜೋಳ ಎಂದು ಖರೀದಿ ಕೇಂದ್ರ ಸ್ಥಗಿತಗೊಳಿಸಿದ್ದರಿಂದ ರೈತರು ಖರೀದಿ ಕೇಂದ್ರದ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದ ಘಟನೆ ಪಟ್ಟಣದಲ್ಲಿ ನಡೆದಿದೆ. ಸರ್ಕಾರದ ಆದೇಶದಂತೆ ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಕೇಂದ್ರದಲ್ಲಿ ಮೆಕ್ಕೆಜೋಳ ಖರೀದಿ ವಾರದ ಹಿಂದೆ ಪ್ರಾರಂಭವಾಗಿದ್ದು, ಇಂದು ಖರೀದಿ ಕೇಂದ್ರಕ್ಕೆ ಬಂದಂತಹ ರೈತರಿಗೆ ಮೆಕ್ಕೆಜೋಳ ಗುಣಮಟ್ಟದ್ದು ಇಲ್ಲ ಎಂದು ಸ್ಥಗಿತಗೊಳಿಸಿದರು. ಇದರಿಂದ ರೈತರು ಅಕ್ರೋಶ ಹೋರಹಾಕಿದರು.

ಖರೀದಿ ಪ್ರಾರಂಭವಾಗಿ ಒಂದು ವಾರ ಕಳೆದರೂ ಕೂಡಾ ಇಲ್ಲಿಯವರೆಗೆ 50 ರೈತರಿಂದ ಮಾತ್ರ ಖರೀದಿ ಮಾಡಲಾಗಿದೆ. ಒಟ್ಟು 1200 ರೈತರು ನೋಂದಣಿ ಮಾಡಿಸಿದ್ದಾರೆ. ದಿನಕ್ಕೆ 10 ರಿಂದ 15 ಜನರಿಂದ ಮಾತ್ರ ಖರೀದಿ ಮಾಡುತ್ತಿದ್ದಾರೆ. ಈಗ ಏಕಾಏಕಿ ಗುಣಮಟ್ಟದ ನೆಪವೊಡ್ಡಿ ಖರೀದಿ ಸ್ಥಗಿತಗೊಳಿಸಿದ್ದಾರೆ. ಹೀಗಾದರೆ ನಾವು ದಿನ್ಯನಿತ್ಯ ಚಳಿಯಲ್ಲಿ ರಾಶಿಯನ್ನು ಹೋಲದಲ್ಲಿ ಕಾಯುವುದು ಹೇಗೆ? ಕಿಡಿಗೆಡಿಗಳು ರಾಶಿಗಳಿಗೆ ಬೆಂಕಿ ಹಚ್ಚುತ್ತಿದ್ದಾರೆ. ನಮ್ಮ ಬೆಳೆಗಳಿಗೆ ಯಾರು ಹೊಣೆ' ಎಂದು ರೈತರು ತಮ್ಮ ಅಳಲು ತೋಡಿಕೊಂಡರು.


ಉದಯವಾಹಿನಿ ಚಿತ್ರ

ಸ್ಥಳಕ್ಕೆ ಜಿಲ್ಲೆಯ ಎಪಿಎಂಸಿ ಮಾರುಕಟ್ಟೆಯ ಸಹಾಯಕ ನಿರ್ದೇಶಕ ವಿ.ಡಿ.ಪಾಟೀಲ ಆಗಮಿಸಿ, ರೈತರೊಂದಿಗೆ ಚರ್ಚಿಸಿ ಸರ್ಕಾರದ ಆದೇಶ ಪ್ರಕಾರ ನಾವು ಮೆಕ್ಕೆಜೋಳ ಖರೀದಿ ಮಾಡುತ್ತಿದ್ದೇವೆ. ಮೆಕ್ಕೆಜೋಳ 14 % ತೇವಾಂಶ ಹಾಗೂ 5 % ಡ್ಯಾಮೇಜ ಇದ್ದರೆ ಮಾತ್ರ ಖರೀದಿಸಲು ಅವಕಾಶ ಇದೆ. ಮೆಕ್ಕೆಜೋಳ ಕಳಪೆ ಗುಣಮಟ್ಟದ ಇದ್ದರೆ ಫ್ಯಾಕ್ಟರಿಯವರು ತಿರಸ್ಕರಿಸುತ್ತಾರೆ. ಕಳಪೆ ಗುಣಮಟ್ಟದ ಮೆಕ್ಕೆಜೋಳ ಖರೀದಿಗೆ ಅವಕಾಶವಿಲ್ಲ ಎಂದು ಹೇಳಿ ರೈತರನ್ನು ಸಮಾಧಾನಗೊಳಿಸಿದರು.

## ಚುತುಷ್ಪಥ ರಸ್ತೆ ಕಾಮಗಾರಿ ಅವೈಜ್ಞಾನಿಕ, ಕಳಪೆ


ಉದಯವಾಹಿನಿ ಚಿತ್ರ

- ಉದಯವಾಹಿನಿ, ಹೊನ್ನಾಳಿ

ಪಟ್ಟಣದಲ್ಲಿ ನಡೆಯುತ್ತಿರುವ ಗದಗದಿಂದ ಹೊನ್ನಾಳಿ ಚತುಷ್ಪಥ ರಾಜ್ಯ ಹೆದ್ದಾರಿ ವಿಸ್ತರಣೆ ಮತ್ತು ಚರಂಡಿ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಸಂಪೂರ್ಣ ಕಳಪೆಯಿಂದ ಕೂಡಿದೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಆರೋಪಿಸಿದರು. ಪಟ್ಟಣದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ತುಮ್ಮಿನಕಟ್ಟೆ ರಸ್ತೆಯುದ್ದಕ್ಕೂ ನಡೆಯುತ್ತಿರುವ ಕಾಮಗಾರಿಯನ್ನು ವೀಕ್ಷಣೆ ಮಾಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಚತುಷ್ಪಥ ರಸ್ತೆಯ ಎರಡೂ ಬದಿಯಲ್ಲಿ ನಡೆಯುತ್ತಿರುವ ಚರಂಡಿ ಕಾಮಗಾರಿಗೆ ಸರಿಯಾದ ಪ್ರಮಾಣದಲ್ಲಿ ಸಿಮೆಂಟ್ ಬಳಸದೇ ಕಾಮಗಾರಿ ಮಾಡಲಾಗಿದೆ. ಚರಂಡಿಗಳಿಗೆ ನೀರಿನ ಕ್ಯೂರಿಂಗ್ ಕೂಡ ಮಾಡಿಲ್ಲ. ಇದರಿಂದ ಬಹುಬೇಗ ಚರಂಡಿ ಕುಸಿದು ಬೀಳುವ ಅಪಾಯವಿದೆ. ತಕ್ಷಣ ಕಾಮಗಾರಿ ಸರಿಪಡಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದರು. 2016ರಲ್ಲಿ ಗದಗ-ಹೊನ್ನಾಳಿ ಚತುಷ್ಪಥ ರಸ್ತೆ ಕಾಮಗಾರಿಗೆ ರೂ. 902 ಕೋಟಿ ಅನುದಾನವನ್ನು ನಾವೆಲ್ಲರೂ ಹೋರಾಟ ಮಾಡಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಂದ ಬಿಡುಗಡೆ ಮಾಡಿಸಿದ್ದೆವು. ಈಗ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ಪಟ್ಟಣದಲ್ಲಿ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಕುಂಬಾರ ಬೀದಿವರೆಗೆ ನಡೆಯುತ್ತಿರುವ ಚರಂಡಿ ಕಾಮಗಾರಿ ಬೇಕಾಬಿಟ್ಟಿಯಾಗಿ ನಡೆಯುತ್ತಿದೆ' ಎಂದು ಕಿಡಿಕಾರಿದರು.

ಚತುಷ್ಪಥ ರಸ್ತೆ ಕಾಮಗಾರಿಯ ಯೋಜನೆ ಪ್ರಕಾರ ರಸ್ತೆ ಮಧ್ಯದಿಂದ 11.5 ಮೀ.ನಂತೆ ಎರಡು ಬದಿ ಸೇರಿ ಒಟ್ಟು 23 ಮೀಟರ್ ವಿಸ್ತರಣೆ ಆಗಬೇಕು. ಆದರೆ ರಾಜಕೀಯ ಒಳನುಸುಳುವಿಕೆಯಿಂದ ತಾರತಮ್ಯ ಮಾಡಲಾಗಿದೆ. ಕೆಲವು ಕಡೆಗಳಲ್ಲಿ ರಸ್ತೆ ಮಧ್ಯದಿಂದ 11.5 ಮೀಟರ್ ಬದಲಾಗಿ 8.5 ಮೀ, 9 ಮೀ. ಅಳತೆ ಕಂಡುಬಂದಿದೆ. ಹೀಗೆ ತಮಗೆ ಬೇಕಾದ ರೀತಿಯಲ್ಲಿ ರಸ್ತೆ ವಿಸ್ತರಣೆ ಮಾಡಿ ಸಿಮೆಂಟ್ ಒರೆಸುವ ಕೆಲಸ ಮಾಡಿದ್ದಾರೆ' ಎಂದು ಆರೋಪಿಸಿದರು.

## ರಸ್ತೆಯಲ್ಲೇ ವಾಯುವಿಹಾರ: ಯಲ್ಲಾಪುರಕ್ಕೆ ಬೇಕಿದೆ ವಾಕಿಂಗ್ ಪಥ

- ಉದಯವಾಹಿನಿ ಯಲ್ಲಾಪುರ

ಪಟ್ಟಣದಲ್ಲಿ ಬೆಳಗಿನ ಜಾವ ವಾಕಿಂಗ್ ಮಾಡಲು ಸರಿಯಾದ ಸ್ಥಳ ಇಲ್ಲ ಎಂಬ ಆರೋಪ ಸಾರ್ವಜನಿಕರಿಂದ ಕೇಳಿ ಬಂದಿದೆ. ಕಾಳಮ್ಮನಗರದ ತಾಲ್ಲೂಕು ಕ್ರೀಡಾಂಗಣ, ವೈಟಿಎಸ್‌ಎಸ್ ಮೈದಾನ, ಐಬಿ ರಸ್ತೆಯ ಮಕ್ಕಳ ಉದ್ಯಾನದಲ್ಲಿ ಕೆಲವರು ವಾಕಿಂಗ್ ಮಾಡುತ್ತರಾದರೂ ಅಲ್ಲೆಲ್ಲಿಯೂ ವಾಕಿಂಗ್ ಟ್ರ್ಯಾಕ್ ಇಲ್ಲ, ಶಿರಸಿ ರಸ್ತೆಯಲ್ಲಿರುವ ಅರಣ್ಯ ಇಲಾಖೆಯ ಸಸ್ಯೋದ್ಯಾನದಲ್ಲಿ ವಾಕಿಂಗ್ ಟ್ರ್ಯಾಕ್ ನಿರ್ಮಿಸಿದ್ದರೂ ಅದು ಸಾರ್ವಜನಿಕರ ಬಳಕೆಗೆ ದೊರೆಯುತ್ತಿಲ್ಲ. ಗಾರ್ಡನ್ ತೆರೆಯುವ ಸಮಯ ಬೆಳಿಗ್ಗೆ 6ರಿಂದ 8ರವರೆಗೆ, ಸಂಜೆ 4ರಿಂದ 6ರವರೆಗೆ ಎಂದು ಪ್ರವೇಶ ದ್ವಾರದಲ್ಲಿ ಬೋರ್ಡ್ ಇದೆಯಾದರೂ ಈಚೆಗೆ ಅದರ ಬಾಗಿಲು ಮಾತ್ರ ತೆರೆದಿಲ್ಲ.

ಪಟ್ಟಣದಲ್ಲಿ ವಾಕಿಂಗ್ ಟ್ರ್ಯಾಕ್ ಸೌಲಭ್ಯ ಹೊಂದಿದ ನಿರ್ದಿಷ್ಟ ಸ್ಥಳ ಇಲ್ಲದ ಕಾರಣ ರಸ್ತೆ ನಡುವೆಯೇ ವಾಕಿಂಗ್ ಮಾಡಬೇಕಿದೆ. ರಸ್ತೆಯ ಅಂಚಿನಲ್ಲಿ ನಡೆದು ಸಾಗೋಣ ಎಂದರೆ ಅಲ್ಲಿ ನಿರ್ಮಿಸಲಾಗಿದ್ದ ಕಾಲುದಾರಿಯನ್ನು ಗೂಡಂಗಡಿಕಾರರು ಒತ್ತುವರಿ ಮಾಡಿದ್ದಾರೆ. ಇನ್ನು ರಸ್ತೆ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಲಾಗಿರುತ್ತದೆ. ಹೀಗಾಗಿ ಅಪಘಾತದ ಭೀತಿಯಲ್ಲಿಯೇ ಅನಿವಾರ್ಯವಾಗಿ ರಸ್ತೆಯ ಮಧ್ಯದಲ್ಲಿಯೇ ನಡೆಯಬೇಕಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ನಸುಕಿನ ಅವಧಿಯಲ್ಲಿ ನಾಯಿಗಳ ಕಾಟವೂ ಜಾಸ್ತಿ. ಹೀಗೆ ಬೆಳಗಿನ ಜಾವ ಭಯದಲ್ಲಿಯೇ ವಾಕಿಂಗ್ ಮಾಡುವಂತಾಗಿದೆ' ಎನ್ನುತ್ತಾರೆ ರಾಜು ಶೆಟ್ಟಿ.

ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಸಸ್ಯ ಉದ್ಯಾನವನ್ನು ಬೆಳಗಿನ ಅವಧಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ತೆರೆಯುವಂತೆ ವ್ಯವಸ್ಥೆ ಕಲ್ಪಿಸಬೇಕು. ಕಾಳಮ್ಮ ನಗರದ ತಾಲ್ಲೂಕು ಕ್ರೀಡಾಂಗಣ, ವೈಟಿಎಸ್‌ಎಸ್ ಮೈದಾನದ ಸುತ್ತ ವಾಕಿಂಗ್ ಟ್ರ್ಯಾಕ್ ನಿರ್ಮಿಸಬೇಕು. ಪಟ್ಟಣ ಪಂಚಾಯಿತಿ ಐಬಿ ರಸ್ತೆಯಲ್ಲಿರುವ ಪಾಳುಬಿದ್ದ ಮಕ್ಕಳ ಉದ್ಯಾನವನ್ನು ಅಭಿವೃದ್ಧಿಪಡಿಸಿ ಅಲ್ಲಿ ವಾಕಿಂಗ್ ಟ್ರ್ಯಾಕ್ ಸೇರಿದಂತೆ ಬೆಳಗಿನ ವ್ಯಾಯಾಮಕ್ಕೆ ಅಗತ್ಯ ಸೌಲಭ್ಯ ಕಲ್ಪಿಸಬೇಕು. ರಸ್ತೆಯ ಅಂಚಿನ ಕಾಲುದಾರಿಯಲ್ಲಿನ ಒತ್ತುವರಿ ತೆರವುಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.


ಉದಯವಾಹಿನಿ ಚಿತ್ರ

**ಬೆಳಿಗ್ಗೆ 6ಕ್ಕೆ ಶಿರಸಿ ರಸ್ತೆಯಲ್ಲಿ ವಾಕಿಂಗ್ ಮಾಡುತ್ತಿದ್ದ ಮಹಿಳೆಯೊಬ್ಬರ ಮೇಲೆ ಈಚೆಗೆ ಕಾರು ಹರಿದಿದ್ದು, ಅಪಘಾತದಲ್ಲಿ ಅವರ ಹಲ್ಲುಗಳು ಮುರಿದು ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಇಂಥ ಘಟನೆಗೆ ಪಟ್ಟಣದಲ್ಲಿ ಸೂಕ್ತ ವಾಕಿಂಗ್ ಟ್ರ್ಯಾಕ್ ಇಲ್ಲದಿರುವುದೇ ಕಾರಣ ಎಂಬುದು ಜನರ ಅಭಿಪ್ರಾಯ.**

**ಮೈದಾನದ ಸುತ್ತ ವಾಕಿಂಗ್ ಟ್ರ್ಯಾಕ್ ನಿರ್ಮಿಸಬೇಕು**

# ಶುರುವಾಗದ ಮೆಕ್ಕೆಜೋಳ ಖರೀದಿ ಪ್ರಕ್ರಿಯೆ: ಎಪಿಎಂಸಿ ಕೇಂದ್ರಗಳಿಗೆ ರೈತರ ಅಲೆದಾಟ

**• ಡಿಸ್ಟಿಲರಿ ಹಣ ಠೇವಣಿ ಇಡದ ಪರಿಣಾಮ ಖರೀದಿ ಪ್ರಕ್ರಿಯೆ ಆರಂಭಿಸಲು ಸಾಧ್ಯವಾಗಿಲ್ಲ**

- ಉದಯವಾಹಿನಿ ದಾವಣಗೆರೆ

ದಾವಣಗೆರೆ ಶುಗರ್ ಕಂಪನಿ ಲಿಮಿಟೆಡ್' ಡಿಸ್ಟಿಲರಿಯು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದಲ್ಲಿ (ಕೆಎಸ್‌ಸಿಎಂಎಫ್) ಹಣವನ್ನು ಠೇವಣಿ ಮಾಡದ ಪರಿಣಾಮ ಮೆಕ್ಕೆಜೋಳ ಖರೀದಿ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ. ಇದರಿಂದ ಜಿಲ್ಲಾಡಳಿತ ಗುರುತಿಸಿದ ಖರೀದಿ ಕೇಂದ್ರಗಳಿಗೆ ರೈತರು ಅಲೆದಾಡುವಂತಾಗಿದೆ.

ಬೆಂಬಲ ಬೆಲೆ ಯೋಜನೆಯಡಿ ಮೆಕ್ಕೆಜೋಳ ಖರೀದಿಸಲು ದಾವಣಗೆರೆ ಕೃಷಿ ಉತ್ಪನ್ನ ಮಾರಾಟ ಸಮಿತಿ (ಎಪಿಎಂಸಿ) ಆವರಣ ಹಾಗೂ ಕುಕ್ಕವಾಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಜಿಲ್ಲಾಡಳಿತ ಗುರುತಿಸಿದೆ. ಡಿ.10ರಿಂದ ಖರೀದಿ ಪ್ರಕ್ರಿಯೆ ಆರಂಭಕ್ಕೆ ಸೂಚನೆ ನೀಡಿತ್ತು. ಎರಡು ದಿನ ಕಳೆದರೂ ನೋಂದಣಿ, ಖರೀದಿ ಪ್ರಕ್ರಿಯೆ ಶುರುವಾಗಿಲ್ಲ.

ಮುಂಗಾರು ಹಂಗಾಮಿನಲ್ಲಿ ರೈತರು ಬೆಳೆದ ಮೆಕ್ಕೆ ಜೋಳವನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಸರ್ಕಾರ ಡಿಸ್ಟಿಲರಿಗಳಿಗೆ ಸೂಚನೆ ನೀಡಿದೆ. ಜಿಲ್ಲೆಯ ದಾವಣಗೆರೆ ತಾಲ್ಲೂಕಿನ ಕುಕ್ಕವಾಡ ಗ್ರಾಮದಲ್ಲಿ ಮಾತ್ರ ಡಿಸ್ಟಿಲರಿ ಇದೆ. ಇದರ 20 ಕಿ.ಮೀ ವ್ಯಾಪ್ತಿಯಲ್ಲಿ ಕೇಂದ್ರವನ್ನು ತೆರೆದು ಮೆಕ್ಕೆಜೋಳ ಖರೀದಿಸಲು ಅವಕಾಶವಿದೆ. ಈ ಹೊಣೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಕ್ಕೆ ನೀಡಲಾಗಿದೆ. ಕುಕ್ಕವಾಡ ಹಾಗೂ ಅವರಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಮೆಕ್ಕೆಜೋಳ ಖರೀದಿಗೆ ಕೆಎಸ್‌ಸಿಎಂಎಫ್ ನಿರ್ಧರಿಸಿದೆ. ಆದರೆ, ಇದು ಕಾರ್ಯರೂಪಕ್ಕೆ ಬಂದಿಲ್ಲ.

**ಖರೀದಿ ಕೇಂದ್ರಗಳಿಗೆ ಅಲೆದಾಟ:**

ಖರೀದಿ ಕೇಂದ್ರ ಆರಂಭಿಸಿರುವುದಾಗಿ ಜಿಲ್ಲಾಡಳಿತ ಮಾಹಿತಿ ನೀಡುತ್ತಿದ್ದಂತೆ ರೈತರು ಹರ್ಷಗೊಂಡಿದ್ದರು. ಕುಕ್ಕವಾಡ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಎಪಿಎಂಸಿಯತ್ತ ಮುಖ ಮಾಡಿದ್ದಾರೆ. ಪಹಣಿ ಸೇರಿದಂತೆ ಅಗತ್ಯ ದಾಖಲೆಗಳನ್ನು ಹಿಡಿದು ಕೇಂದ್ರಗಳ ಬಾಗಿಲು ಬಡಿಯುತ್ತಿದ್ದಾರೆ. ಆದರೆ, ಖರೀದಿ ಪ್ರಕ್ರಿಯೆ ಆರಂಭವಾಗದ ಪರಿಣಾಮ ನಿರಾಸೆಯಿಂದ ಹಿಂದಿರುಗುತ್ತಿದ್ದಾರೆ.

ಮೆಕ್ಕೆಜೋಳ ಖರೀದಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಖರೀದಿಸಿದ ಮೆಕ್ಕೆಜೋಳವನ್ನು ಹದಡಿ ಗ್ರಾಮದ ಗೋದಾಮಿಗೆ ಸಾಗಿಸಲು ತಯಾರಿ ಮಾಡಿಕೊಳ್ಳಲಾಗಿದೆ. ಆದರೆ, ಡಿಸ್ಟಿಲರಿ ಹಣ ಠೇವಣಿ ಇಡದ ಪರಿಣಾಮ ಖರೀದಿ ಪ್ರಕ್ರಿಯೆ ಆರಂಭಿಸಲು ಸಾಧ್ಯವಾಗಿಲ್ಲ.

ಈ ಸಮಸ್ಯೆಯನ್ನು ರೈತರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಯುತ್ತಿದೆ ಎಂದು ಕುಕ್ಕವಾಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರೊಬ್ಬರು ವಿವರಿಸಿದರು.

ಜಿಲ್ಲೆಯ 1.28 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದೆ. ಪ್ರತಿ ರೈತರಿಂದ ಎಕರೆಗೆ 12 ಕ್ವಿಂಟಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 50 ಕ್ವಿಂಟಲ್ ಮೆಕ್ಕೆಜೋಳ ಖರೀದಿಸಲು ಅವಕಾಶವಿದೆ. ಪ್ರತಿ ಕ್ವಿಂಟಲ್‌ಗೆ ಸರ್ಕಾರ ರೂ. 2,400 ಬೆಂಬಲ ಬೆಲೆ ನಿಗದಿಪಡಿಸಿದೆ. ಮಾರುಕಟ್ಟೆಯಲ್ಲಿ ಮೆಕ್ಕೆಜೋಳದ ಬೆಲೆ ಕುಸಿದಿದ್ದರಿಂದ ರೈತರು ಖರೀದಿ ಕೇಂದ್ರಗಳನ್ನು ಎದುರು ನೋಡುತ್ತಿದ್ದಾರೆ.


ಉದಯವಾಹಿನಿ ಚಿತ್ರ

**ಮೆಕ್ಕೆಜೋಳ ದಾಸ್ತಾನು ಇಟ್ಟುಕೊಳ್ಳಲು ರೈತರಿಗೆ ಸಾಧ್ಯವಿಲ್ಲ. ಖರೀದಿ ಕೇಂದ್ರ ವಿಳಂಬವಾದಷ್ಟು ಡಿಸ್ಟಿಲರಿ ಮಾಲೀಕರಿಗೆ ಅನುಕೂಲವಾಗಲಿದೆ. ಸರ್ಕಾರ ರೈತರನ್ನು ವಂಚಿಸುತ್ತಿದೆ.**

**-ಬಿ.ಎಂ. ಸತೀಶ್ ಕೋಳೆನಹಳ್ಳಿ ಮುಖಂಡ ಜಿಲ್ಲಾ ರೈತ ಒಕ್ಕೂಟ**

**ಮೆಕ್ಕೆಜೋಳ ಖರೀದಿಸಲು ಅವಕಾಶ**

### ಅರ್ಧದಷ್ಟು ಠೇವಣಿ ಕಡ್ಡಾಯ

**ಧಾನ್ಯ ಆಧಾರಿತ ಎಥೆನಾಲ್ ಉತ್ಪಾದಿಸುವ ಡಿಸ್ಟಲರಿಗಳಿಗೆ ಅಗತ್ಯವಿರುವ ಮೆಕ್ಕೆಜೋಳದ ಶೇ 50ರಷ್ಟನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಸರ್ಕಾರ ಸೂಚಿಸಿದೆ. ಈ ಪ್ರಕಾರ ದಾವಣಗೆರೆ ಶುಗರ್ ಕಂಪನಿ ಲಿಮಿಟೆಡ್' 729.50 ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿಸಬೇಕಿದೆ. ಖರೀದಿ ಕೇಂದ್ರಕ್ಕೆ ರೈತರು ಮೆಕ್ಕೆಜೋಳ ಮಾರಾಟ ಮಾಡಿದ ಮೂರು ದಿನಗಳ ಒಳಗಾಗಿ ನೇರ ನಗದು (ಡಿಬಿಟಿ) ಮೂಲಕ ಹಣ ಪಾವತಿಸಬೇಕು. ಇದಕ್ಕೆ ಡಿಸ್ಟಿಲರಿಗೆ ನಿಗದಿಪಡಿಸಿದ ಮೆಕ್ಕೆಜೋಳದ ಅರ್ಧ ಪ್ರಮಾಣದಷ್ಟು ಹಣವನ್ನು ಕೆಎಸ್‌ಸಿಎಂಎಫ್‌ಗೆ ಠೇವಣಿ ಇಡಬೇಕು. ಆದರೆ ದಾವಣಗೆರೆ ಶುಗರ್ ಕಂಪನಿ ಲಿಮಿಟೆಡ್ ಈ ಹಣವನ್ನು ಠೇವಣಿ ಮಾಡಿಲ್ಲ ಎಂದು ಮೂಲಗಳು ತಿಳಿಸಿವೆ.**

## ಮಿನಿ ನ್ಯೂಸ್

### ಕಲಬುರಗಿ-ಯಾದಗಿರ ಜಿಲ್ಲೆಗೆ 717 ಕೋಟಿ ಬೆಳೆ ಪರಿಹಾರ ವಿತರಣೆ

- ಉದಯವಾಹಿನಿ ಕಲಬುರಗಿ

ಅತಿವೃಷ್ಟಿಯಿಂದ ಕಲಬುರಗಿ ಮತ್ತು ಯಾದಗಿರ ಜಿಲ್ಲೆಯಲ್ಲಿ ಆಗಿರುವ ಬೆಳೆ ಹಾನಿಗೆ 717 ಕೋಟಿ ರೂ.ಗಳ ಪರಿಹಾರವನ್ನು ವಿತರಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಹೇಳಿದರು.

ಬೆಳಗಾವಿಯ ಚಳಿಗಾಲದ ವಿಧಾನ ಮಂಡಲ ಅಧಿವೇಶನದಲ್ಲಿ ವಿಧಾನ ಪರಿಷತ ಸದಸ್ಯ ಡಾ.ಬಿ.ಜಿ.ಪಾಟೀಲ ಅವರು, ಕೇಳಿದ ಪತ್ರಶ್ನೆ ಸಚಿವರು, ಉತ್ತರಿಸಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿ 3.24 ಲಕ್ಷ ಹೆಕ್ಟರ ಮತ್ತು ಯಾದಗಿರ ಜಿಲ್ಲೆಯಲ್ಲಿ 1.12 ಲಕ್ಷ ಹೆಕ್ಟರ ಬೆಳೆ ಹಾನಿಯಾಗಿದ್ದು, ಕಲಬುರಗಿ ಜಿಲ್ಲೆಯ ರೈತರಿಗೆ 498 ಕೋಟಿ ಮತ್ತು ಯಾದಗಿರ ಜಿಲ್ಲೆಯ ರೈತರಿಗೆ 219 ಕೋಟಿ ರೂ.ಗಳ ಪರಿಹಾರವನ್ನು ವಿತರಿಸಲಾಗಿದೆ.

ಬೆಳೆ ಪರಿಹಾರವನ್ನು ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿ ಆರ್‌ಎಫ್ ಮಾರ್ಗಸೂಚಿಯಂತೆ ಕಲಬುರಗಿ ಜಿಲ್ಲೆಗೆ 250.97 ಕೋಟಿ ರೂ.ಗಳು ಸೇರಿ ರಾಜ್ಯ ಸರ್ಕಾರ 498.73 ಕೋಟಿ ರೂ.ಗಳ ಪರಿಹಾರವನ್ನು ಪಾವತಿಸಿದೆ. ಇದೇ ರೀತಿಯಲ್ಲಿ ಯಾದಗಿರ ಜಿಲ್ಲೆಯಲ್ಲಿ 95.59 ಕೋಟಿ ಸೇರಿದಂತೆ 219.12 ಕೋಟಿ ರೂ.ಗಳ ಪರಿಹಾರವನ್ನು ರಾಜ್ಯ ಸರ್ಕಾರ ವಿತರಿಸಿದೆ. ಈ ಎರಡು ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಕಂಡು ಬಂದಿಲ್ಲ ಎಂದು ಡಾ.ಪಾಟೀಲರ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ.

### ಬೇಡಿಕೆ ಈಡೇರಿಕೆಗೆ ಅಂಗವಿಕಲರ ಒತ್ತಾಯ

- ಉದಯವಾಹಿನಿ ಕೊಪ್ಪಳ

ಅಂಗವಿಕಲರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟದ (ಕೆ.ಎ.ಆರ್.ಓ) ಜಿಲ್ಲಾ ಘಟಕದ ನೇತೃತ್ವದಲ್ಲಿ ಅಂಗವಿಕಲರು ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

21 ರೀತಿಯ ಅಂಗವಿಕಲರಿಗೆ ಮಾಶಾಸನವನ್ನು ರೂ.5000ಕ್ಕೆ ಏರಿಸಬೇಕು. ರಾಜ್ಯದಾದ್ಯಂತ ಎಲ್ಲರಿಗೂ ಉಚಿತ ಬಸ್‌ಪಾಸ್ ಸೌಲಭ್ಯ ಒದಗಿಸಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಅಂಗವಿಕಲರಿಗೆ ಮೀಸಲಾಗಿರುವ ಶೇ. 5 ಅನುದಾನ ಸಮರ್ಪಕವಾಗಿ ಬಳಕೆ ಮಾಡಬೇಕು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಂಗವಿಕಲರ ಕುಂದುಕೊರತೆ ಸಭೆಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳಬೇಕು ಎಂದು ಹೋರಾಟ ನಿರತರು ಆಗ್ರಹಿಸಿದರು. ಸ್ಥಳೀಯ ಸಂಸ್ಥೆಗಳ ಯೋಜನೆಯಲ್ಲಿ ನಿವೇಶನ ಅಥವಾ ಮನೆಯನ್ನು ಒದಗಿಸಬೇಕು. ಸ್ವಯಂ ಉದ್ಯೋಗ ಮಾಡಲು ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ವಿಕಲಚೇತನರಿಗೆ ಸಾಲ ಸೌಲಭ್ಯ ಹೆಚ್ಚಿನ ಪ್ರಾದ್ಯಾನತೆ ನೀಡಬೇಕು ಎಂದು ಒಕ್ಕೂಟದ ಪದಾಧಿಕಾರಿಗಳು ಒತ್ತಾಯಿಸಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ವೆಂಕಟೇಶ ದೇಶಪಾಂಡೆ ಅವರಿಗೆ ಮನವಿ ಸಲ್ಲಿಸಿದರು.

### ಆರ್ಥಿಕ ಸಾಕ್ಷರತೆಯ ನಡಿಗೆ ಅಭಿವೃದ್ಧಿ ಕಡೆಗೆ

- ಉದಯವಾಹಿನಿ ರಬಕವಿ ಬನಹಟ್ಟಿ

ಇಂದಿನ ದಿನಮಾನಗಳಲ್ಲಿ ಆರ್ಥಿಕ ಸಾಕ್ಷರತೆಯು ನಡೆಯುವು ಅಭಿವೃದ್ಧಿ ಕಡೆಗೆ ಒಂದು ಹೆಜ್ಜೆ ಇಟ್ಟಿದೆ ಸರ್ಕಾರದಿಂದ ಸ್ವಸಹಾಯ ಸಂಘಗಳಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ದೊರೆಯುವುದು ಹಾಗೂ 10 ಲಕ್ಷದವರೆಗೆ ಸಾಲ ಸೌಲಭ್ಯವು ಇರುತ್ತದೆ.

ಯಾವುದೇ ಜಾಮೀನು ಇಲ್ಲದೆ ಸ್ವಸಹಾಯ ಸಂಘಗಳಿಗೆ 18 ರಿಂದ 50 ವರ್ಷದವರೆಗೆ ಪ್ರಧಾನಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಸುರಕ್ಷಿತಾ 18ರಿಂದ 70 ವರ್ಷದವರೆಗೆ ಯೋಜನೆಯನ್ನು ಸಮಗ್ರ ಮಾಹಿತಿ ಪಡೆದುಕೊಂಡು ಇದರ ಲಾಭವನ್ನು ಪಡೆದುಕೊಳ್ಳಿ ಎಂದು ವಿ.ಜಿ ಗುರುವ ಮಾಹಿತಿ ನೀಡಿದರು. ರಬಕವಿ ಬನಹಟ್ಟಿ ತಾಲ್ಲೂಕಿನ ರಬಕವಿಯ ಪಿಕೆಪಿಎಸ್ ಸೊಸೈಟಿಯಲ್ಲಿ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮತ್ತು ಆರ್ಥಿಕ ಸಾಕ್ಷರತಾ ಕ್ರಮ ಅಮೂಲ್ಯ ಜಮಖಂಡಿ ಇವರ ಸಂಯುಕ್ತ ಆಶ್ರಯದಲ್ಲಿ ಆರ್ಥಿಕ ಸಾಕ್ಷರತಾ ನಡಿಗೆ ಅಭಿವೃದ್ಧಿ ಕಡೆಗೆ ಕಾರ್ಯಕ್ರಮ ನಡೆಯಿತು.

### ಬಾದಾಮಿಯಲ್ಲಿ ಚಳಿ: ತತ್ತರಿಸಿದ ಜನ

- ಉದಯವಾಹಿನಿ ಬಾದಾಮಿ

ಮೂರು ದಿನಗಳಿಂದ ಗಡ ಗಡ ನಡಗುವಂತೆ ಮಾಡಿದ ಚಳಿಗೆ ಜನರು ಹೊರಗೆ ಬಾರದಂತಾಗಿದೆ. ರಸ್ತೆಗಳೆಲ್ಲ ಬಿಕೋ ಎನ್ನುತ್ತಿವೆ. ಸೂರ್ಯ ಮುಳುಗಿದ ಕೂಡಲೇ ಸಂಜೆ ಚಳಿಯ ವಾತಾವರಣ ಜೋರಾಗುತ್ತಿದೆ. ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಬೆಳಿಗ್ಗೆ ಅಧಿಕ ಚಳಿಯಿಂದ ಜನರು ಮತ್ತು ಶಾಲೆಗೆ ತೆರಳುವ ಮಕ್ಕಳು ಪರದಾಡಿದರು. ನಸುಕಿನಲ್ಲಿ ಚಹಾ ಕುಡಿಯಲು ಅಂಗಡಿಗೆ ಬರುವ ಜನರು ಕಡಿಮೆಯಾಗಿದ್ದಾರೆ. ಹೊಲಕ್ಕೆ ಹೋಗುವ ರೈತರು ಕಾಣುತ್ತಿಲ್ಲ. ವಾಯು ವಿಹಾರಕ್ಕೆ ಹೋಗುವ ಜನರೂ ವಿರಳವಾಗಿದ್ದಾರೆ. ಚಳಿಗೆ ಹೆದರಿ ಜನರು ಹೊರಗೆ ಬರದಂತಾಗಿದೆ.

ವಾಯು ವಿಹಾರಕ್ಕೆ ಹೋಗುವವರು ತಲೆಗೆ ಉಣ್ಣೆ ಟೊಪ್ಪಿಗೆ, ಸ್ವೆಟರ್, ಕೈಗೆ ಗೌಜ್ ಮತ್ತು ಮೂಗು,ಬಾಯಿಗೆ ಮಾಸ್ಕ್ ಹಾಕಿಕೊಂಡು ಹೋಗುವುದು ಕಂಡು ಬಂದಿತು. ನಸುಕಿನಲ್ಲಿ ಬೆಳಿಗ್ಗೆ 5 ಗಂಟೆಗೆ 12 ರಿಂದ 13 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರುವುದರಿಂದ ಬೆಳಿಗ್ಗೆ 9 ಗಂಟೆಯವರೆಗೂ ಜನರು ಹೊರಗೆ ಬರಲಿಲ್ಲ. ಜ 3 ರಿಂದ ಬನಶಂಕರಿದೇವಿ ಜಾತ್ರೆ ಆರಂಭವಾಗುವುದು. ಇಡೀ ರಾತ್ರಿ ಮೂರು ಪ್ರಯೋಗ ನಾಟಕ ಪ್ರದರ್ಶನ ನಡೆಯುತ್ತವೆ. ಇದೇ ರೀತಿ ಚಳಿ ಬೀಸಿದರೆ ನಾಟಕ ವೀಕ್ಷಣೆಗೆ ಬರುವ ಪ್ರೇಕ್ಷಕರ ಸಂಖ್ಯೆಯೂ ಕಡಿಮೆಯಾಗಬಹುದು ಎಂದು ನಾಟಕ ಕಂಪನಿ ಮಾಲಿಕರಿಗೆ ದುಗುಡ ಉಂಟಾಗಿದೆ.

### ಮಾಲೀಕನ ಮೇಲೆ ಹಲ್ಲೆ ಮಾಡಿ ಕಾಫಿ ಕಳವು: ಪರಿಚಿತರಿಂದಲೇ ಕೃತ್ಯ: ಮನೆಯವರ ಆಕ್ರೋಶ

- ಉದಯವಾಹಿನಿ ಬೇಲೂರು

ತಾಲ್ಲೂಕಿನ ಅರೇಹಳ್ಳಿ ವ್ಯಾಪ್ತಿಯ ಉಲ್ಲಾಸ್ ನಗರದ ಜಗನ್ನಾಥ್ ಶೆಟ್ಟಿ ಎಂಬುವರ ಕಾಫಿ ಕಣದಲ್ಲಿ ಲಕ್ಷಾಂತರ ಮೌಲ್ಯದ ಕಾಫಿಯನ್ನು ಕಳವು ಮಾಡಿದ್ದ 6 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಸ್ಥಳೀಯ ನಿವಾಸಿಗಳಾದ ಸೈಯದ್ ಮುಬಾರಕ್, ಶಹೀಬ್ ಅಹ್ಮದ್, ಅಬ್ದುಲ್ ಅಜೀಜ್, ಸಾಗರ್, ಪ್ರಜ್ವಲ್ ಎಂಬುವವರು ಕಾಫಿ ಬೀಜ ಕಳವು ಮಾಡಿದ್ದು, ಸುನಿಲ್ ಕುಮಾರ್ ಎಂಬಾತ ಕದ್ದ ಕಾಫಿಯನ್ನು ಖರೀದಿ ಮಾಡಿದ ಆರೋಪಿ ಎಂದು ಗುರುತಿಸಲಾಗಿದೆ. ಸ್ಥಳ ಮಹಜರಿಗಾಗಿ ಆರೋಪಿಗಳನ್ನು ಘಟನಾ ಸ್ಥಳಕ್ಕೆ ಕರೆ ತಂದಿದ್ದರು. ತಕ್ಷಣ ಇಬ್ಬರನ್ನು ಗುರುತಿಸಿದ ಜಗನ್ನಾಥ್ ಶೆಟ್ಟಿ ಅವರ ಪತ್ನಿ, ಅಳುತ್ತಾ ಚೀರಾಡುವ ದೃಶ್ಯ ಮನ ಮುಟ್ಟುವಂತಿತ್ತು.

ಆರೋಪಿಗಳಲ್ಲಿ ಇಬ್ಬರು ನಿತ್ಯ ಕಾಣಿಸಿಕೊಳ್ಳುವ ಅದೇ ಬೀದಿಯವರಾಗಿದ್ದರು. ಅವರೊಂದಿಗೆ ಉತ್ತಮ ಬಾಂಧವ್ಯವೂ ಇತ್ತು. ಉಂಡ ಮನೆಗೆ ದ್ರೋಹ ಎಸಗಿದ್ದಾರೆ ಎಂಬ ವೇದನೆ ಹೊರಹಾಕಿದರು. ಕಳೆದ ಭಾನುವಾರ 4-5 ಜನರಿದ್ದ ಗುಂಪು ಕಾಫಿ ದೋಚಿ ಪರಾರಿಯಾಗಿತ್ತು. ಆರೋಪಿಗಳನ್ನು ಬಂಧಿಸುವಂತೆ ಕಾಫಿ ಬೆಳೆಗಾರರ ಸಂಘ ಪೊಲೀಸರಲ್ಲಿ ಮನವಿ ಮಾಡಿತ್ತು. ಇದರ ಬೆನ್ನಲ್ಲೇ ಗುರುವಾರ ಬೆಳಿಗ್ಗೆ 4.30ರ ಸುಮಾರಿಗೆ ಅದೇ ಗುಂಪು ಮತ್ತೆ ಕಾಫಿ ದೋಚಲು ಯತ್ನಿಸಿದ್ದು, ಅಡ್ಡ ಬಂದ ಮಾಲೀಕ ಜಗನ್ನಾಥ್ ಶೆಟ್ಟಿಯವರ ಮೇಲೆ ಬ್ಯಾಟ್ ಹಾಗೂ ಕಬ್ಬಿಣದ ರಾಡ್ ಬಳಸಿ ಹಲ್ಲೆ ನಡೆಸಿತ್ತು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ.

**ವೃಷಭ** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ.

**ಮಿಥುನ** ನೀವು ಬಯಸಿದಂತಿರುವ ಹಾಸ್ಯದಿಂದ ತುಂಬಿದ ಒಂದು ದಿನ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ ಆದರೆ ಇಂದು ನೀವು ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು.

**ಕರ್ಕಾಟಕ** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

**ಸಿಂಹ** ನಿಮ್ಮ ದೀರ್ಘಕಾಲೀನ ಅನಾರೋಗ್ಯದ ಜೊತೆ ಹೋರಾಡುವಾಗ ಆತ್ಮವಿಶ್ವಾಸ ಶೌರ್ಯದ ಮೂಲವೆಂದು ತಿಳಿದಿರಿ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ.

**ಕನ್ಯಾ** ಆರೋಗ್ಯ ಚೆನ್ನಾಗಿರುತ್ತದೆ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ನಿಮ್ಮ ಸ್ನೇಹಿತರು ನಿಮ್ಮ ಉದಾರ ವರ್ತನೆಯ ದುರುಪಯೋಗ ಮಾಡಲು ಬಿಡಬೇಡಿ. ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ.

**ತುಲಾ** ಮಕ್ಕಳು ನಿಮ್ಮ ದಿನವನ್ನು ಕಠಿಣಗೊಳಿಸುತ್ತಾರೆ. ಅವರ ಆಸಕ್ತಿ ಕಾಯ್ದುಕೊಳ್ಳಲು ಪ್ರೀತಿಯ ಅಸ್ತ್ರ ಬಳಸಿ ಮತ್ತು ಯಾವುದೇ ಅನಗತ್ಯ ಒತ್ತಡ ತಪ್ಪಿಸಿ. ಪ್ರೀತಿಯಿಂದ ಪ್ರೀತ ಜನಿಸುತ್ತದೆಂದು ನೆನಪಿಡಿ.

**ವೃಶ್ಚಿಕ** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ಸಹೋದರ-ಸಹೋದರಿಯರ ಸಹಾಯದಿಂದ ಇಂದು ನೀವು ಅರ್ಥಿಕವಾಗಿ ಲಾಭವನ್ನು ಪಡೆಯಬಹುದು.

**ಧನಸ್ಸು** ತಂದೆಯ ಕಠಿಣ ನಡವಳಿಕೆ ನಿಮಗೆ ಸಿಟ್ಟು ಬರಿಸಬಹುದು. ನೀವು ವಿಷಯವನ್ನು ನಿಯಂತ್ರಣದಲ್ಲಿಡಲು ಶಾಂತರಾಗಿರುವ ಅಗತ್ಯವಿದೆ. ನೀವು ಈ ಮೂಲಕ ಲಾಭ ಪಡೆಯುತ್ತೀರಿ.

**ಮಕರ** ನಿಮ್ಮ ಸಂಗಾತಿ ಎಲ್ಲಾ ಜಗಳಗಳನ್ನು ಮರೆತು ನಿಮ್ಮನ್ನು ಪ್ರೀತಿಯಿಂದ ಆಲಂಗಿಸಲು ಬಂದಾಗ, ಜೀವನ ನಿಜವಾಗಿಯೂ ಅದ್ಭುತವಾಗಿರುತ್ತದೆ. ಹೃದಯದ ಮಾತುಗಳು ಬಾಯಿಯಲ್ಲಿ ಬರುವುದು ಸಹ ಅಗತ್ಯ.

**ಕುಂಭ** ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

**ಮೀನ** ನೀವು ಕೆಲವು ಉನ್ನತ ವ್ಯಕ್ತಿಗಳನ್ನು ಭೇಟಿಯಾಗಬಹುದಾದ್ದರಿಂದ ಗಾಬರಿಯಾಗಬೇಡಿ , ವಿಶ್ವಾಸ ಕಳೆದುಕೊಳ್ಳದಿರಿ. ಇದು ವ್ಯಾಪಾರಕ್ಕೆ ಬಂಡವಾಳದಂತೆ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ.

● ರಾಣಿ ಚನ್ನಮ್ಮ ರಸ್ತೆ ಸಾರಿಗೆ ಸಂಸ್ಥೆ ಆಗೋದ್ಯಾವಾಗ?; ಸರ್ಕಾರ ಕಿತ್ತೂರು ಕರ್ನಾಟಕ ಜನರ ಆಗ್ರಹ ಕೇಳಿದಾಗ

# ಕಿತ್ತೂರು ಕರ್ನಾಟಕ ಸಾರಿಗೆ ವ್ಯವಸ್ಥೆಗೆ ರಾಣಿ ಚನ್ನಮ್ಮ ಹೆಸರಿಡಲು ಒತ್ತಾಯ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಳಗಾವಿ

ಕಿತ್ತೂರು ಕರ್ನಾಟಕ ಜನತೆಯ ಆಶಯದಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹೆಸರನ್ನು ಬದಲಿಸಿ, ರಾಣಿ ಚನ್ನಮ್ಮ ರಸ್ತೆ ಸಾರಿಗೆ ಸಂಸ್ಥೆ (ಆರ್‌ಸಿಆರ್‌ಟಿಸಿ) ಎಂದು ಮರು ನಾಮಕರಣಕ್ಕೆ ಸಾರಿಗೆ ನಿಗಮ ಮಂಡಳಿ ಸಲ್ಲಿಸಿದ್ದ ಪ್ರಸ್ತಾವನೆ ಸರ್ಕಾರದ ಮಟ್ಟದಲ್ಲಿ ಬಾಕಿ ಉಳಿದಿದ್ದು, ಈ ಭಾಗದ ಜನರ ಅಸಮಾಧಾನಕ್ಕೆ ಕಾರಣವಾಗಿದೆ.

ಕಿತ್ತೂರು ಕರ್ನಾಟಕ ಭಾಗದಲ್ಲಿ 28 ವರ್ಷಗಳಿಂದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಹೆಸರು ಮನೆ ಮಾತಾಗಿದೆ. ಕಿತ್ತೂರು ಕರ್ನಾಟಕ ಎಂದು ಘೋಷಣೆಯಾದ ಬಳಿಕ, ಕಿತ್ತೂರು ಕರ್ನಾಟಕ ಸಾರಿಗೆ ನಿಗಮ ಎಂದು ಬದಲಿಸುವಂತೆ 2021ರಿಂದ ಈ ಭಾಗದ ಹೋರಾಟಗಾರರು ಪತ್ರ ಬರೆದಿದ್ದರು. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಹೆಸರನ್ನು 2021ರಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಕೆಕೆಆರ್‌ಟಿಸಿ) ಎಂದು ಸರ್ಕಾರ ಬದಲಿಸಿದೆ. ಅದೇ ರೀತಿ ಮುಂಬೈ ಕರ್ನಾಟಕ ಪ್ರದೇಶವನ್ನು ಕಿತ್ತೂರ ಕರ್ನಾಟಕ ಎಂದು ಹೆಸರು ಬದಲಿಸಿ ಅಧಿಸೂಚನೆ ಹೊರಡಿಸಿದೆ. ಆದರೆ, ಸಾರಿಗೆ ಸಂಸ್ಥೆ ಹೆಸರಿನಲ್ಲಿ ಯಾವುದೇ ಬದಲಾವಣೆಗಳಾಗಲಿಲ್ಲ. ಈ ಹಿನ್ನೆಲೆಯಲ್ಲಿ ಬೆಳಗಾವಿ, ಗದಗ, ಹಾವೇರಿ, ಬಾಗಲಕೋಟೆ, ಧಾರವಾಡ ಜಿಲ್ಲೆಗಳ ಕನ್ನಡಪರ ಸಂಘಟನೆಗಳು ಹಾಗೂ ನಾಗರಿಕರಿಂದ ಹೆಸರು ಬದಲಾವಣೆಗೆ ಆಗ್ರಹಿಸಿದ್ದಾರೆ.

**ಉ.ಕ ನಾಯಕರ ಮೌನವೇಕೆ?:**
ಈ ಭಾಗದ ಶಾಸಕ ರಾಜು ಕಾಗೆ ಅವರು ಎನ್‌ಡಬ್ಲ್ಯುಕೆಆರ್‌ಟಿಸಿ ಅಧ್ಯಕ್ಷರಾದ ಮೇಲೆ ಕನ್ನಡಪರ ಹೋರಾಟಗಾರರು ಹೆಚ್ಚಿನ ಒತ್ತಡ ತಂದಿದ್ದರು. ಇದರಿಂದ 2025ರ ಫೆ. 17ರಂದು ನಡೆದ ನಿಗಮದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ರಾಣಿ ಚನ್ನಮ್ಮ ರಸ್ತೆ ಸಾರಿಗೆ ಸಂಸ್ಥೆ ಎಂದು ಮರು ನಾಮಕರಣಕ್ಕೆ ಠರಾವು ಪಾಸ್ ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದಕ್ಕೆ ಸರ್ಕಾರ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಿ, ಅಂತಿಮ ಮುದ್ರೆ ನೀಡಬೇಕು. ಪ್ರಸ್ತಾವನೆ ಸಲ್ಲಿಸಿ ಹಲವು ತಿಂಗಳು ಕಳೆದರೂ ಸರ್ಕಾರ ಒಪ್ಪಿಗೆ ನೀಡಲು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಉತ್ತರ ಕರ್ನಾಟಕ ಪತ್ಯೇಕ ರಾಜ್ಯ, ಅಭಿವೃದ್ಧಿ ಬಗ್ಗೆ ಮಾತನಾಡುವ ಈ ಭಾಗದ ನಾಯಕರು, ಈ ಬಗ್ಗೆ ಮೌನ ವಹಿಸಿದ್ದು ಏಕೆ? ಎಂದು ಜನರು ಪ್ರಶ್ನಿಸಿದ್ದಾರೆ.

ಇದರಿಂದ ಸರ್ಕಾರದ ಮಟ್ಟದಲ್ಲಿ ಚರ್ಚೆ ಮತ್ತು ಅನುದಾನ ಹಂಚಿಕೆ ವೇಳೆ ಗೊಂದಲ ಉಂಟಾಗುವ ಸಾಧ್ಯತೆಗಳಿವೆ. ರಾಣಿ ಚನ್ನಮ್ಮ ಸಾರಿಗೆ ಸಂಸ್ಥೆ (ಆರ್‌ಸಿಆರ್‌ಟಿಸಿ) ಎಂದು ಮಾಡುವುದರಿಂದ ಗೊಂದಲಕ್ಕೆ ಆಸ್ಪದ ಸಿಗುವುದಿಲ್ಲ. ಹಾಗಾಗಿ ಇದನ್ನು ಅಂತಿಮಗೊಳಿಸಿ ಅದನ್ನೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಎನ್‌ಡಬ್ಲ್ಯುಕೆಆರ್‌ಟಿಸಿ ನಿಗಮದ ಹೆಸರು ಬದಲಾಯಿಸಿ ರಾಣಿ ಚನ್ನಮ್ಮ ಸಾರಿಗೆ ಸಂಸ್ಥೆ ಎಂದು ಮರು ನಾಮಕರಣ ಮಾಡುವಂತೆ ನಿಗಮದ ಮಂಡಳಿ ಸಭೆಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪ್ರಸ್ತುತ ಈ ವಿಷಯ ಸರಕಾರದ ಮಟ್ಟದಲ್ಲಿದೆ. ಅಂತಿಮವಾಗಿ ಸಂಪುಟ ಸಭೆಯಲ್ಲಿ ಒಪ್ಪಿಗೆ ದೊರೆಯಬೇಕು ಎಂದು ವಾಕರಸಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ ಹೇಳಿದ್ದಾರೆ.

- ರಾಣಿ ಚನ್ನಪ್ಪ ರಸ್ತೆ ಸಾರಿಗೆ ಸಂಸ್ಥೆ (ಆರ್‌ಸಿಆರ್‌ಟಿಸಿ) ಎಂದು ಹೆಸರಿಡುವಂತೆ ಆಗ್ರಹ.
- ವಾಕರಸಾ ಸಂಸ್ಥೆ ಸಲ್ಲಿಸಿದ ಪ್ರಸ್ತಾವನೆಗೆ ಇದುವರೆಗೂ ಮೌನವಹಿಸಿರುವ ಸರ್ಕಾರ.

**ಆರ್‌ಸಿಆರ್‌ಟಿಸಿ ಏಕೆ?**
ಎನ್‌ಡಬ್ಲ್ಯುಕೆಆರ್‌ಟಿಸಿ ಹೆಸರು ಬದಲಿಸಲು ಮೂರೂ ನಿಗಮಗಳ ಆಡಳಿತ ಮಂಡಳಿ ಸಭೆಯಲ್ಲಿಚರ್ಚೆಗೆ ಬಂದಿದೆ. ರಾಣಿ ಚನ್ನಮ್ಮ ರಸ್ತೆ ಸಾರಿಗೆ ಸಂಸ್ಥೆ, ಕಿತ್ತೂರು ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಿತ್ತೂರು ರಾಣಿ ಚನ್ನಮ್ಮ ರಸ್ತೆ ಸಾರಿಗೆ ಸಂಸ್ಥೆ ಎಂಬ ಹೆಸರುಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಗಿತ್ತು. ಕಿತ್ತೂರು ಕರ್ನಾಟಕ ಮತ್ತು ಕಿತ್ತೂರು ರಾಣಿ ಚನ್ನಮ್ಮ ನಾಮಕರಣ ಮಾಡಿದರೆ ಇಂಗ್ಲಿಷ್‌ನಲ್ಲಿ ಕೆಕೆಆರ್‌ಟಿಸಿ ಎಂದಾಗುತ್ತದೆ. ಈಗಾಗಲೇ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವನ್ನೂ ಶಾರ್ಟ್ ಕಟ್ ಆಗಿ ಕೆಕೆಆರ್‌ಟಿಸಿ ಎನ್ನಲಾಗುತ್ತಿದೆ.


**ಅನುದಾನ ಹಂಚಿಕೆ ವೇಳೆ ಗೊಂದಲ**

**ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ**

**ಮುಖಂಡರ ಆಕ್ರೋಶ**
ವಾಕರಸಾ ಸಂಸ್ಥೆ ಸಲ್ಲಿಸಿದ್ದ ಪ್ರಸ್ತಾವನೆ ಸ್ವೀಕರಿಸಿರುವ ಸರಕಾರವು, ಸಮಗ್ರ ವರದಿ ನೀಡುವಂತೆ ಸಂಸ್ಥೆಗೆ ನಿರ್ದೇಶನ ನೀಡಿತ್ತು. ಅದರಂತೆ ಈ ಭಾಗದ ಸಂಘ-ಸಂಸ್ಥೆಗಳು, ಸಾರ್ವಜನಿಕರ ಬೇಡಿಕೆ, ಅಭಿಪ್ರಾಯ ಒಳಗೊಂಡ ವರದಿ ನೀಡಲಾಗಿದೆ ಎನ್ನುತ್ತಾರೆ ಅಧಿಕಾರಿಗಳು. ಉತ್ತರ ಕರ್ನಾಟಕ ವಿಷಯ ಬಂದಾಗ ರಾಜಕೀಯ ನಾಯಕರು ಮತ್ತು ಅಧಿಕಾರಿಗಳು ವಿಳಂಬ ನೀತಿ ಅನುಸರಿಸುತ್ತಾರೆ. ಪ್ರಸ್ತಾವನೆ ಸಲ್ಲಿಕೆಯಾದ ಬಳಿಕ ಹಲವು ಬಾರಿ ರಾಜ್ಯ ಸಂಪುಟ ಸಭೆ ನಡೆದಿವೆ. ಆದರೂ ಈ ಬಗ್ಗೆ ನಿರ್ಧಾರ ಕೈಗೊಳ್ಳದಿರುವುದು ಎಷ್ಟು ಸರಿ ಎಂದು ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಒಪ್ಪಿಗೆ ನೀಡಲು ನಿರ್ಲಕ್ಷ್ಯ**

## ಆಹಾರ ನಿರೀಕ್ಷಕರ ವಿರುದ್ಧ ದೂರು


ಉದಯವಾಹಿನಿ ಚಿತ್ರ

• ಉದಯವಾಹಿನಿ ಕಲಬುರಗಿ

ಜಿಲ್ಲೆಯ ಜೇವರಗಿ ಮತ್ತು ಯಡ್ರಾಮಿ ತಾಲ್ಲೂಕಿನ ಆಹಾರ ನಿರೀಕ್ಷಕರು ಅಕ್ರಮ ಪಡಿತರ ಸರಬರಾಜು ಮಾಡುವವರಿಗೆ ಸಹಕಾರ ನೀಡುತ್ತಿದ್ದಾರೆ ಎಂದು ವಿವಿಧ ಸಂಘಟನೆಯ ಮುಖಂಡರು ಆಹಾರ, ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕರಿಗೆ ಮನವಿ ಸಲ್ಲಿಸಿದರು. ಅಕ್ರಮ ದಂಧೆಕೋರರ ವಿರುದ್ಧ ದೂರು ನೀಡಿದರೆ ಅವರಿಗೆ ಫೋನ್ ಕರೆ ಮಾಡಿ ದೂರುದಾರರ ಫೋನ್ ನಂಬರ್ ನೀಡಿ ಅವರಿಂದ ಧಮಕಿ ಹಾಕುಸುತ್ತಿದ್ದು ಕೂಡಲೇ ಅವರನ್ನು ಕೆಲಸದಿಂದ ವಜಾ ಮಾಡಿ ಕ್ರಿಮಿನಲ್ ಪ್ರಕರಣ ದಾಖಲು ಮಾಡುವಂತೆ ಮನವಿ ಸಲ್ಲಿಸಲಾಯಿತು. ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎಂ ಎಸ್ ಪಾಟೀಲ ನರಿಬೋಳ ಗ್ರಾಮೀಣ ಅಭಿವೃದ್ಧಿ ಹೋರಾಟ ಸಮಿತಿ ಸಂಸ್ಥಾಪಕ ಅಧ್ಯಕ್ಷ ಶ್ರವಣಕುಮಾರ ಡಿ ನಾಯಕ, ಲಕ್ಷ್ಮಿಕಾಂತ ಸ್ವಾದಿ, ಸಿದ್ದು ಕವಲ್ದಾರ, ಈಶ್ವರ ಹಿಪ್ಪರಗಿ,ನಿಂಗಣ್ಣ ಚಿಗರಹಳ್ಳಿ, ಹಣಮಂತ ಕುಳಗೇರಿ, ರಮೇಶ ಮೇಲಗಿರಿ, ಭೀಮು ಕಿಲೆದಮನಿ, ದೌಲತರಾಯ ನೀರಲಕೋಡ, ಪರಶುರಾಮ ಇದ್ದರು.

## ನ್ಯೂಮೋನಿಯ ತೊಲಗಿಸಿ ಆರೋಗ್ಯವಂತ ಬಾಲ್ಯ ಒದಗಿಸಿ: ಡಾ.ಡಿ.ಎಂ.ಅಭಿನವ


• ಉದಯವಾಹಿನಿ ಚಿತ್ರದುರ್ಗ

ನ್ಯೂಮೋನಿಯಾ ತೊಲಗಿಸಿ ಆರೋಗ್ಯವಂತ ಬಾಲ್ಯ ಒದಗಿಸಿ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಡಿ.ಎಂ ಅಭಿನವ ಹೇಳಿದರು. ನಗರದ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಶ್ವ ನ್ಯೂಮೋನಿಯ ದಿನದ ಭಿತ್ತಿಪತ್ರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ನ್ಯೂಮೋನಿಯಾ ಐದು ವರ್ಷದ ಒಳಗಿನ ಮಕ್ಕಳಲ್ಲಿ ಕಂಡುಬರುವ ಶ್ವಾಸಕೋಶದ ಸೋಂಕು, ವಾಯು ಮಾಲಿನ್ಯ ಮಕ್ಕಳ ಶ್ವಾಸಕೋಶದ ಅನಾರೋಗ್ಯಕ್ಕೆ ಪ್ರಮುಖ ಕಾರಣವಾಗಿದೆ. ಜ್ವರ, ಹಸಿವು ಇಲ್ಲದಿರುವುದು, ಕೆಮ್ಮು ಮತ್ತು ಹಳದಿ ರಕ್ತದ ಕಫ ಇವು ನ್ಯೂಮೊನಿಯಾದ ಲಕ್ಷಣಗಳು. ಸರಿಯಾದ ಸ್ತನ್ಯಪಾನ ನೀಡದಿರುವುದು, ಅಪೌಷ್ಟಿಕತೆ ಕೈತೊಳೆಯುವ ಸೌಲಭ್ಯ ಇಲ್ಲದಿರುವುದು, ಕಡಿಮೆ ಜನನ ತೂಕ ಇವು ನ್ಯೂಮೊನಿಯಾದ ಅಪಾಯಕಾರಿ ಅಂಶಗಳಾಗಿವೆ ಎಂದು ತಿಳಿಸಿದರು. ನ್ಯೂಮೋನಿಯ ತಡೆಯಲು ಮೊದಲ ಆರು ತಿಂಗಳು ಮಗುವಿಗೆ ತಾಯಿಯ ಎದೆಹಾಲನ್ನು ಮಾತ್ರ ನೀಡುವುದು. ಸಾಕಷ್ಟು ಪೌಷ್ಟಿಕಾಂಶವನ್ನು ಮಕ್ಕಳಿಗೆ ಒದಗಿಸುವುದು, ಸರಿಯಾದ ಸಮಯಕ್ಕೆ ಚುಚ್ಚುಮದ್ದು ಹಾಕಿಸುವುದು, ಮನೆಯೊಳಗೆ ಮಾಲಿನ್ಯ ನಿಯಂತ್ರಿಸಿ, ನ್ಯೂಮೋನಿಯಾ ಲಕ್ಷಣಗಳು ಕಂಡು ಬಂದಲ್ಲಿ 24 ಗಂಟೆ ಒಳಗೆ ಆರೋಗ್ಯ ಸೇವೆಗಳ ಪಡೆದಲ್ಲಿ ರೋಗ ಹರಡದಂತೆ ತಡೆಯಬಹುದು ಎಂದರು. ಆರೋಗ್ಯ ಇಲಾಖೆ ನೌಕರರು ಸಾರ್ವಜನಿಕರಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸುವ ಮುಖಾಂತರ ಸಕಾಲಕ್ಕೆ ಉಚಿತವಾದ ಲಸಿಕೆ ನೀಡಿ ಐದು ವರ್ಷದ ಒಳಗಿನ ಮಕ್ಕಳ ಮರಣ ಪ್ರಮಾಣ ತಗ್ಗಿಸಲು ಶ್ರಮವಹಿಸಬೇಕು ಎಂದರು.

ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ ಮಾತನಾಡಿ, ನ್ಯೂಮೋನಿಯಾ ಕುರಿತು ಸಾಮಾಜಿಕ ಜಾಗೃತಿ ಮೂಡಿಸುವ ಕಾರ್ಯಕ್ರಮವು 2019 ರಿಂದ ದೇಶ ವ್ಯಾಪಿಯಾಗಿ ಅನುಷ್ಠಾನಗೊಳ್ಳುತ್ತಿದ್ದು, ನ್ಯೂಮೋನಿಯ ಪೀಡಿತ ಮಕ್ಕಳ ಆರೋಗ್ಯ ಸುಧಾರಿಸಲು ಹಾಗೂ ಮಾಹಿತಿ ಶಿಕ್ಷಣದ ಮೂಲಕ ಐದು ವರ್ಷದೊಳಗಿನ ಮಕ್ಕಳ ಮರಣ ದರ ಕಡಿಮೆ ಮಾಡಲು ಇದು ಪರಿಣಾಮಕಾರಿಯಾದ ಕಾರ್ಯಕ್ರಮವಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮೇಲ್ವಿಚಾರಣಾ ಅಧಿಕಾರಿ ಸುರೇಶ್ ಬಾಬು, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾದ ಆರೋಗ್ಯ ಇಲಾಖೆಯ ಬಾಗೇಶ್ ಉಗ್ರಾಣ, ಆರೋಗ್ಯ ನಿರೀಕ್ಷಣಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿಡಿಪಿಓ ನಿರ್ಮಲ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಂಜುಳಾ ಮತ್ತು ಮೇಲ್ವಿಚಾರಕರು ಹಾಗೂ ಮತ್ತಿತರರು ಹಾಜರಿದ್ದರು.


ಉದಯವಾಹಿನಿ ಚಿತ್ರ

ಕಳೆದ ನವೆಂಬರ್ 12 ರಿಂದ ಮುಂಬರುವ ಫೆಬ್ರವರಿ 28 ರವರೆಗೆ ಆಶಾ ಕಾರ್ಯಕರ್ತೆಯರು ಸೇರಿದಂತೆ ಮುಂಚೂಣಿ ಆರೋಗ್ಯ ಕಾರ್ಯಕರ್ತರು ಐದು ವರ್ಷದ ಒಳಗಿನ ಮಕ್ಕಳ ಮನೆ ಭೇಟಿಗಳನ್ನು ನಡೆಸಿ, ಆರಂಭಿಕ ಹಂತದಲ್ಲಿ ನ್ಯೂಮೋನಿಯ ಪ್ರಕರಣಗಳನ್ನು ಗುರುತಿಸಿ ಸೂಕ್ತ ಚಿಕಿತ್ಸೆ, ನಿರ್ವಹಣೆ, ಹೆಚ್ಚಿನ ಚಿಕಿತ್ಸೆಗೆ ಮೇಲ್ದರ್ಜೆ ಆಸ್ಪತ್ರೆಗೆ ರೆಫರ್ ಮಾಡಿ ಚಿಕಿತ್ಸೆಗೆ ಸಹಕರಿಸಬೇಕು. -ಡಾ.ಬಿ.ವಿ.ಗಿರೀಶ್, ತಾಲ್ಲೂಕ ಆರೋಗ್ಯ ಅಧಿಕಾರಿ

## ಗುರಿ ತಲುಪಲು ಸತತ ಪ್ರಯತ್ನ ಅವಶ್ಯಕ

• ಉದಯವಾಹಿನಿ ಕಲಬುರಗಿ

ವಿದ್ಯಾರ್ಥಿಗಳು ಗುರಿ ತಲುಪಲು ಸತತ ಓದಿನ ಪ್ರಯತ್ನ ಹಾಗೂ ಕಠಿಣ ಪರಿಶ್ರಮ ಅಗತ್ಯವಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಸುಭಾಸ್ ರಾಥೋಡ್ ಹೇಳಿದರು. ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ದಿಶಾ ವಿಜ್ಞಾನ ಪದವಿ ಪೂರ್ವ ಕಾಲೇಜು ಇವುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಕನ್ನಡ ರಸಪ್ರಶ್ನೆ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ಆಲೋಚನೆಗಳು ವ್ಯಕ್ತಿತ್ವ ರೂಪಿಸುತ್ತವೆ ಹೀಗಾಗಿ ಸಕಾರಾತ್ಮಕ ಮತ್ತು ಸಾಧನೆಮುಖಿ ಚಿಂತನೆಗಳನ್ನು ಮೈಗೂಡಿಸುವ ಮೂಲಕ ಸಾಧನೆ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಮಕ್ಕಳಿಗೆ ಮೊದಲು ಮನೆ ನಂತರ ಶಾಲೆ ಶಿಕ್ಷಣವನ್ನು ನೀಡತಕ್ಕಂಥ ಎರಡು ಫ್ಯಾಕ್ಟರಿಗಳು. ಮೊದಲು ತಂದೆ ತಾಯಿಗಳು ಅಕ್ಷರದ ಜ್ಞಾನವನ್ನು ನೀಡಿದರೆ ನಂತರ ಶಿಕ್ಷಕರು ಶಿಕ್ಷಿತರನ್ನಾಗಿ ಮಾಡುತ್ತಾರೆ ಹೀಗಾಗಿ ವಿದ್ಯಾರ್ಥಿಗಳು ಇಲ್ಲಿ ಸಿದ್ಧತೆಯಾಗುತ್ತಾರೆ. ಉತ್ತಮ ಜ್ಞಾನ ಪಡೆಯುವ ಮೂಲಕ ಮಾದರಿಯಾಗಿ ಬೆಳೆಯಬೇಕು ಎಂದು ಸ್ವಾಮಿ ವಿವೇಕಾನಂದರು, ಮಹಾತ್ಮಾ ಗಾಂಧೀಜಿ, ಡಾ. ಬಿ ಆರ್ ಅಂಬೇಡ್ಕರ್ , ಸರ್ ಎಂ ವಿಶ್ವೇಶ್ವರಯ್ಯ ,ಡಾ. ಅಬ್ದುಲ್ ಕಲಾಂ ಅವರು ಜ್ಞಾನದಿಂದಲೇ ನಾಯಕರಾಗಿದ್ದಾರೆ. ಜ್ಞಾನಕ್ಕಿರುವ ಶಕ್ತಿ ಬೇರೆ ಯಾವುದಕ್ಕೂ ಇಲ್ಲ. ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿ ಐಎಎಸ್, ಐಪಿಎಸ್ , ಇಲ್ಲವೇ ವೈದ್ಯರು , ಇಂಜಿನಿಯರ್ ಆಗಬೇಕು ಎಂದರು.


ಉದಯವಾಹಿನಿ ಚಿತ್ರ

## ಡಿ.21ರ ವಿಶ್ವ ಧ್ಯಾನ ದಿನಾಚರಣೆಗೆ ಆಯುಷ್ ಇಲಾಖೆಯ ಸಂಪೂರ್ಣ ಸಹಕಾರ

• ಉದಯವಾಹಿನಿ ಚಿತ್ರದುರ್ಗ

ಡಿಸೆಂಬರ್ 21ರ ಭಾನುವಾರ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶ್ವಧ್ಯಾನ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ ಆದ ಪ್ರಯುಕ್ತ ಚಿತ್ರದುರ್ಗದಲ್ಲಿಯೂ ಸಹ ಐತಿಹಾಸಿಕ ಶ್ರೀಮುರುಘಾ ಮಠದಲ್ಲಿ ಆದಿ ಯೋಗಿ ಧ್ಯಾನಾಮೃತ ಪಿರಮಿಡ್ ಧ್ಯಾನ ಕೇಂದ್ರ, ಚಿತ್ರದುರ್ಗ ಇವರ ವತಿಯಿಂದ ಅಂದು ಬೆಳಿಗ್ಗೆ 9:30ರಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಇದಕ್ಕೆ ನಮ್ಮ ಚಿತ್ರದುರ್ಗ ಜಿಲ್ಲಾ ಆಯುಷ್ ಇಲಾಖೆಯ ಜಿಲ್ಲಾ ಆಯುಷ್ ವೈದ್ಯಾಧಿಕಾರಿ ಡಾ.ಚಂದ್ರಕಾಂತ ನಾಗಸಮುದ್ರ ಸೇರಿದಂತೆ ಇಲಾಖೆಯ ಎಲ್ಲಾ ವೈದ್ಯಾಧಿಕಾರಿಗಳು ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. 2ನೇ ವಿಶ್ವ ಧ್ಯಾನ ದಿನಾಚರಣೆಯ ಪೂರ್ವಭಾವಿಯಾಗಿ ಚಿತ್ರದುರ್ಗದ ಶ್ರೀ ಮುರುಘಾ ಮಠ ಆವರಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ಚಿತ್ರದುರ್ಗದ ಎಲ್ಲಾ ಯೋಗ ಹಾಗೂ ಇತರೆ ಸಂಘಸಂಸ್ಥೆಗಳ ಸಹಕಾರದೊಂದಿಗೆ ಸಾರ್ವಜನಿಕರಿಗೆ ಧ್ಯಾನದ ಮಹತ್ವ ಹಾಗೂ ದೈವತ್ವವನ್ನು ಜಾಗೃತಿ ಮೂಡಿಸುವ ಧ್ಯಾನ ದಿನಾಚರಣೆಯನ್ನು ನಾವೆಲ್ಲರೂ ಸೇರಿ ವಿಜೃಂಭಣೆಯಿಂದ ಆಚರಿಸೋಣ ಎಂದು ತಿಳಿಸಿದರು.

ಶ್ರೀಮಠದ ಆಡಳಿತ ಮಂಡಳಿ ಸದಸ್ಯ ಶ್ರೀ ಬಸವಕುಮಾರಸ್ವಾಮಿ ಮಾತನಾಡಿ ಧ್ಯಾನವು ಮನಸ್ಸಿನ ಒತ್ತಡ ಕಡಿಮೆಯಾಗಿಸಿ, ಏಕಾಗ್ರತೆ ಹೆಚ್ಚಿಸುತ್ತದೆ ಮತ್ತು ಮಾನಸಿಕ ಸ್ಥಿರತೆಯನ್ನು ಒದಗಿಸುತ್ತದೆ. ಇದು ದೈಹಿಕ-ಮಾನಸಿಕ ಆರೋಗ್ಯಕ್ಕೆ ಸಹಾಯ ಮಾಡುತ್ತದೆ ಮತ್ತು ಜಾಗತಿಕ ಸಾಮರಸ್ಯಕ್ಕೆ ಸಹಕಾರಿಯಾಗಲಿದೆ ಇಂತಹ ಕಾರ್ಯಕ್ರಮಗಳಿಗೆ ಶ್ರೀಮುರುಘಾಮಠವು ಸದಾ ಸಂಪೂರ್ಣ ಸಹಕಾರ ನೀಡುತ್ತದೆ ಅಂದಿನ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಶ್ರೀಮಠದ ಆಡಳಿತ ಮಂಡಳಿ ಅಧ್ಯಕ್ಷ ಶಿವಯೋಗಿ ಸಿ.ಕಳಸದ ವಹಿಸಲಿದ್ದು ವಿವಿಧ ಕಡೆಗಳಿಂದ ಆಗಮಿಸುವ ಧ್ಯಾನಾಸಕ್ತರಿಗೆ ಉಚಿತ ಸಾರಿಗೆ ಹಾಗೂ ಪ್ರಸಾದದ ವ್ಯವಸ್ಥೆ ಶ್ರೀಮಠದ ವತಿಯಿಂದ ಮಾಡಲಾಗುವುದು ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಆದಿಯೋಗಿ ಧ್ಯಾನಾಮೃತ ಪಿರಮಿಡ್ ಧ್ಯಾನ ಕೇಂದ್ರದ ಡಾ.ಮಂಜುಳಾ, ರಶ್ಮಿ, ನಾಗರಾಜ್ ಇನ್ನಿತರರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

ವಿಶ್ವ ಧ್ಯಾನ ದಿನಾಚರಣೆಯನ್ನು ಡಿಸೆಂಬರ್ 21ಕ್ಕೆ ಆಚರಿಸಲು ನಿರ್ಧರಿಸಲಾಯಿತು, ಏಕೆಂದರೆ ಈ ದಿನ ಉತ್ತರ ಗೋಳದ ಚಳಿಗಾಲದ ಅಯನಾಂತರ ಸಂಭವಿಸುತ್ತದೆ. ಇದು ವರ್ಷದ ಅತಿ ದೀರ್ಘ ರಾತ್ರಿ ಮತ್ತು ಅಂತರ್ಗತ ಧ್ಯಾನ ಚಿಂತನೆಗೆ ಸೂಕ್ತ ಸಮಯವೆಂದು ಪರಿಗಣಿಸಿ ಡಿಸೆಂಬರ್ 21ರಂದು ವಿಶ್ವ ಧ್ಯಾನ ದಿನಾಚರಣೆ ಆಚರಿಸಲು ನಿರ್ಧರಿಸಲಾಗಿದೆ. -ನವೀನ್ ಕೆ.ಎಸ್, ಎಂಎಲ್‌ಸಿ

## ಪಿಡಿಒ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ

• ಉದಯವಾಹಿನಿ ಹುಮನಾಬಾದ್

ಪಂಚಾಯಿತಿ ಹಣ ದುರ್ಬಳಕೆ ಮಾಡಿಕೊಳ್ಳುತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದೇಶಪಾಂಡೆ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ಭಾರತೀಯ ದಲಿತ ಪ್ಯಾಂಥರ್ ವತಿಯಿಂದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ದೀಪಿಕಾ ನಾಯ್ಕರ್ ಅವರಿಗೆ ಮನವಿಪತ್ರ ಸಲ್ಲಿಸಲಾಯಿತು. ಭಾರತೀಯ ದಲಿತ ಪ್ಯಾಂಥರ ತಾಲ್ಲೂಕು ಅಧ್ಯಕ್ಷ ಗಣಪತಿ ಅಷ್ಟೂರೆ ಮಾತನಾಡಿ, ಸಮಸ್ಯೆ ಕುರಿತು ಕೇಳಲು ಹೋದವರಿಗೆ ಅಗತ್ಯ ಮಾಹಿತಿ ಒದಗಿಸುವುದು ದೂರದ ಮಾತು ಕನಿಷ್ಟ ಸೌಜನ್ಯದಿಂದ ಮಾತೂ ಆಡಿಸುವುದಿಲ್ಲ. ಈ ಅವರು ಈವರೆಗೆ ಡ್ರಾ ಮಾಡಿರುವ ಹಣದ ಬಗ್ಗೆ ಸಮಗ್ರ ತನಿಖೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪಿಡಿಒ ದೇಶಪಾಂಡೆ ಈವರೆಗೆ ಎಲ್ಲೆಲ್ಲಿ ಕೆಲಸ ಮಾಡಿದ್ದಾರೋ ಎಲ್ಲಾ ಕಡೆ ಅವರ ಮೇಲೆ ಹಣ ದುರ್ಬಳಕೆ ಆರೋಪವಿದೆ. ಈಗ ಕೆಲಸ ಮಾಡುತ್ತಿರುವ ಗ್ರಾಮ ಪಂಚಾಯಿತಿಯಲ್ಲೂ ಸಹ ಅವರು ಲಕ್ಷಾಂತರ ರೂಪಾಯಿ ಹಣ ದುರ್ಬಳಕೆ ಮಾಡಿಕೊಂಡಿದ್ದು ಅವರು ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದರು.

## ಬಸ್ ಹತ್ತಲು ನೂಕುನುಗ್ಗಲು, ಪರದಾಟ

• ಉದಯವಾಹಿನಿ ಹಾವೇರಿ

ಇಲ್ಲಿಯ ಕೇಂದ್ರ ಬಸ್ ನಿಲ್ದಾಣದಲ್ಲಿ ಹಾವೇರಿ- ಗದಗ ಮಾರ್ಗದ ಬಸ್ ಹತ್ತಲು ಪ್ರಯಾಣಿಕರು ಪರದಾಡಿದ್ದು, ಬಸ್ ಹತ್ತುವ ಸಂದರ್ಭದಲ್ಲಿ ಉಂಟಾದ ನೂಕುನುಗ್ಗಲಿನ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಶಕ್ತಿ ಯೋಜನೆ ಜಾರಿಯಾದಾಗಿನಿಂದ ಜಿಲ್ಲೆಯಾದ್ಯಂತ ಬಸ್‌ನಲ್ಲಿ ಸಂಚರಿಸುವವರ ಸಂಖ್ಯೆ ಹೆಚ್ಚಾಗಿದೆ. ಹಾವೇರಿ ಕೇಂದ್ರ ಬಸ್ ನಿಲ್ದಾಣದಲ್ಲಂತೂ ನಿತ್ಯವೂ ಜನಜಂಗುಳಿ ಕಂಡುಬರುತ್ತಿದೆ. ಬೆಂಗಳೂರು, ಹುಬ್ಬಳ್ಳಿ, ಗದಗ ಹಾಗೂ ಇತರೆ ಮಾರ್ಗದ ಬಸ್‌ಗಳಲ್ಲಿ ಸಂಪೂರ್ಣ ಭರ್ತಿಯಾಗಿ ಸಂಚರಿಸುತ್ತಿವೆ.

ಹಾವೇರಿಯಿಂದ ಬಂಕಾಪುರ, ಲಕ್ಷ್ಮೇಶ್ವರ ಮಾರ್ಗವಾಗಿ ಗದಗ ನಗರಕ್ಕೆ ಪ್ರಯಾಣಿಸುವವರ ಸಂಖ್ಯೆ ಹೆಚ್ಚಿದೆ. ಈ ಮಾರ್ಗದ ಬಸ್‌ಗಳು ನಿತ್ಯವೂ ಭರ್ತಿಯಾಗುತ್ತಿವೆ. ಇತ್ತೀಚೆಗೆ ಹಾವೇರಿ ನಿಲ್ದಾಣಕ್ಕೆ ಬಂದ ಬಸ್ ಹತ್ತಲು ಪ್ರಯಾಣಿಕರು ಮುಗಿಬಿದ್ದ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಅದೇ ವಿಡಿಯೋವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಲಾಗಿದೆ.

## ಅನಿರ್ದಿಷ್ಟ ಧರಣಿಗೆ ಕಿಮ್ಸ್ ಸಿಬ್ಬಂದಿ ಬೆಂಬಲ

• ಉದಯವಾಹಿನಿ ಕೊಪ್ಪಳ

ನಾವು ಆಸ್ಪತ್ರೆಯಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತೇವೆ. ಹತ್ತು ವರ್ಷಗಳಿಂದ ಇದೇ ಕೆಲಸ ಮಾಡುವ ನಮಗೂ ಉಸಿರಾಟದ ತೊಂದರೆಯಾಗಿದೆ. ವೈದ್ಯರು ಅಲರ್ಜಿ ಎನ್ನುತ್ತಾರೆ, ಕಾರಣ ಕೇಳಿದರೆ ಮಾಲಿನ್ನದ ಕಡೆಗೆ ಬೊಟ್ಟು ಮಾಡುತ್ತಾರೆ' ಎಂದು ಕಿಮ್ಸ್ ಸಿಬ್ಬಂದಿ ನೌಕರರ ಸಂಘದ ಕಾರ್ಯಾಧ್ಯಕ್ಷ ಯಲ್ಲಪ್ಪ ಅಡಿನ ಹೇಳಿದರು. ಜಿಲ್ಲಾ ಬಚಾವೊ ಅಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ಜಂಟಿ ಕ್ರಿಯಾ ವೇದಿಕೆ ನಗರದಲ್ಲಿ ನಡೆಸುತ್ತಿರುವ ಅನಿರ್ದಿಷ್ಟ ಧರಣಿಯ 44ನೇ ದಿನವಾದ ಮಾತನಾಡಿದರು. ಬಲ್ಡೋಟಾ, ಕಿರ್ಲೋಸ್ಕರ್, ಕಲ್ಯಾಣಿ ಸ್ಟೀಲ್, ಮುಕುಂದ ಸುಮಿ, ಎಕ್ಸ್ ಇಂಡಿಯಾ ಸೇರಿದಂತೆ ವಿವಿಧ ಕಾರ್ಖಾನೆಗಳ ವಿಸ್ತರಣೆಗೆ ವಿರೋಧಿಸಿ ಹೋರಾಟ ನಡೆಯುತ್ತಿದೆ. ಕಿಮ್ಸ್ ಸಿಬ್ಬಂದಿ ನೌಕರರ ಸಂಘದ ಸದಸ್ಯರು ಅಶೋಕ ವೃತ್ತದಿಂದ ಕಾರ್ಖಾನೆಗಳ ವಿಸ್ತರಣೆ ನಿಲ್ಲಿಸಬೇಕು ಎಂದು ಘೋಷಣೆಗಳನ್ನು ಕೂಗುತ್ತ ಧರಣಿ ಸ್ಥಳಕ್ಕೆ ಬಂದರು.



ಉದಯವಾಹಿನಿ ಚಿತ್ರ

# ಕಾಳುಮೆಣಸು ದರ ಇಳಿಮುಖ: ದಾಸ್ತಾನಿಟ್ಟ ಸಂಘಕ್ಕೆ ನಷ್ಟದ ಆತಂಕ

● ಅಮದು ಇಳಿಕೆಯಾಗಿದೆ ಎಂದು ಹೇಳುತ್ತಿದ್ದರೂ ದೇಶದೊಳಗೆ ಹೊರ ದೇಶಗಳ ಕಾಳುಮೆಣಸು ಬರುತ್ತಿದೆ

• ಉದಯವಾಹಿನಿ ಶಿರಸಿ

ಮಾರುಕಟ್ಟೆಯಲ್ಲಿ ಕಾಳುಮೆಣಸು ದರ ನಿಧಾನವಾಗಿ ಇಳಿಮುಖವಾಗುತ್ತಿರುವುದು ಬೆಳೆಗಾರರಿಂದ ಕಾಳು ಮೆಣಸು ಖರೀದಿಸಿ ದಾಸ್ತಾನಿಟ್ಟಿರುವ ಸಹಕಾರಸಂಘಗಳ ಅರ್ಥಿಕ ನಷ್ಟಕ್ಕೆ ಕಾರಣವಾಗುತ್ತಿದೆ. ಶ್ರೀಲಂಕಾ, ವಿಯೆಟ್ನಾಂನಂತಹ ದೇಶಗಳಿಂದ ಆಮದಿನ ಮೇಲೆ ನಿಯಂತ್ರಣ ಇಲ್ಲದಿರುವುದು ಕಾಳುಮೆಣಸು ಬೆಳೆಗಾರರ ಜತೆ ಸಹಕಾರ ಸಂಘಗಳಿಗೂ ಮಾರಕವಾಗಿ ಪರಿಣಮಿಸಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹುತೇಕ ಅಡಿಕೆ ಬೆಳೆಗಾರರೇ ಕಾಳುಮೆಣಸು ಬೆಳೆಗಾರರಾಗಿದ್ದಾರೆ. ಹೀಗಾಗಿ ಸಹಕಾರ ಸಂಘಗಳ ಮೂಲಕವೇ ಅವರ ವ್ಯವಹಾರ ನಡೆಯುತ್ತದೆ. ಸಹಕಾರ ಸಂಘಗಳು ಕಾಳುಮೆಣಸು ಖರೀದಿಸಲು ಹಿಂದೇಟು ಹಾಕಿದರೆ ಮತ್ತಷ್ಟು ದರ ಕುಸಿಯುವ ಆತಂಕ ಇರುವ ಕಾರಣ ರೈತರಿಂದ ಖರೀದಿಸಿ ದಾಸ್ತಾನಿಡಲಾಗುತ್ತಿದೆ. ಯಾವುದೇ ಸಂಘ ಸಂಸ್ಥೆಗಳು ಅವುಗಳ ಆರ್ಥಿಕ ಶಕ್ತಿಯ ಆಧಾರದ ಮೇಲೆ ಅವುಗಳನ್ನು ಎಷ್ಟು ತಿಂಗಳು ದಾಸ್ತಾನಿಡಬೇಕು ಎಂಬುದನ್ನು ನಿರ್ಧರಿಸುತ್ತವೆ. ಗರಿಷ್ಠ 5-6 ತಿಂಗಳು ಸಂಗ್ರಹಿಸಿಟ್ಟರೂ ನಂತರ ಅನಿವಾರ್ಯವಾಗಿ ಅವುಗಳನ್ನು ಮಾರಬೇಕು. ಅಂಥ ಸಂದರ್ಭದಲ್ಲಿ ಸಂಘಕ್ಕೆ ಆರ್ಥಿಕ ನಷ್ಟವಾಗುತ್ತದೆ ಎನ್ನುತ್ತಾರೆ ಸಹಕಾರ ಸಂಘಗಳ ಪ್ರಮುಖರು.


ಉದಯವಾಹಿನಿ ಚಿತ್ರ

ಕಾಳುಮೆಣಸು ದಾಸ್ತಾನಿಟ್ಟು ದರ ಏರಿಕೆ ಆಗದಿದ್ದರೆ ಸಹಕಾರ ಸಂಘಗಳಿಗೆ ಆರ್ಥಿಕ ಹೊಡೆತ ಬೀಳುತ್ತದೆ. ಹೀಗಾಗಿ ಆಮದು ಕಾಳುಮೆಣಸಿನ ಮೇಲೆ ನಿರ್ಬಂಧ ಹೇರಿ ದೇಶೀಯ ಉತ್ಪನ್ನಕ್ಕೆ ಪ್ರೋತ್ಸಾಹ ನೀಡಬೇಕಿದೆ. -ವಿನಯ ಹೆಗಡೆ ಮಂಡೆಮನೆ ಟಿಎಂಎಸ್ ಮುಖ್ಯ ಕಾರ್ಯನಿರ್ವಾಹಕ

**ಅಡಿಕೆಯ ನಂತರದ ಸ್ಥಾನ**
ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಖ್ಯವಾಗಿ ಶಿರಸಿ ಯಲ್ಲಾಪುರ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಕಾಳುಮೆಣಸು ಮುಖ್ಯ ಬೆಳೆಯಾಗಿದ್ದು ಅಡಿಕೆಯ ನಂತರ ಎರಡನೇ ಸ್ಥಾನದಲ್ಲಿದೆ. ಈ ಬೆಳೆ ಕೊಳೆ ರೋಗದಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಕ್ಲಸ್ಟರ್ ಅಭಿವೃದ್ಧಿ ಯೋಜನೆಯಂತಹ ಕೇಂದ್ರ, ಸರ್ಕಾರದ ಯೋಜನೆಗಳ ಮೂಲಕ ಬೆಳೆಗಾರರಿಗೆ ಪ್ರೋತ್ಸಾಹ ಸಿಗುತ್ತಿದೆ. ಹಲವು ರೈತರು ವಿವಿಧ ತಳಿಗಳನ್ನು ಬೆಳೆಸುತ್ತಿದ್ದು ಟಿಶೂ ಕಲ್ಚರ್ ಮೂಲಕ ಉತ್ತಮ ಇಳುವರಿ ಪಡೆಯುತ್ತಿದ್ದಾರೆ. ಅಂದಾಜು 10 ಸಾವಿರ ಹೆಕ್ಟೇರ್‌ಗಿಂತಲೂ ಹೆಚ್ಚಿನ ಪ್ರದೇಶದಲ್ಲಿ ಕಾಳುಮೆಣಸು ಬೆಳೆಯಲಾಗುತ್ತಿದ್ದು ವಾರ್ಷಿಕ ಸರಾಸರಿ ಪ್ರತಿ ಹೆ.ಗೆ 8-10 ಕ್ವಿಂಟಲ್ ಇಳುವರಿ ಪಡೆಯಲಾಗುತ್ತದೆ. ಒಂದು ಕ್ವಿಂ. ಕಾಳುಮೆಣಸಿಗೆ ಪ್ರಸ್ತುತ ದರ ರೂ.64 ಸಾವಿರದಿಂದ ರೂ. 66 ಸಾವಿರ ಇದೆ.

ಈಗಾಗಲೇ ಸರ್ಕಾರಗಳು, ಜನಪ್ರತಿನಿಧಿಗಳಿಗೆ ಸಾಕಷ್ಟು ಮನವಿ ನೀಡಲಾಗಿದೆ.

ಬಂದರುಗಳು, ಗಡಿಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ, ಅಮದು ಇಳಿಕೆಯಾಗಿದೆ ಎಂದು ಹೇಳುತ್ತಿದ್ದರೂ ದೇಶದೊಳಗೆ ಹೊರ ದೇಶಗಳ ಕಾಳುಮೆಣಸು ಬರುತ್ತಿದೆ. ಇದರಿಂದಲೇ ದರ ಏರಿಕೆಯೇ ಆಗುತ್ತಿಲ್ಲ. ಶ್ರೀಲಂಕಾ, ವಿಯೆಟ್ನಾಂ ಮತ್ತು ಬ್ರೆಜಿಲ್‌ನಿಂದ ಕಾಳುಮೆಣಸನ್ನು ದೇಶಕ್ಕೆ ಆಮದು ಮಾಡಿಕೊಳ್ಳಲಾಗುತ್ತಿದೆ. ಮುಖ್ಯವಾಗಿ ನವಸೇವಾ, ತೂತ್ತುಕುಡಿ, ಚೆನ್ನೈ, ಮುಂದ್ರಾ, ತುಘಲಕಾಬಾದ್ ಮತ್ತು ಕೊಚ್ಚಿ ಬಂದರುಗಳ ಮೂಲಕ ಕಾಳುಮೆಣಸು ಆಮದು ಮಾಡಿಕೊಳ್ಳಲಾಗುತ್ತಿದೆ. ಅಲ್ಲಿನ ಉತ್ಪನ್ನಕ್ಕೆ ಕಡಿಮೆ ದರವಾದ ಕಾರಣ ಇಲ್ಲಿನ ಉತ್ಪನ್ನಕ್ಕೆ ಬೇಡಿಕೆ ತಗ್ಗಿದೆ. ಕಳೆದ 6 ತಿಂಗಳ ದರಕ್ಕೆ ಹೋಲಿಸಿದರೆ ಕ್ವಿಂಟಲ್ ಒಂದಕ್ಕೆ ರೂ.6 ಸಾವಿರದಿಂದ 18 ಸಾವಿರ ಇಳಿಕೆಯಾಗಿದೆ. ಜತೆ. ಪ್ರಸ್ತುತ ಉತ್ತರ ಕನ್ನಡದ ಕಾಳುಮೆಣಸಿಗೆ ಉತ್ತರ ಭಾರತದ ರಾಜ್ಯಗಳಿಂದ ಶೇ.40ರಷ್ಟು ಬೇಡಿಕೆ ಇಳಿದಿದೆ' ಎನ್ನುತ್ತಾರೆ ಟಿಎಂಎಸ್ ಮುಖ್ಯಕಾರ್ಯನಿರ್ವಾಹಕ ವಿನಯ ಹೆಗಡೆ ಮಂಡೆಮನೆ.

ಬಹುತೇಕ ಸಹಕಾರ ಸಂಘಗಳು ಕಾಳುಮೆಣಸು ಖರೀದಿಸುತ್ತವೆ. 50 ಕ್ವಿಂಟಲ್‌ನಿಂದ 500 ಕ್ವಿಂಟಲ್ ವರೆಗೂ ಈಗಾಗಲೇ ಖರೀದಿಸಿ ದಾಸ್ತಾನಿಡಲಾಗಿದೆ. ಹಲವು ತಿಂಗಳುಗಳಿಂದ ದರ ಏರಿಕೆಯಾಗಿಲ್ಲ. ಪೂರ್ವದ ರಾಜ್ಯಗಳಿಂದ ಬೇಡಿಕೆ ತಗ್ಗಿದೆ. ಸಂಘವು ರೈತರಿಂದ ಖರೀದಿಸಿದ ದರಕ್ಕೇ ಹೊರ ರಾಜ್ಯಗಳ ವರ್ತಕರು ಖರೀದಿ ಪ್ರಸ್ತಾಪ ಇಡುವ ಕಾರಣ ಸಂಘಕ್ಕೆ ನಷ್ಟವಾಗುತ್ತಿದೆ. ಆದಾಗ್ಯೂ ರೈತರ ಹಿತ ಕಾಪಾಡುವ ಉದ್ದೇಶದಿಂದ ಉತ್ಪನ್ನ ಖರೀದಿಸಲಾಗುತ್ತಿದೆ' ಎಂಬುದು ಅವರ ಮಾತು.

ಕಾಳುಮೆಣಸಿಗೆ ಈಗಿರುವ ದರ ರೈತರಿಗೆ ಹೆಚ್ಚಿನ ಲಾಭದಾಯಕವಾಗಿಲ್ಲ. ಕೆಂಪಡಿಕೆಗಿಂತ ಸುಮಾರು ರೂ.15 ಸಾವಿರ ಹೆಚ್ಚಿದೆ. ಹೀಗಾಗಿ ರೈತರು ಕೂಡ ಈ ಬೆಳೆ ಬೆಳೆಯಲು ಉತ್ಸಾಹ ತೋರುತ್ತಿಲ್ಲ. ಜತೆ, ಕಾಳುಮೆಣಸು ಬೆಳೆಯಲು ಕೂಲಿ ಜಾಸ್ತಿ ಬೇಕು. ಸಂಬಳದ ಲೆಕ್ಕದಲ್ಲಿ ತುಂಬ ತುಟ್ಟಿ. ಹಾಗಾಗಿ ಕ್ವಿಂ. ಒಂದಕ್ಕೆ ಕನಿಷ್ಠ ರೂ.75 ಸಾವಿರ ದರವಿದ್ದರೆ ಬೆಳೆಗಾರರಿಗೆ ಅನುಕೂಲ ಆಗುತ್ತದೆ ಎನ್ನುತ್ತಾರೆ ಕಾಳುಮೆಣಸು ಕೃಷಿಕ ಮಧುಸೂದನ ಹೆಗಡೆ.

## ಹುಲಿ ಓಡಾಟ: ಗ್ರಾಮಸ್ಥರಲ್ಲಿ ಭೀತಿ

• ಉದಯವಾಹಿನಿ ಮೂಡಿಗೆರೆ

ಬಿ.ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭಾರತೀಬೈಲ್ ಗ್ರಾಮದ ಬಳಿ ಅರಣ್ಯ ಪ್ರದೇಶದಲ್ಲಿ ಅಳವಡಿಸಿದ್ದ ಕ್ಯಾಮೆರಾದಲ್ಲಿ ಹುಲಿಯ ಚಲನವಲನ ಸೆರೆಯಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಅರಣ್ಯ ಇಲಾಖೆಯ ಮೂಡಿಗೆರೆ ಉಪವಿಭಾಗದ ಮೂಡಿಗೆರೆ ವಲಯದ ಭಾರತೀಬೈಲು ಶಾಖೆ ವ್ಯಾಪ್ತಿಯ ಬಿ. ಹೊಸಹಳ್ಳಿ ಗ್ರಾಮದ ಸರ್ವೆ ನಂ. 212ರಲ್ಲಿ ಕಾಡು ಪ್ರಾಣಿಯ ದಾಳಿಯಿಂದ ಹಸು ಮೃತಪಟ್ಟಿತ್ತು. ಘಟನೆ ನಡೆದ ಹಿನ್ನೆಲೆ ಇಲಾಖೆ ಸ್ಥಳ ಪರಿಶೀಲನೆ ನಡೆಸಿದ್ದು, ಭಾರತೀಬೈಲ್ ಸಮೀಪದ ಅರಣ್ಯ ಪ್ರದೇಶದಲ್ಲಿ ಕ್ಯಾಮೆರಾ ಅಳವಡಿಸಿತ್ತು. ಟ್ರ್ಯಾಪ್ ಕ್ಯಾಮೆರಾದಲ್ಲಿ ಹುಲಿಯ ಚಲನವಲನ ಸೆರೆಯಾಗಿದ್ದು, ಈ ದೃಶ್ಯಗಳು ಬಹಿರಂಗವಾದ ಬಳಿಕ ಗ್ರಾಮಸ್ಥರಲ್ಲಿ ಆತಂಕ ಮತ್ತಷ್ಟು ಹೆಚ್ಚಾಗಿದೆ. ಹಸುಗಳ ಮೇಲೆ ನಿರಂತರ ದಾಳಿ ನಡೆಯುತ್ತಿರುವುದರಿಂದ ಗ್ರಾಮಸ್ಥರು ಭಯದಲ್ಲಿ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಹುಲಿಯ ಜೊತೆಗೆ ಇತರೆ ಕಾಡುಪ್ರಾಣಿಗಳ ಸಂಚಲನ ಕೂಡ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಈ ಹಿನ್ನೆಲೆ ಹುಲಿಯನ್ನು ಕೂಡಲೇ ಸೆರೆ ಹಿಡಿದು ಸುರಕ್ಷಿತ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಬೇಕು ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

# ದಾಳಿಯ ಪ್ರತೀಕಾರವಾಗಿ ಹಮಾಸ್ ಕಮಾಂಡರ್ ಹತ್ಯೆ ಮಾಡಿದ ಇಸ್ರೇಲ್

**ಜೆರುಸಲೇಂ:** ಇಸ್ರೇಲ್ ಹಾಗೂ ಹಮಾಸ್ ನಡುವಿನ ಕದನ ಅಮೆರಿಕಾ ಮಧ್ಯಸ್ಥಿಕೆಯಲ್ಲಿ ನಡೆದ ಶಾಂತಿ ಒಪ್ಪಂದಿಂದ ಕೊನೆಗೊಂಡಿದೆ. ಆದರೆ ಯುದ್ಧದ ಸಮಯದಲ್ಲಿ ಆದ ಗಾಯ ಮಾತ್ರ ಇನ್ನೂ ಆರಿಲ್ಲ.ಯುದ್ಧದ ವೇಳೆ ಅಕ್ಟೋಬರ್‌ನಲ್ಲಿ ಹಮಾಸ್ ನಡೆಸಿದ ದಾಳಿಗೆ ಪ್ರತೀಕಾರವಾಗಿ ದಾಳಿಯ ಪ್ರಮುಖ ರೂವಾರಿಯಾಗಿದ್ದ ಹಮಾಸ್ ಕಮಾಂಡರ್ ಆದ್ ಸಾದ್ ಅವರ ಮೇಲೆ ದಾಳಿ ನಡೆಸಿ ಹತ್ಯೆ ಮಾಡಿದ್ದಾರೆ. ಈತ ರಶೀದ್ ಕರಾವಳಿ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದಾಗ ವಾಹನದ ಮೇಲೆ ಈ ದಾಳಿ ಕಾರ್ಯಾಚರಣೆ ನಡೆಸಿದ್ದು, ವಾಹನವೊಂದು ಸ್ಫೋಟಗೊಂಡು ಸಾವನ್ನಪ್ಪಿದ್ದಾನೆ ಎಂದು ವರದಿಯಾಗಿದೆ.

**ಹಮಾಸ್ ಕಮಾಂಡರ್ ಹತ್ಯೆ ಮಾಡಿದ ಇಸ್ರೇಲ್:** ಇಸ್ರೇಲ್ ರಕ್ಷಣಾ ಪಡೆ, ಇಸ್ರೇಲ್ ಭದ್ರತಾ ಸಂಸ್ಥೆ ಜಂಟಿ ಕಾರ್ಯಾಚರಣೆ ನಡೆಸಿದ್ದು, ದಾಳಿಯ ರೂವಾರಿಯಾಗಿದ್ದ ಆದ್ ಸಾದ್ ಕೊಂದಿದೆ. ಈ ನಂತರ ಜಂಟಿ ಹೇಳಿಕೆ ನೀಡಿದ್ದು, IDF ಮತ್ತು ISA ಹಮಾಸ್‌ನ ಮಿಲಿಟರಿ ವಿಭಾಗದ ಶಸ್ತ್ರಾಸ್ತ್ರ ಉತ್ಪಾದನಾ ವಿಭಾಗದ ಮುಖ್ಯಸ್ಥ ಮತ್ತು ಅಕ್ಟೋಬರ್ 7ರ ಭೀಕರ ಹತ್ಯಾಕಾಂಡದ ರೂವಾರಿಗಳಲ್ಲಿ ಪ್ರಮುಖನಾದ ಹತ್ಯೆಗೈದಿದ್ದು, ಈತ ಪ್ರಸ್ತುತ ಹಮಾಸ್‌ನ ಪ್ರಸ್ತುತ ಮಿಲಿಟರಿ ಮುಖ್ಯಸ್ಥ ಇಝ್ ಅಲ್-ದಿನ್ ಹದ್ದಾದ್ ಅವರ



ಉಪನಾಗಿದ್ದ ಎಂದು ತಿಳಿಸಿದೆ.

**ಹಮಾಸ್ ಸೇನೆ ಮುನ್ನಡೆಸುತ್ತಿದ್ದ ಮುಖ್ಯಸ್ಥ ಗುರಿ:** IDF ಹೇಳಿಕೆ ಪ್ರಕಾರ, ಇತ್ತೀಚಿನ ವಾರಗಳಲ್ಲಿ ಹಮಾಸ್ ಇಸ್ರೇಲ್ ಪಡೆಗಳ ಮೇಲೆ ದಾಳಿ ಮಾಡಲು ಸ್ಫೋಟಕ ಸಾಧನಗಳನ್ನು ಬಳಸುವಂತಹ ಪುನರಾವರ್ತಿತ ಪ್ರಯತ್ನಗಳನ್ನು ಮಾಡಿದೆ. ಈ ಕ್ರಮಗಳು ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸುವ ಮೂಲಕ ಹಮಾಸ್ ತನ್ನ ಕಾರ್ಯಾಚರಣಾ ಸಾಮರ್ಥ್ಯಗಳನ್ನು ಪುನಃ ನಿರ್ಮಿಸಲು ಪ್ರಯತ್ನಿಸುತ್ತಿದೆ. ಹಮಾಸ್‌ನ ಈ ಪ್ರಯತ್ನಗಳನ್ನು ಆದ್‌ಸಾದ್ ನಿರ್ಮಾಣವನ್ನು ಮುನ್ನಡೆಸುತ್ತಿದ್ದನು. ಹಾಗಾಗಿ ಇವನ ಹತ್ಯೆಯಿಂದಾಗಿ ಹಮಾಸ್ ತನ್ನ ಸಾಮರ್ಥ್ಯಗಳನ್ನು ಮರುಸ್ಥಾಪಿಸುವ ಸಾಮರ್ಥ್ಯವನ್ನು ಗಣನೀಯವಾಗಿ ಕುಗ್ಗಿಸುತ್ತದೆ ಎಂದು ತಿಳಿಸಿದೆ. ಇನ್ನು, ಈ ದಾಳಿಯ ಕುರಿತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿ ಹೇಳುವ ಪ್ರಕಾರ, ಗಾಜಾದಲ್ಲಿ ಸುಧಾರಿತ ಸ್ಫೋಟಕ ಸಾಧನ ಸ್ಫೋಟಗೊಂಡು ಇಬ್ಬರು ಇಸ್ರೇಲ್ ಸೈನಿಕರು ಗಾಯಗೊಂಡ ಘಟನೆಯ ನಂತರ ನೆತನ್ಯಾಹು ಮತ್ತು ರಕ್ಷಣಾ ಸಚಿವ ಇಸ್ರೇಲ್ ಕಟ್ಜ್ ಈ ದಾಳಿಗೆ ಅನುಮೋದನೆ ನೀಡಿದ್ದಾರೆ ಎಂದು ದಿ ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ.

ಅಕ್ಟೋಬರ್‌ನಲ್ಲಿ ತಲುಪಿದ ಅಮೆರಿಕಾದ ಮಧ್ಯಸ್ಥಿಕೆಯ ಕದನ ವಿರಾಮ ಒಪ್ಪಂದದ ನಂತರ ನಡೆದಿದೆ. ಕದನ ವಿರಾಮ ಪ್ರಾರಂಭವಾದ ಎರಡು ತಿಂಗಳುಗಳಲ್ಲಿ ಇಸ್ರೇಲ್‌ನ ಮೂವರು ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಇಸ್ರೇಲ್ ಹೇಳುತ್ತದೆ. ಆದರೆ, ಅದೇ ಅವಧಿಯಲ್ಲಿ ಸುಮಾರು 400 ಪ್ಯಾಲೆಸ್ತೀನಿಯನ್ನರು ಸಾವನ್ನಪ್ಪಿದ್ದಾರೆ ಎಂದು ಪ್ಯಾಲೆಸ್ತೀನ್ ಆರೋಗ್ಯ ಸಚಿವಾಲಯ ವರದಿ ಮಾಡಿದೆ. ಇನ್ನು, ಟ್ರಂಪ್ ಮಾತಿಗೆ ಕಿಮ್ಮತ್ತಿಲ್ಲ ಎಂಬಂತೆ ಎರಡು ಕಡೆಯವರು ಸಹ ತಮ್ಮ ಕಾರ್ಯಾಚರಣೆ ನಡೆಸುತ್ತಿರುವುದು ಪರಿಸ್ಥಿತಿ ಇನ್ನಷ್ಟು ಹದಗೆಡಿಸುವ ಸಾಧ್ಯತೆ ಇದೆ.

### ಹಮಾಸ್ ಪ್ರತಿಕಿಯೆ

**ಈ ದಾಳಿಯ ಬಗ್ಗೆ ಹಮಾಸ್ ಸಹ ಪ್ರತಿಕ್ರಿಯೆ ನೀಡಿದ್ದು, ಇಸ್ರೇಲ್ ನಡೆಸಿದ ದಾಳಿಯಲ್ಲಿ ಹಮಾಸ್ ಕಮಾಂಡರ್ ಆದ್ ಸಾದ್ ಸಾವನ್ನಪ್ಪಿದ್ದಾರೆ ಎಂದು ಖಲೀಲ್ ಅಲ್-ಹಯಾ ಧೃಡಪಡಿಸಿದ್ದಾರೆ. ಅಲ್-ಅಕ್ಸಾ ಟಿವಿಯಲ್ಲಿ ದೂರದರ್ಶನದ ಭಾಷಣದಲ್ಲಿ ಮಾತನಾಡಿದ ಹಯ್ಯಾ ಪ್ಯಾಲೆಸ್ಟೀನಿಯನ್ ಜನರು ಪ್ರಸ್ತುತ ಕಷ್ಟದ ಸಮಯವನ್ನು ಎದುರಿಸುತ್ತಿದ್ದಾರೆ ಮತ್ತು ಬಹಳವಾಗಿ ಬಳಲುತ್ತಿದ್ದಾರೆ. 70,000 ಕ್ಕೂ ಹೆಚ್ಚು ಜನರು ಹುತಾತ್ಮರಾಗಿದ್ದಾರೆ, ಅವರಲ್ಲಿ ಇತ್ತೀಚಿಗೆ ಮುಜಾಹಿದ್ ಕಮಾಂಡರ್ ಆದ್ ಸಾದ್ ಮತ್ತು ಅವರ ಸಹಚರರನ್ನು ಸೇರಿದ್ದಾರೆ ಎಂದು ತಿಳಿಸಿದ್ದಾರೆ ಎಂದು AFP ವರದಿ ಮಾಡಿದೆ.**

## ದಕ್ಷಿಣ ಆಫ್ರಿಕಾದಿಂದ 16 ಅಕ್ರಮ ಬಾಂಗ್ಲಾದೇಶಿ ಪ್ರಜೆಗಳ ಗಡೀಪಾರು

**ಜೋಹಾನ್ಸ್ ಬರ್ಗ್:** ನಕಲಿ ವೀಸಾಗಳೊಂದಿಗೆ ದೇಶಕ್ಕೆ ಆಗಮಿಸಿದ 16 ಬಾಂಗ್ಲಾದೇಶಿ ಪ್ರಜೆಗಳನ್ನು ದಕ್ಷಿಣ ಆಫ್ರಿಕಾ ಅಧಿಕಾರಿಗಳು ಶುಕ್ರವಾರ ಗಡೀಪಾರು ಮಾಡಿದ್ದಾರೆ. ಬಾಂಗ್ಲಾದೇಶಿಯರು ಇಥಿಯೋಪಿಯನ್ ಏರ್ ಲೈನ್ಸ್ ವಿಮಾನದಲ್ಲಿ ಒಆರ್ ಟ್ಯಾಂಬೊ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಶೇಷವಾಗಿ ಹಬ್ಬದ ಋತುವಿನಲ್ಲಿ ಮಾನವ ಕಳ್ಳಸಾಗಣೆ, ಅನಿಯಮಿತ ವಲಸೆ ಮತ್ತು ಅಂತರರಾಷ್ಟ್ರೀಯ ಸಂಘಟಿತ ಅಪರಾಧಗಳನ್ನು ಎದುರಿಸಲು ಪ್ರಾಧಿಕಾರವು ತೀವ್ರ ಪ್ರಯತ್ನಗಳನ್ನು ನಡೆಸುತ್ತಿದೆ ಎಂದು ಬಿಎಂಎಯ ಹಂಗಾಮಿ ಆಯುಕ್ತ ಜೇನ್ ತುಪಾನ ದೃಢಪಡಿಸಿದರು. ಪ್ರಾಥಮಿಕ ತನಿಖೆಗಳು ಮಾನವ ಕಳ್ಳಸಾಗಣೆ ಸಿಂಡಿಕೇಟ್‌ಗಳಲ್ಲಿ ಸಾಮಾನ್ಯವಾಗಿ ಬಳಸುವ ಒಂದು ವಿಧಾನವನ್ನು ಬಹಿರಂಗಪಡಿಸಿದವು, ಅಲ್ಲಿ ವ್ಯಕ್ತಿಗಳು ನೆರೆಯ ದೇಶಗಳಿಗೆ ಹೋಗುವ ಮಾರ್ಗದಲ್ಲಿ ದಕ್ಷಿಣ ಆಫ್ರಿಕಾದ ಮೂಲಕ ಸಾಗಿಸಲು ಮತ್ತು ನಂತರ ದಕ್ಷಿಣ ಆಫ್ರಿಕಾಕ್ಕೆ ಮತ್ತೆ ಪ್ರವೇಶಿಸಲು ಪ್ರಯತ್ನಿಸುತ್ತಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.



ಪುರುಷರು ಬಾಂಗ್ಲಾದೇಶಿಗಳು ಮೋಸದ ವೀಸಾಗಳನ್ನು ಹೊಂದಿದ್ದಾರೆಂದು ಕಂಡುಹಿಡಿದ ನಂತರ ಅವರನ್ನು ತಡೆಹಿಡಿಯಲಾಯಿತು.ಇದು ಸಂಭವನೀಯ ಮಾನವ ಕಳ್ಳಸಾಗಣೆ ಚಟುವಟಿಕೆಯ ಬಗ್ಗೆ ಕಳವಳವನ್ನು ಹುಟ್ಟುಹಾಕಿತು. ಅವರ ಜಾಗರೂಕತೆ, ತಾಂತ್ರಿಕ ಸಾಮರ್ಥ್ಯ, ತ್ವರಿತ ಕ್ರಮಕ್ಕಾಗಿ ಭಾಗಿಯಾಗಿರುವ ಅಧಿಕಾರಿಗಳನ್ನು ಶ್ಲಾಘಿಸಿದ ಥುಪಾನ, ಈ ಪ್ರತಿಬಂಧಗಳು ಗಡಿ ನಿರ್ವಹಣೆಗೆ ಗುಪ್ತಚರ ನೇತೃತ್ವದ ವಿಧಾನದ ಪರಿಣಾಮಕಾರಿತ್ವವನ್ನು ಪ್ರದರ್ಶಿಸುತ್ತವೆ ಎಂದು ಒತ್ತಿ ಹೇಳಿದರು. ದಕ್ಷಿಣ ಆಫ್ರಿಕಾವನ್ನು ಅಪರಾಧ ಜಾಲಗಳಿಗೆ ಕಾರಿಡಾರ್‌ನಂತೆ ಬಳಸಿಕೊಳ್ಳುವುದನ್ನು ತಡೆಯಲು ಸುಧಾರಿತ ಪ್ರಯಾಣಿಕರ ಡೇಟಾ ಸೇರಿ ಹಲವು ಕ್ರಮ ಕೈಗೊಳ್ಳಲಾಗಿದೆ. ದಕ್ಷಿಣ ಆಫ್ರಿಕಾದ ಪ್ರವೇಶ ಬಂದರುಗಳು ಸುರಕ್ಷಿತವಾಗಿವೆಯೆ ಎಂದು ಖಚಿತಪಡಿಸಿಕೊಳ್ಳಲು ಪ್ರಾಧಿಕಾರವು ರಾಷ್ಟ್ರೀಯ, ಅಂತರರಾಷ್ಟ್ರೀಯ ಪಾಲುದಾರರೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ, ರಾಷ್ಟ್ರೀಯ ಭದ್ರತೆಯನ್ನು ದುರ್ಬಲಗೊಳಿಸುವ ಎಲ್ಲಾ ಪ್ರಯತ್ನಗಳನ್ನು ನಿರ್ಣಾಯಕವಾಗಿ ಎದುರಿಸಲಾಗುತ್ತದೆ ಎಂದು ಅವರು ಹೇಳಿದರು. ಅಕ್ರಮ ವಲಸಿಗರನ್ನು ಕರೆತಂದ ವಿಮಾನಯಾನ ಸಂಸ್ಥೆಗೆ ಪ್ರತಿಯೊಬ್ಬರಿಗೂ 15,000 ದಂಡ ವಿಧಿಸಲಾಗುವುದು ಎಂದು ತುಪಾನ ಹೇಳಿದರು.

## ಸಿಡ್ನಿಯ ಬಾಂಡಿ ಬೀಚ್‌ನಲ್ಲಿ ಗುಂಡಿನ ದಾಳಿ

### ಬಂದೂಕುಧಾರಿಯನ್ನು ಬರಿಗೈಯಲ್ಲಿ ಮಣಿಸಿದ ಸಾರ್ವಜನಿಕ ವ್ಯಕ್ತಿ; ಭಾರೀ ಮೆಚ್ಚುಗೆ

**ಸಿಡ್ನಿ:** ಇಲ್ಲಿನ ಪ್ರಸಿದ್ಧ ಬಾಂಡಿ ಬೀಚ್‌ನಲ್ಲಿ ಭಾನುವಾರ ಇಬ್ಬರು ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ ಪರಿಣಾಮವಾಗಿ ಒಟ್ಟು ಹನ್ನೆರಡು ಜನರು ಸಾವನ್ನಪ್ಪಿದ್ದಾರೆ. ಮತ್ತೊಬ್ಬ ಶಂಕಿತ ಶೂಟರ್ ಗಂಭೀರ ಸ್ಥಿತಿಯಲ್ಲಿದ್ದಾನೆ ಎಂದು ನ್ಯೂ ಸೌತ್ ವೇಲ್ಸ್ ಪೊಲೀಸರು ಮಾಹಿತಿ ನೀಡಿದ್ದಾರೆ. ಘಟನೆಯಲ್ಲಿ ಹನ್ನೊಂದು ಜನರು ಗಾಯಗೊಂಡಿದ್ದು, ಅವರಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳಿದ್ದಾರೆ. ಅಚ್ಚರಿಯ ಸಂಗತಿಯೆಂದರೆ ಯಾವುದೇ ಶಸ್ತ್ರಾಸ್ತ್ರ ಇಲ್ಲದ ವ್ಯಕ್ತಿಯೊಬ್ಬ ಸಿನಿಮೀಯ ರೀತಿಯಲ್ಲಿ ಬಂದೂಕುಧಾರಿಯನ್ನು ಹಿಡಿದು, ಬಂದೂಕು ಕಸಿದುಕೊಂಡಿದ್ದು, ಹಲವರು ಜನರ ಜೀವ ಉಳಿಸುವಲ್ಲಿ ಯಶಸ್ವಿಯಾಗಿದ್ದಾನೆ. ಈ ಘಟನೆಯ ವಿಡಿಯೋ ಈಗ ಎಲ್ಲೆಡೆ ವೈರಲ್ ಆಗಿದೆ.

**ಬಂದೂಕುಧಾರಿಯನ್ನು ಮಣಿಸಿದ ಧೀರ ಸಾರ್ವಜನಿಕ** ಗುಂಡಿನ ದಾಳಿಯ ಸಂದರ್ಭದಲ್ಲಿ, ಒಬ್ಬ ಸಾಮಾನ್ಯ ನಾಗರಿಕ ಪ್ರಾಣಾಪಾಯವನ್ನು ಲೆಕ್ಕಿಸದೆ ಬಂದೂಕುಧಾರಿಯೊಬ್ಬನನ್ನು ಎದುರಿಸಿದ ದೃಶ್ಯಾವಳಿ ವೈರಲ್ ಆಗಿದೆ. ಕೇವಲ 15 ಸೆಕೆಂಡುಗಳ ಆ ವಿಡಿಯೋದಲ್ಲಿ, ಶಸ್ತ್ರಾಸ್ತ್ರರಹಿತ ವ್ಯಕ್ತಿಯೊಬ್ಬ ಪಾರ್ಕ್ ಮಾಡಿದ್ದ ಕಾರುಗಳ ಹಿಂದೆ ಅಡಗಿರುತ್ತಾನೆ. ನಂತರ ಓಡಿಹೋಗಿ ಮರದ ಹಿಂದೆ ಅಡಗಿದ್ದ ಬಂದೂಕುಧಾರಿಯನ್ನು ಹಿಂದಿನಿಂದ ಕುತ್ತಿಗೆಗೆ ಹಿಡಿದು ಅವನ ಬಳಿಯಿದ್ದ ರೈಫಲ್ ಅನ್ನು ಕಿತ್ತುಕೊಳ್ಳುತ್ತಾನೆ. ಈ ವೇಳೆ ಬಂದೂಕುಧಾರಿ ನೆಲಕ್ಕೆ ಬೀಳುತ್ತಾನೆ. ಆ ಧೀರ ವ್ಯಕ್ತಿ ಆ ರೈಫಲ್ ಅನ್ನು ಮತ್ತೆ ಆತನ ಕಡೆಗೆ ತೋರಿಸಿ ಆತನನ್ನು ಮಣಿಸುತ್ತಾನೆ. ಆತನ ಈ ಸಾಹಸವನ್ನು ಜನರು ಒಳ್ಳೆಯ ಸಮರಿಟನ್ ಎಂದು ಕೊಂಡಾಡುತ್ತಿದ್ದಾರೆ.

**ಹನುಕ್ಕಾ ಕಾರ್ಯಕ್ರಮವೇ ಗುರಿ?:** ಈ ಭೀಕರ ದಾಳಿಯು ಯಹೂದಿ ಹಬ್ಬವಾದ ಹನುಕ್ಕಾ ಆರಂಭವನ್ನು ಗುರುತಿಸಲು ಕಡಲತೀರದಲ್ಲಿ ನಡೆದಿದ್ದ ಸಮುದ್ರತೀರದ ಕಾರ್ಯಕ್ರಮದ ಸಮಯದಲ್ಲಿ ನಡೆದಿದೆ. ಈ ಕಾರ್ಯಕ್ರಮಕ್ಕಾಗಿ ನೂರಾರು ಜನರು ಬೀಚ್‌ನಲ್ಲಿ ಜಮಾಯಿಸಿದ್ದರು. ಆಸ್ಟ್ರೇಲಿಯನ್ ಜ್ಯೂಯಿಷ್ ಅಸೋಸಿಯೇಷನ್‌ನ ಸಿಇಒ ರಾಬರ್ಟ್ ಗ್ರೆಗರಿ ಅವರು ಈ ಮುನ್ಸೂಚನೆ ನೀಡಬಹುದಾದ ಘಟನೆಯನ್ನು ಖಂಡಿಸಿದ್ದು, ಯಹೂದಿ ಸಮುದಾಯವನ್ನು ರಕ್ಷಿಸಲು ವಿಫಲವಾದ ಪ್ರಧಾನ ಮಂತ್ರಿ ಆಂಥೋನಿ ಅಲ್ಬನೀಸ್ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಮುಂದುವರಿದ ಕಾರ್ಯಾಚರಣೆ:** ನ್ಯೂ ಸೌತ್ ವೇಲ್ಸ್ ಪೊಲೀಸರು ಈ ಘಟನೆಗೆ ತಕ್ಷಣವೇ ಪ್ರತಿಕ್ರಿಯಿಸಿದರು. ಸಾಮಾಜಿಕ ಮಾಧ್ಯಮದ ಮೂಲಕ ಮಾಹಿತಿ ನೀಡಿ, ವಿಕಸಿಸುತ್ತಿರುವ ಘಟನೆಗೆ ಪ್ರತಿಕ್ರಿಯಿಸುತ್ತಿದ್ದೇವೆ ಎಂದು ಹೇಳಿ, ಜನರು ಆ ಪ್ರದೇಶವನ್ನು ತಪ್ಪಿಸಲು ಮತ್ತು ಸುರಕ್ಷಿತ ಆಶ್ರಯ ಪಡೆಯಲು ಒತ್ತಾಯಿಸಿದರು.

ಪೊಲೀಸರು ಸ್ಥಳದಲ್ಲಿದ್ದಾರೆ ಮತ್ತು ಹೆಚ್ಚಿನ ಮಾಹಿತಿ ಲಭ್ಯವಾದಾಗ ಒದಗಿಸಲಾಗುತ್ತದೆ, ಎಂದು ಹೇಳಿದ್ದಾರೆ. ಕಾರ್ಯಾಚರಣೆಯು ಮುಂದುವರಿದಿದ್ದು, ಜನರು ಆ ಪ್ರದೇಶವನ್ನು ತಪ್ಪಿಸುವಂತೆ ನಾವು ವಿನಂತಿಸುತ್ತೇವೆ. ದಯವಿಟ್ಟು ಎಲ್ಲಾ ಪೊಲೀಸ್ ನಿರ್ದೇಶನಗಳನ್ನು ಪಾಲಿಸಿ. ಪೊಲೀಸ್ ಗಡಿಗಳನ್ನು ದಾಟಬೇಡಿ, ಎಂದು ಅವರು ಪುನರುಚ್ಚರಿಸಿದರು. ಈ ನಡುವೆ, ಬಾಂಡಿ ಬೀಚ್‌ನಲ್ಲಿ ಇಬ್ಬರು ವ್ಯಕ್ತಿಗಳನ್ನು ಪೊಲೀಸ್ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸರು ದೃಢಪಡಿಸಿದ್ದಾರೆ.



- **ಸಿಡ್ನಿಯ ಬಾಂಡಿ ಬೀಚ್‌ನಲ್ಲಿ ನಡೆದ ಭೀಕರ ಗುಂಡಿನ ದಾಳಿಯಲ್ಲಿ ಒಟ್ಟು ಹನ್ನೆರಡು ಜನರ ಸಾವು ಮತ್ತು ಹನ್ನೊಂದು ಜನರಿಗೆ ಗಾಯ**
- **ಸಿನಿಮೀಯ ಶೈಲಿಯಲ್ಲಿ ಬಂದೂಕುಧಾರಿಯೊಬ್ಬನನ್ನು ಮಣಿಸಿ, ಆತನ ರೈಫಲ್ ಕಸಿದು ಹಲವು ಜೀವಗಳನ್ನು ಉಳಿಸಿ ಸ್ತ್ರಾಸ್ತ್ರವಿಲ್ಲದ ಸಾರ್ವಜನಿಕ**
- **ನ್ಯೂ ಸೌತ್ ವೇಲ್ಸ್ ಪೊಲೀಸರು ತಕ್ಷಣವೇ ಕಾರ್ಯಾಚರಣೆ ಆರಂಭಿಸಿದ್ದು, ಇಬ್ಬರು ಶಂಕಿತರನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿ**

### ಆಸ್ಟ್ರೇಲಿಯಾ ಪ್ರಧಾನಿ ಸಂತಾಪ


**ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ, ಆಂಥೋನಿ ಅಲ್ಬನೀಸ್ ಅವರು ಈ ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಬಾಂಡಿಯಲ್ಲಿನ ದೃಶ್ಯಗಳು ಆಘಾತಕಾರಿ ಮತ್ತು ತೀವ್ರ ದುಃಖಕರ ಎಂದು ಬಣ್ಣಿಸಿದ ಅವರು, ಪೊಲೀಸರು ಮತ್ತು ತುರ್ತು ಪ್ರತಿಕ್ರಿಯೆ ನೀಡುವವರು ಜೀವಗಳನ್ನು ಉಳಿಸಲು ನೆಲದಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನ ಆಲೋಚನೆಗಳು ಪ್ರಭಾವಿತರಾದ ಪ್ರತಿಯೊಬ್ಬರೊಂದಿಗೂ ಇವೆ, ಎಂದು ಹೇಳಿಕೆ ನೀಡಿದ್ದಾರೆ. ಈ ಭೀಕರ ದಾಳಿಯು ದೇಶದಾದ್ಯಂತ ತೀವ್ರ ಆತಂಕವನ್ನು ಸೃಷ್ಟಿಸಿದೆ.**



## ಹೊಸ ವರ್ಷಾಚರಣೆಗೂ ಮುನ್ನ ಅನಧಿಕೃತ ನೈಟ್‌ಕ್ಲಬ್‌ಗಳಿಗೆ ಬೀಗ

**ಪಣಜಿ:** ಕ್ರಿಸ್‌ಮಸ್, ಹೊಸ ವರ್ಷದ ಋತುವಿಗೆ ಮುಂಚಿತವಾಗಿ ಗೋವಾದ ರಾತ್ರಿಜೀವನದ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ, ನೈಟ್‌ಕ್ಲಬ್‌ನಲ್ಲಿ ಸಂಭವಿಸಿದ ಭೀಕರ ಬೆಂಕಿಯಲ್ಲಿ 25 ಜನರು ಸಾವನ್ನಪ್ಪಿದ ನಂತರ ರಾಜ್ಯ ಸರ್ಕಾರವು ನಿಯಮಗಳನ್ನು ಉಲ್ಲಂಘಿಸಿದ ಸಂಸ್ಥೆಗಳನ್ನು ಪರಿಶೀಲಿಸಲು, ಸೀಲ್ ಮಾಡಲು ತೀವ್ರ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ.

ರಮಣೀಯ ಕಡಲತೀರಗಳಿಗೆ ಹೆಸರುವಾಸಿಯಾದ ರಾಜ್ಯವು ಕ್ರಿಸ್‌ಮಸ್, ಹೊಸ ವರ್ಷದ ಅವಧಿಯಲ್ಲಿ ಅತ್ಯಂತ ಜನನಿಬಿಡ ಹದಿನೈದು ದಿನಗಳವರೆಗೆ ಸಜ್ಜಾಗುತ್ತಿರುವಾಗ, ಈ ಕ್ರಮವು ಈಗಾಗಲೇ ಕೆಲವು ನೈಟ್‌ಕ್ಲಬ್‌ಗಳನ್ನು ಮುಚ್ಚುವಂತೆ ಮಾಡಿದೆ, ಆದರೆ ಇತರರ ಭವಿಷ್ಯವು ಸಮತೋಲನದಲ್ಲಿದೆ. ಜಿಲ್ಲಾಡಳಿತ, ಅಗ್ನಿಶಾಮಕ, ತುರ್ತು ಸೇವೆಗಳು, ಪೊಲೀಸರ ಸಿಬ್ಬಂದಿ ತಂಡವು ಉತ್ತರ ಗೋವಾ



ಪ್ರವಾಸೋದ್ಯಮ ವಲಯದಲ್ಲಿರುವ ಎಲ್ಲಾ ನೈಟ್‌ಕ್ಲಬ್‌ಗಳನ್ನು ಪರಿಶೀಲಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉತ್ತರ ಗೋವಾದ ಅರ್ಪೋರಾದ ಬಿರ್ಚ್ ಬೈ ರೋಮಿಯೋ ಲೇನ್ ನೈಟ್‌ಕ್ಲಬ್‌ನಲ್ಲಿ ಸಂಭವಿಸಿದ ಬೆಂಕಿಯ ಘಟನೆಯಲ್ಲಿ 25 ಜನರು ಸಾವನ್ನಪ್ಪಿದ ನಂತರ ಕಾರ್ಯಾಚರಣೆ ಪ್ರಾರಂಭವಾಯಿತು. ನಾವು ಎಲ್ಲಾ ನೈಟ್‌ಕ್ಲಬ್‌ಗಳನ್ನು ಪರಿಶೀಲಿಸುತ್ತಿದ್ದೇವೆ, ಅವುಗಳ ಪರವಾನಗಿಗಳು, ಅನುಮತಿಗಳನ್ನು ಪರಿಶೀಲಿಸುತ್ತಿದ್ದೇವೆ. ಮಾನದಂಡಗಳನ್ನು ಉಲ್ಲಂಘಿಸುತ್ತಿರುವುದು ಕಂಡುಬಂದ ಯಾವುದೇ ಕ್ಲಬ್ ಅನ್ನು ಸೀಲ್ ಮಾಡಲಾಗುತ್ತದೆ ಎಂದು ತಪಾಸಣಾ ತಂಡದ ಮುಖ್ಯಸ್ಥರಾಗಿರುವ ಸರ್ಕಾರಿ ಅಧಿಕಾರಿ ಕಬೀರ್ ಶಿರ್ಗಾಂವ್ಕರ್ ಪಿಟಿಐಗೆ ತಿಳಿಸಿದ್ದಾರೆ.

ನಿಯಮ ಉಲ್ಲಂಘಿಸುವ ಕ್ಲಬ್ ಅನ್ನು ತಕ್ಷಣವೇ ಮುಚ್ಚುವ ಅಧಿಕಾರವನ್ನು ತಂಡ ಹೊಂದಿದೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ. ಇಲ್ಲಿಯವರೆಗೆ, ತಂಡವು ವಾಗೇಟರ್‌ನಲ್ಲಿರುವ ಎರಡು ಪ್ರಮುಖ ನೈಟ್‌ಕ್ಲಬ್‌ಗಳಾದ ಗೋಯಾ ಕ್ಲಬ್ ಮತ್ತು ಕೆಫೆ 2 ಗೋವಾವನ್ನು ಮುಚ್ಚಿದೆ. ಕೆಫೆ 2 ಗೋವಾ ಉತ್ತರ ಗೋವಾದ ಅರೇಬಿಯನ್ ಸಮುದ್ರವನ್ನು ನೋಡುತ್ತಿರುವ ಬಂಡೆಯ ಮೇಲೆ ನೆಲೆಗೊಂಡಿತ್ತು. ಶಿರ್ಗಾಂವ್ಕರ್ ಅವರು ಗೋಯಾ ಕ್ಲಬ್ ಅನ್ನು ಕೃಷಿ ಭೂಮಿಯಲ್ಲಿ ನಿರ್ಮಿಸಲಾಗಿದೆ ಎಂದು ಹೇಳಿದರು.

## ಹೃದಯಘಾತಕ್ಕೆ ಒಳಗಾಗಿದ್ದ 81 ಅಯ್ಯಪ್ಪ ಭಕ್ತರಿಗೆ ಯಶಸ್ವಿ ಚಿಕಿತ್ಸೆ

**ಪತ್ತನಂತಿಟ್ಟ:** ಕೇರಳ ಆರೋಗ್ಯ ಇಲಾಖೆ ಸ್ಥಾಪಿಸಿದ ವೈದ್ಯಕೀಯ ಆರೈಕೆ ಸೌಲಭ್ಯಗಳು ಪ್ರಸ್ತುತ ಶಬರಿಮಾಲೆ ಯಾತ್ರೆಯ ಸಂದರ್ಭದಲ್ಲಿ ಹೃದಯಾಘಾತದಿಂದ ಬಳಲುತ್ತಿದ್ದ 81 ಅಯ್ಯಪ್ಪ ಭಕ್ತರನ್ನು ಉಳಿಸಲು ಸಹಾಯ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

24/7 ಕಾರ್ಯನಿರ್ವಹಿಸುವ ಆಧುನಿಕ ಆರೋಗ್ಯ ಕೇಂದ್ರಗಳು, ತಜ್ಞ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಯೊಂದಿಗೆ, ಸಮಯೋಚಿತ ವೈದ್ಯಕೀಯ ಹಸ್ತಕ್ಷೇಪವನ್ನು ಸಕ್ರಿಯಗೊಳಿಸಿ ತೀರ್ಥಯಾತ್ರೆಯ ಸಮಯದಲ್ಲಿ ಹಲವಾರು ಜೀವಗಳನ್ನು ಉಳಿಸಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವರದಿಯಾದ 103 ಹೃದಯಾಘಾತ ಪ್ರಕರಣಗಳಲ್ಲಿ, 81 ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಯಿತು. ಇದಲ್ಲದೆ, ತ್ವರಿತ ವೈದ್ಯಕೀಯ ಆರೈಕೆಯ ಮೂಲಕ ವರದಿಯಾದ 25 ಹೃದಯಾಘಾತ ಪ್ರಕರಣಗಳಲ್ಲಿ ಆರು ಜೀವಗಳನ್ನು ಉಳಿಸಲಾಗಿದೆ ಎಂದು ರಾಜ್ಯ ಸರ್ಕಾರದ ಪತ್ರಿಕಾ



ಪ್ರಕಟಣೆಯಲ್ಲಿ ತಿಳಿಸಿದೆ. ವರದಿಯಾದ ಎಲ್ಲಾ 44 ರೋಗಗ್ರಸ್ತವಾಗುವಿಕೆ ಪ್ರಕರಣಗಳಿಗೂ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಯಿತು ಎಂದು ಅದು ಹೇಳಿದೆ.

ಜೀವ ಉಳಿಸುವ ಕ್ರಮಗಳಿಗೆ ವಿಶೇಷ ಒತ್ತು ನೀಡುವ ಮೂಲಕ, ಬೆಟ್ಟದ ಪಾದಯಾತ್ರೆಯಲ್ಲಿ ಒಳಗೊಂಡಿರುವ ದೈಹಿಕ ಒತ್ತಡವನ್ನು ಪರಿಗಣಿಸಿ ಹೃದಯ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಆರೋಗ್ಯ ಇಲಾಖೆ ತನ್ನ ಸಿದ್ಧತೆಯನ್ನು ಬಲಪಡಿಸಿದೆ.

ಹೃದ್ರೋಗ ಘಟಕಗಳನ್ನು ಸ್ಥಾಪಿಸಲಾಗಿದೆ ಮತ್ತು ಸ್ಟ್ರೆಪ್ಟೋಕಿನೇಸ್ ಮತ್ತು ಟೆನೆಕ್ಟೆಪ್ಲೇಸ್‌ನಂತಹ ಅಗತ್ಯ ಜೀವ ಉಳಿಸುವ ಔಷಧಿಗಳನ್ನು ಲಭ್ಯವಾಗುವಂತೆ ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ. ಇಲ್ಲಿಯವರೆಗೆ, ಶಬರಿಮಲೆ ಮತ್ತು ಹತ್ತಿರದ ಆಸ್ಪತ್ರೆಗಳಲ್ಲಿ ಒಟ್ಟು 95,385 ಹೊರರೋಗಿಗಳು ಚಿಕಿತ್ಸೆ ಪಡೆದಿದ್ದಾರೆ.


## ಪೊಂಗಲ್ ಹಬ್ಬಕ್ಕೆ ತಮಿಳುನಾಡಿಗೆ ಮೋದಿ ಭೇಟಿ

**ಮೋದಿ ಎನ್‌ಡಿಎ ನಾಯಕರೊಂದಿಗೆ ಸಭೆ ನಡೆಸುವ ಸಾಧ್ಯತೆ**

**ಈ ಭೇಟಿಯು ಕೃಷಿ ಸಮಸ್ಯೆಗಳ ಮೇಲೆ ಪಕ್ಷದ ಗಮನವನ್ನು ಕೇಂದ್ರೀಕರಿಸುವುದರ ಜೊತೆಗೆ ತಮಿಳು ಸಂಪ್ರದಾಯಗಳು, ಭಾವನೆಗಳೊಂದಿಗೆ ಸಂಪರ್ಕ ಸಾಧಿಸುವ ಪ್ರಯತ್ನಗಳನ್ನು ಬಲಪಡಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಪ್ರಸ್ತಾವಿತ ಭೇಟಿಯು ಮೈತ್ರಿಕೂಟದ ಮುಂಭಾಗದಲ್ಲಿನ ನಿರ್ಣಾಯಕ ಬೆಳವಣಿಗೆಗಳೊಂದಿಗೆ ಹೊಂದಿಕೆಯಾಗುವ ನಿರೀಕ್ಷೆಯಿದೆ. ತಮಿಳುನಾಡಿನಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಪೊಂಗಲ್‌ಗೆ ಮುಂಚಿತವಾಗಿ ನಿರ್ದಿಷ್ಟ ರೂಪ ಪಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ, ಹಲವಾರು ಪ್ರಾದೇಶಿಕ ಪಕ್ಷಗಳು ಔಪಚಾರಿಕವಾಗಿ ಒಕ್ಕೂಟಕ್ಕೆ ಸೇರುವ ನಿರೀಕ್ಷೆಯಿದೆ. ತಮ್ಮ ಭೇಟಿಯ ಸಮಯದಲ್ಲಿ, ಮುಂಬರುವ ವಿಧಾನಸಭಾ ಚುನಾವಣೆಗಳಿಗೆ ಚುನಾವಣಾ ಕಾರ್ಯತಂತ್ರ, ಸಮನ್ವಯವನ್ನು ಅಂತಿಮಗೊಳಿಸಲು ಪ್ರಧಾನಿ ಮೋದಿ ಎನ್‌ಡಿಎ ನಾಯಕರೊಂದಿಗೆ ಸಭೆ ನಡೆಸುವ ಸಾಧ್ಯತೆಯಿದೆ.**

**ಮೂರು ದಿನಗಳ ಭೇಟಿ**

**ನವದೆಹಲಿ:** ತಮಿಳುನಾಡಿನಲ್ಲಿ ಕೇಸರಿ ಬಾವುಟ ಹಾರಿಸಲು ಬಿಜೆಪಿ ಸಿದ್ದತೆ ನಡೆಸುತ್ತಿರುವ ಬೆನ್ನಲ್ಲೇ ಪೊಂಗಲ್ ಸಂದರ್ಭದಲ್ಲಿ ದ್ರಾವಿಡ ನಾಡಿಗೆ ಭೇಟಿ ನೀಡಲು ಪ್ರಧಾನಿ ನರೇಂದ್ರ ಮೋದಿ ನಿರ್ಧರಿಸಿದ್ದಾರೆ. ಜನವರಿ 13 ರಿಂದ 15 ರವರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ತಮಿಳುನಾಡಿಗೆ ಮೂರು ದಿನಗಳ ಭೇಟಿ ನೀಡಲಿದ್ದು, ಈ ಸಂದರ್ಭದಲ್ಲಿ ರೈತರೊಂದಿಗೆ ಪೊಂಗಲ್ ಆಚರಣೆಯಲ್ಲಿ ಭಾಗವಹಿಸುವ ಸಾಧ್ಯತೆಯಿದೆ ಎಂದು ರಾಜ್ಯ ಬಿಜೆಪಿ ಮೂಲಗಳು ತಿಳಿಸಿವೆ. 2026ರ ವಿಧಾನಸಭಾ ಚುನಾವಣೆಗೆ ಮುನ್ನ ನಡೆಯಲಿರುವ ಈ ಪ್ರಸ್ತಾವಿತ ಭೇಟಿಯನ್ನು ಪಕ್ಷದೊಳಗೆ ಗ್ರಾಮೀಣ ಮತದಾರರು ಮತ್ತು ರಾಜ್ಯದಲ್ಲಿ ಸಾಂಸ್ಕೃತಿಕ ಬಲವರ್ಧನೆಗಾಗಿ ಉದ್ದೇಶಿಸಲಾದ ಪ್ರಮುಖ ಸಂಪರ್ಕ ಉಪಕ್ರಮವೆಂದು ಪರಿಗಣಿಸಲಾಗಿದೆ. ಪೊಂಗಲ್ ಹಬ್ಬದ ಆಸುಪಾಸಿನಲ್ಲಿ ಈ ಭೇಟಿಯನ್ನು ಯೋಜಿಸಲಾಗಿದ್ದು, ಸಾಂಪ್ರದಾಯಿಕ ಸುಗ್ಗಿಯ ಆಚರಣೆಗಳಿಗಾಗಿ ಪ್ರಧಾನಿಯವರು ತಮಿಳುನಾಡಿನ ರೈತರೊಂದಿಗೆ ಸೇರುವ ನಿರೀಕ್ಷೆಯಿದೆ ಎಂದು ಹಿರಿಯ ಭಾರತೀಯ ಜನತಾ ಪಕ್ಷದ ನಾಯಕರು ತಿಳಿಸಿದ್ದಾರೆ. ತಮಿಳು ಸಂಸ್ಕೃತಿ ಮತ್ತು ಗುರುತಿನ ಮೇಲೆ ಅದರ ಒತ್ತು ನೀಡುವುದರ ಜೊತೆಗೆ ಗ್ರಾಮೀಣ ಸಮುದಾಯಗಳೊಂದಿಗೆ ಬಿಜೆಪಿಯ ಸಂಬಂಧವನ್ನು ಬಲಪಡಿಸುವ ಗುರಿಯನ್ನು ಈ ಸಂಪರ್ಕ ಹೊಂದಿದೆ ಎಂದು ಪಕ್ಷದ ಮೂಲಗಳು ಸೂಚಿಸಿವೆ. ತಾತ್ಕಾಲಿಕ ಪ್ರಯಾಣದ ವೇಳಾಪಟ್ಟಿಯ ಪ್ರಕಾರ, ತಮಿಳುನಾಡು, ಕಾಶಿ ನಡುವಿನ ನಾಗರಿಕ ಮತ್ತು ಸಾಂಸ್ಕೃತಿಕ ಸಂಪರ್ಕಗಳನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ರಾಮೇಶ್ವರಂನಲ್ಲಿ ನಡೆಯುವ ಕಾಶಿ ತಮಿಳು ಸಂಗಮಮ್ 4.0ರ ಸಮಾರೋಪ ಸಮಾರಂಭದಲ್ಲಿ ಮೋದಿ ಭಾಗವಹಿಸುವ ನಿರೀಕ್ಷೆಯಿದೆ. ಪುದುಕ್ಕೋಟ್ಟೈನಲ್ಲಿ ನಡೆಯಲಿರುವ ಬಿಜೆಪಿ ತಮಿಳುನಾಡು ಅಧ್ಯಕ್ಷ ನೈನಾರ್ ನಾಗೇಂದ್ರನ್ ನೇತೃತ್ವದಲ್ಲಿ ರಾಜ್ಯಾದ್ಯಂತ ನಡೆಯುವ ತಮಿಳಗಂ ತಲೈ ನಿಮಿರ ತಮಿಳನಿನ್ ಪಯಣಂ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಭಾಗವಹಿಸುವ ಸಾಧ್ಯತೆಯಿದೆ. ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ, ರೈತರೊಂದಿಗೆ ಪ್ರಧಾನಿಯವರ ಪೊಂಗಲ್ ಆಚರಣೆಯಲ್ಲಿ ಭಾಗವಹಿಸುವುದು ಬಲವಾದ ರಾಜಕೀಯ, ಸಾಂಸ್ಕೃತಿಕ ಸಂದೇಶವನ್ನು ರವಾನಿಸುತ್ತದೆ ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಹೇಳಿದರು. ಬಿಜೆಪಿ ಪ್ರಸ್ತುತ ಪಟ್ಟಾಳಿ ಮಕ್ಕಳ್ ಕಚ್ಚಿ, ದೇಶೀಯ ಮುರ್ಪೋಕ್ಕು ದ್ರಾವಿಡ ಕಳಗಂ, ಅಮ್ಮ ಮಕ್ಕಳ್ ಮುನ್ನೇತ್ರ ಕಳಗಂ, ಉಚ್ಚಾಟಿತ ಎಐಎಡಿಎಂಕೆ ನಾಯಕ ಓ. ಪನ್ನೀರ್‌ಸೆಲ್ವಂ ಸೇರಿದಂತೆ ಹಲವು ಪಕ್ಷಗಳೊಂದಿಗೆ ಮಾತುಕತೆ ನಡೆಸುತ್ತಿದೆ.



## ಮಿನಿ ನ್ಯೂಸ್

### ಸುಡಾನ್‌ನಲ್ಲಿ ಡ್ರೋನ್ ದಾಳಿಗೆ 6 ವಿಶ್ವಸಂಸ್ಥೆ ಶಾಂತಿಪಾಲಕರು ಬಲಿ

**ಕೈರೋ:** ಯುದ್ಧಪೀಡಿತ ಸುಡಾನ್‌ನಲ್ಲಿ ನಡೆದ ಡ್ರೋನ್‌ದಾಳಿಯಲ್ಲಿ ಆರು ಶಾಂತಿಪಾಲಕರು ಸಾವನ್ನಪ್ಪಿದ್ದಾರೆ ಎಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಹೇಳಿದ್ದಾರೆ.

ಕೊರ್ಡೊಫಾನ್‌ನ ಮಧ್ಯ ಪ್ರದೇಶದ ಕಡುಗ್ಲಿ ನಗರದಲ್ಲಿನ ವಿಶ್ವಸಂಸ್ಥೆಯ ಶಾಂತಿಪಾಲನಾ ಲಾಜಿಸ್ಟಿಕ್ಸ್ ನೆಲೆಯ ಮೇಲೆ ಈ ದಾಳಿ ನಡೆದಿದೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ದಾಳಿಯಲ್ಲಿ ಇತರ ಎಂಟು ಶಾಂತಿಪಾಲಕರು ಗಾಯಗೊಂಡಿದ್ದಾರೆ. ಬಲಿಯಾದವರೆಲ್ಲರೂ ಬಾಂಗ್ಲಾದೇಶದ ಪ್ರಜೆಗಳಾಗಿದ್ದು, ಯುನಿಸ್‌ಎಫ್‌ಎಯ ಅಬೈಗಾಗಿ ಯುಎನ್ ಮಧ್ಯಂತರ ಭದ್ರತಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು ಎನ್ನಲಾಗಿದೆ. ವಿಶ್ವಸಂಸ್ಥೆಯ ಶಾಂತಿಪಾಲಕರನ್ನು ಗುರಿಯಾಗಿಸಿಕೊಂಡು ನಡೆಸಲಾದ ದಾಳಿಗಳು ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿ ಯುದ್ಧ ಅಪರಾಧಗಳಾಗಿರಬಹುದು ಎಂದು ಗುಟೆರೆಸ್ ಹೇಳಿದರು, ಇದು ಸಮರ್ಥನೀಯ ವಲ್ಲದ ದಾಳಿಗೆ ಕಾರಣರಾದವರನ್ನು ಹೊಣೆಗಾರರನ್ನಾಗಿ ಮಾಡಬೇಕೆಂದು ಕರೆ ನೀಡಿದರು.

ಸುಡಾನ್ ಸೇನೆಯು ಎರಡು ವರ್ಷಗಳಿಗೂ ಹೆಚ್ಚು ಕಾಲ ದೇಶದ ನಿಯಂತ್ರಣಕ್ಕಾಗಿ ಸೈನ್ಯದೊಂದಿಗೆ ಯುದ್ಧದಲ್ಲಿರುವ ಕುಖ್ಯಾತ ಅರೆಸೈನಿಕ ಗುಂಪಾದ ರಾಪಿಡ್ ಸಪೋರ್ಟ್ ಫೋರ್ಸಸ್ ಮೇಲೆ ದಾಳಿಯನ್ನು ದೂಷಿಸಿತು. ಈ ದಾಳಿಯು ಬಂಡಾಯ ಮಿಲಿಟಿಯಾ, ಅದರ ಹಿಂದಿನವರ ವಿಧ್ವಂಸಕ ವಿಧಾನವನ್ನು ಸ್ಪಷ್ಟವಾಗಿ ಬಹಿರಂಗಪಡಿಸುತ್ತದೆ ಎಂದು ಅದು ಹೇಳಿದೆ.

### ದೀದಿ ಬಂಧನಕ್ಕೆ ಹಿಮಂತ ಬಿಸ್ವಾ ಶರ್ಮಾ ಆಗ್ರಹ

**ಕೋಲ್ಕತ್ತಾ:** ಫುಟ್ಬಾಲ್ ಐಕಾನ್ ಲಿಯೊನೆಲ್ ಮೆಸ್ಸಿ ಅವರ ಕಾರ್ಯಕ್ರಮದಲ್ಲಿ ಉಂಟಾದ ಅವ್ಯವಸ್ಥೆಯ ಬಗ್ಗೆ ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ಅಸಮಾಧಾನ ವ್ಯಕ್ತಪಡಿಸಿದ್ದು, ಘಟನೆಗೆ ಕಾರಣರಾದ ಸಿಎಂ ಮಮತಾ ಬ್ಯಾನರ್ಜಿ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಬಂಗಾಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಕ್ರೀಡಾಕೂಟವನ್ನು ಹಾಳುಮಾಡಲು ಬೇರೂರಿರುವ ವಿಐಪಿ ಸಂಸ್ಕೃತಿಯೇ ಕಾರಣ ಎಂದು ಶರ್ಮಾ ಆರೋಪಿಸಿದ್ದಾರೆ. ಕೋಲ್ಕತ್ತಾದಲ್ಲಿ ನಡೆದ ಮೆಸ್ಸಿಯ ಗೋಟ್ ಟೂರ್ 2025 ಕಾರ್ಯಕ್ರಮದ ಅವ್ಯವಸ್ಥೆ ಉಲ್ಲೇಖಿಸಿದ ಶರ್ಮಾ, ಹೊಣೆಗಾರಿಕೆ ಮೇಲಿನಿಂದ ಪ್ರಾರಂಭವಾಗಬೇಕು.



ರಾಜ್ಯದ ಗೃಹ ಸಚಿವರು, ಕೋಲ್ಕತ್ತಾ ಪೊಲೀಸ್ ಆಯುಕ್ತರನ್ನು ಬಂಧಿಸಬೇಕಿತ್ತು. ಆದರೆ, ಅವರು ಕಾರ್ಯಕ್ರಮ ಆಯೋಜಕರ ಬಂಧನವನ್ನು ಸಮರ್ಥಿಸುತ್ತಿಲ್ಲ. ಮೊದಲ ಜವಾಬ್ದಾರಿ ರಾಜ್ಯದ ಗೃಹ ಸಚಿವರು, ಪೊಲೀಸ್ ಆಯುಕ್ತರು ಹೊರಬೇಕು ಎಂದು ಪ್ರತಿಪಾದಿಸಿದ್ದಾರೆ. ಈ ಘಟನೆಯು ರಾಜ್ಯ ನಾಯಕತ್ವವು ಆತ್ಮಾವಲೋಕನ ಮಾಡಿಕೊಳ್ಳುವಂತೆ ಮಾಡಬೇಕು. ಮೆಸ್ಸಿ ಇಡೀ ಜಗತ್ತಿಗೆ ಆದರ್ಶ. ಮಮತಾ ಬ್ಯಾನರ್ಜಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಂಗಾಳದಲ್ಲಿ ಪ್ರತಿದಿನ ಮುಗ್ಧ ಜನರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಇದು ಕಳವಳಕಾರಿ ವಿಷಯ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

### ಉಕ್ರೇನ್ ರಷ್ಯಾ ಶಾಂತಿ ಮಾತುಕತೆ: ಬರ್ಲಿನ್‌ಗೆ ಅಮೆರಿಕ ಅಧಿಕಾರಿಗಳ ಭೇಟಿ

**ಬರ್ಲಿನ್ :** ರಷ್ಯಾ-ಉಕ್ರೇನ್ ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಮತ್ತೊಂದು ಸುತ್ತಿನ ಮಾತುಕತೆಗಾಗಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ಅಮೆರಿಕದ ರಾಯಭಾರ ಅಧಿಕಾರಿಗಳು ಭಾನುವಾರ ಜರ್ಮನಿಯ ಬರ್ಲಿನ್‌ಗೆ ಭೇಟಿ ನೀಡಿದ್ದಾರೆ. ಈ ಕುರಿತು ಝೆಲೆನ್ ಮಾಹಿತಿ ನೀಡಿದ್ದಾರೆ. ಅಮೆರಿಕ ಮತ್ತು ಯುರೋಪ್‌ನ ಅಧಿಕಾರಿಗಳು ಬರ್ಲಿನ್‌ನಲ್ಲಿ ಸರಣಿ ಮಾತುಕತೆಗಳನ್ನು ನಡೆಸಲಿದ್ದಾರೆ. ಇದೇ ವೇಳೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್, ಇತರೆ ಅಧಿಕಾರಿಗಳನ್ನು ತಾವು ವೈಯಕ್ತಿಕವಾಗಿ ಭೇಟಿಯಾಗಿ ಮಾತುಕತೆ ನಡೆಸುವುದಾಗಿಯೂ ಝೆಲೆನ್‌ಸ್ಕಿ ತಿಳಿಸಿದ್ದಾರೆ.

ನ್ಯಾಟೊ ರಾಷ್ಟ್ರಗಳಿಗೆ ಒದಗಿಸುವಂತ ಭದ್ರತಾ ಖಾತರಿಗಳನ್ನು ಉಕ್ರೇನ್‌ಗೂ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ಒದಗಿಸಬೇಕು ಎಂದು ಝೆಲೆನ್ ಬೇಡಿಕೆ ಇಟ್ಟಿದ್ದಾರೆ ಎಂಬ ಮಾತು ಕೇಳಿಬರುತ್ತಿರುವ ಬಗ್ಗೆ ಮಾಧ್ಯಮಗಳು ಪ್ರಶ್ನಿಸಿವೆ. ಇದಕ್ಕೆ ಉತ್ತರಿಸಿರುವ ಝೆಲೆನ್‌ಸ್ಕಿ. ರಷ್ಯಾದ ಮತ್ತೊಂದು ಸುತ್ತಿನ ಅತಿಕ್ರಮಣವನ್ನು ತಡೆಗಟ್ಟಲು ಈ ಭದ್ರತಾ ಖಾತರಿ ಅಗತ್ಯವಿದೆ. ಅಲ್ಲದೇ, ಹಿಂದೆಯೇ ನಾವು ಈ ಬಗ್ಗೆ ಸ್ಪಷ್ಟನೆ ನೀಡಿದ್ದೇವೆ' ಎಂದಿದ್ದಾರೆ. ಏತನ್ಮಧ್ಯೆ, ಡೊನೆಟ್ ಪ್ರಾಂತ್ಯದಲ್ಲಿ ಉಕ್ರೇನ್ ಪಡೆಯು ಸಂಪೂರ್ಣವಾಗಿ ತನ್ನ ಸೇನಾ ನಿಯೋಜನೆಯನ್ನು ಹಿಂಪಡೆಯಬೇಕು ಹಾಗೂ ನ್ಯಾಟೊ ಸೇರ್ಪಡೆಗೊಳ್ಳುವ ಪ್ರಯತ್ನವನ್ನು ಕೈಬಿಡಬೇಕು ಎಂದು ರಷ್ಯಾ ಮತ್ತೆ ಪುನರುಚ್ಚರಿಸಿದೆ. ಈ ಮೂಲಕ ಶಾಂತಿ ಮಾತುಕತೆಗಳು ಫಲಪ್ರದವಾಗುವುದು ಸಾಧ್ಯವೇ ಎಂಬ ಶಂಕೆ ಮೂಡಿದೆ.



# ಭಾರತೀಯ ಮೂಲದ ವ್ಯಕ್ತಿಯೊಬ್ಬನಿಗೆ ಗಲ್ಲು ಶಿಕ್ಷೆ ಪ್ರಕಟ


### ವೈವಾಹಿಕ ಕಲಹದಿಂದ ಪತ್ನಿಯನ್ನು ಕೊಂದ ಪ್ರಕರಣದಿಂದಾಗಿ ಹೆಂಡತಿಯನ್ನು ಸುತ್ತಿಗೆಯಿಂದ ಹೊಡೆದುಕೊಂದಿದ್ದ ವ್ಯಕ್ತಿ

**ಕುವೈತ್:** ಅರಬ್ ರಾಷ್ಟ್ರಗಳಲ್ಲಿ ತಪ್ಪಿಗೆ ಶಿಕ್ಷೆ ಬಹಳಷ್ಟು ದೊಡ್ಡದಿರುತ್ತದೆ ಎಂದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಅಲ್ಲಿ ತಪ್ಪು ನಡೆದರೆ ದಂಡಂ ದಶಗುಣಂ ಎಂಬತೆ ಶಿಕ್ಷೆ ಕಠಿಣ ಮಾತ್ರವಲ್ಲ ಕೆಲವೊಮ್ಮೆ ಅದು ಜೀವವನ್ನೇ ತೆಗಯುವಷ್ಟು ಘೋರವಾಗಿರಬಹುದು. ಅಂತೆಯೇ ವೈವಾಹಿಕ ಕಲಹವೊಂದು ಕೊಲೆಗೆ ತಿರುಗಿದ್ದು, ಪತ್ನಿಯನ್ನು ಕೊಂದ ಭಾರತೀಯ ಮೂಲದ ವ್ಯಕ್ತಿಗೆ ಕುವೈತ್‌ನಲ್ಲಿ ಮರಣ ದಂಡನೆ ಶಿಕ್ಷೆ ಪ್ರಕಟವಾಗಿದೆ.

**ಕುವೈತ್‌ನಲ್ಲಿ ಭಾರತೀಯ ಮೂಲದ ವ್ಯಕ್ತಿಗೆ ಗಲ್ಲು ಶಿಕ್ಷೆ:** ಕುವೈತ್‌ನ ಸಲ್ಮಿ ಎಂಬ ಪ್ರದೇಶದಲ್ಲಿ ಭಾರತೀಯ ಮೂಲದ ವ್ಯಕ್ತಿಯೊಬ್ಬ ವೈವಾಹಿಕ ಕಲಹದಿಂದ ತನ್ನ ಪತ್ನಿಯ ಜೊತೆ ಜಗಳದ ವೇಳೆ ಪರಿಸ್ಥಿತಿ ಹಿಂಸಾತ್ಮಕವಾಗಿದ್ದು, ಆತ ತನ್ನ ಮನೆಯಲ್ಲಿ ಪತ್ನಿಯ ತಲೆಗೆ ಮಾರಕಾಯುಧದಿಂದ ಹೊಡೆದು ಕೊಂದಿದ್ದಾನೆ. ಈ ಪ್ರಕರಣದ ವಿಚಾರಣೆ ನಡೆಸಿರುವ ವೈತ್‌ನ ಕ್ರಿಮಿನಲ್ ಕೋರ್ಟ್‌ನ ನ್ಯಾಯಾಧೀಶ ನಾಯೆಫ್ ಅಲ್-ದಹೌಮ್ ಆತನಿಗೆ ಮರಣ ಶಿಕ್ಷೆ ವಿಧಿಸಿದೆ.

**ಹೆಂಡತಿಯನ್ನು ಸುತ್ತಿಗೆಯಿಂದ ಹೊಡೆದು ಕೊಂದಿದ್ದ ವ್ಯಕ್ತಿ:** ಅರಬ್ ಟೈಮ್ಸ್ ವರದಿ ಪ್ರಕಾರ, ಭಾರತೀಯ ಮೂಲದ ಈ ವ್ಯಕ್ತಿ ತನ್ನ ಪತ್ನಿಯ ತಲೆಗೆ ಹಲವು ಬಾರಿ ಸುತ್ತಿಗೆಯಿಂದ ಹೊಡೆದಿದ್ದಾನೆ. ಇದರಿಂದ ಆಕೆ ಗಂಭೀರವಾಗಿ

**ಮರಣ ದಂಡನೆ ಶಿಕ್ಷೆ**



ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಪೊಲೀಸರು ತಕ್ಷಣವೇ ಆರೋಪಿಯನ್ನು ಬಂಧಿಸಿ, ತನಿಖೆ ನಡೆಸಿದರು.

ನಂತರ ಪ್ರಕರಣವನ್ನು ಕ್ರಿಮಿನಲ್ ಕೋರ್ಟ್‌ಗೆ ಒಪ್ಪಿಸಲಾಯಿತು. ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರ, ನ್ಯಾಯಾಲಯವು ಆರೋಪಿಯ ತಪ್ಪನ್ನು ದೃಢಪಡಿಸಿ ಮರಣ ದಂಡನೆ ವಿಧಿಸಿದೆ.

### ಕಾನೂನು ಪಾಲನೆ ಅತ್ಯಗತ್ಯ

**ಕುವೈತ್‌ನಲ್ಲಿ ವೈವಾಹಿಕ ಕಲಹದಲ್ಲಿ ಪತ್ನಿಯನ್ನು ಕೊಂದ ಭಾರತೀಯ ಮೂಲದ ವ್ಯಕ್ತಿಗೆ ಮರಣದಂಡನೆ ಶಿಕ್ಷೆ ವಿಧಿಸಲಾಗಿದೆ. ಸಲ್ಮಿ ಪ್ರದೇಶದಲ್ಲಿ ನಡೆದ ಈ ಘಟನೆಯಲ್ಲಿ, ಆರೋಪಿ ಪತ್ನಿಯ ತಲೆಗೆ ಮಾರಕಾಯುಧದಿಂದ ಹೊಡೆದು ಕೊಲೆ ಮಾಡಿದ್ದಾನೆ. ಹೀಗಾಗಿ ಗಲ್ಲು ಶಿಕ್ಷೆ ಪ್ರಕಟ ಮಾಡಿದೆ. ಈ ಹಿಂದೆಯೂ ಯುಎಇನಲ್ಲಿ ಮಗು ಕೊಲೆಗೈದ ಭಾರತೀಯ ಮಹಿಳೆಗೂ ಗಲ್ಲುಶಿಕ್ಷೆಯಾಗಿತ್ತು. ಇದು ವಿದೇಶಗಳಲ್ಲಿ ಕಾನೂನು ಪಾಲನೆ ಅತ್ಯಗತ್ಯ ಎಂಬುದನ್ನು ತಿಳಿಸುವಂತೆ ಮಾಡುತ್ತವೆ.**

### ಈ ಹಿಂದೆ 4 ತಿಂಗಳ ಮಗು ಕೊಂದ ಅಪರಾಧದಲ್ಲಿ ಭಾರತೀಯ ಮಹಿಳೆಗೆ ಗಲ್ಲು ಶಿಕ್ಷೆ

**ಅರಬ್ ರಾಷ್ಟ್ರಗಳಲ್ಲಿ ಭಾರತ ಮೂಲದ ವಲಸಿಗರು ಈ ಶಿಕ್ಷೆಯನ್ನು ಪಡೆಯುತ್ತಿಲ್ಲ. ಇಂತಹ ಹಲವು ಘಟನೆಗಳು ನಡೆದಿವೆ. ಇದೇ ವರ್ಷ 4 ತಿಂಗಳ ಹಸುಗೂಸನ್ನು ಕೊಲೆ ಮಾಡಿದ ಆರೋಪದಡಿ ಭಾರತೀಯ ಮೂಲದ ಶಹಜಾದಿ ಖಾನ್ ಎಂಬ ಮಹಿಳೆಗೆ ಮರಣದಂಡನೆ ಪ್ರಕಟವಾದ ಸನ್ನಿವೇಶವನ್ನು ನಾವು ಇಲ್ಲಿ ಸ್ಮರಿಸಬಹುದು. ಉತ್ತರ ಪ್ರದೇಶದ ಬಾಂದಾ ಮೂಲದ 33 ವರ್ಷದ ಭಾರತೀಯ ವಲಸಿಗರಾದ ಶಹಜಾದಿ ಖಾನ್, ಯುಎಇನಲ್ಲಿ ತಾನು ಕೆಲಸ ಮಾಡುತ್ತಿದ್ದ ಮನೆಯ ಮಾಲೀಕರ 4 ತಿಂಗಳ ಕಂದಮ್ಮನನ್ನು ಕೊಂದಿದ್ದಾಳೆ ಎಂಬ ಆರೋಪದಡಿ ಆಕೆಗೆ ಗಲ್ಲುಶಿಕ್ಷೆ ಪ್ರಕಟವಾಗಿತ್ತು. ಕೊನೆಗೆ ಆಕೆಯನ್ನು ಗಲ್ಲಿಗೇರಿಸಿದ ಪ್ರಸಂಗವೂ ನಡೆಯಿತು. ಇಂತಹ ಪ್ರಕರಣಗಳು ವಿದೇಶಗಳಲ್ಲಿ ಭಾರತೀಯರು ಎಷ್ಟು ಸೇಫ್ ಮತ್ತು ನಾವು ಯಾವುದಾದರೂ ಒಂದು ಪ್ರದೇಶಕ್ಕೆ ವಲಸೆ ಹೋಗುವಾಗ ಅಲ್ಲಿನ ಕಾನೂನು, ನೀತಿ ನಿಯಮ ಕಟ್ಟುಪಾಡುಗಳನ್ನು ಚೆನ್ನಾಗಿ ಅರಿತುಕೊಂಡು ಅದರಂತೆ ನಡೆಯುವುದು ಎಷ್ಟು ಮುಖ್ಯ ಎಂಬ ಪ್ರಶ್ನೆಗಳನ್ನು ಮೂಡಿಸುತ್ತವೆ.**

# ದೈವಕ್ಕೆ ಅಪಮಾನ ರಿಷಬ್ ಆಕ್ಷೇಪ

ರಣ್ವೀರ್ ಸಿಂಗ್ ಅವರು 'ಕಾಂತಾರ' ಸಿನಿಮಾ ಬಗ್ಗೆ ಮಾತನಾಡುತ್ತಾ ದೈವದ ಅನುಕರಣೆ ಮಾಡಿದ್ದರು. 'ದೈವ'ವನ್ನು ದೆವ್ವ ಎಂದು ಕರೆದಿದ್ದರು. ರಣ್ವೀರ್ ಸಿಂಗ್ ಅವರ ಕೆಟ್ಟ ಅನುಕರಣೆ ಬಗ್ಗೆ ವಿರೋಧ ವ್ಯಕ್ತವಾಗಿತ್ತು. ದೂರುಗಳು ಸಹ ದಾಖಲಾಗಿದ್ದವು. ಆದರೆ ರಿಷಬ್ ಶೆಟ್ಟಿ ಈ ಬಗ್ಗೆ ಪ್ರತಿಕ್ರಿಯೆ ನೀಡಿರಲಿಲ್ಲ. ಆದರೆ ಈಗ ಈ ಬಗ್ಗೆ ರಿಷಬ್ ಮಾತನಾಡಿದ್ದಾರೆ.

ಕೆಲ ದಿನಗಳ ಹಿಂದಷ್ಟೆ ಗೋವಾ ಸಿನಿಮೋತ್ಸವದ ಸಮಾರೋಪ ಕಾರ್ಯಕ್ರಮದಲ್ಲಿ ನಟ ರಿಷಬ್ ಶೆಟ್ಟಿ ಭಾಗವಹಿಸಿದ್ದರು. ಅದೇ ಕಾರ್ಯಕ್ರಮದಲ್ಲಿ ರಣ್ವೀರ್ ಸಿಂಗ್ ಸಹ ಅತಿಥಿಯಾಗಿ ಭಾಗಿ ಆಗಿದ್ದರು. ಕಾರ್ಯಕ್ರಮದಲ್ಲಿ ರಣ್ವೀರ್ ಸಿಂಗ್ ಅವರು 'ಕಾಂತಾರ' ಸಿನಿಮಾ ಬಗ್ಗೆ ಮಾತನಾಡುತ್ತಾ ದೈವದ ಅನುಕರಣೆ ಮಾಡಿದ್ದರು. ಚೆನ್ನೈನಲ್ಲಿ ನಡೆದ ಬಿಹೈಂಡ್ ವೂಡ್ಸ್ ಗೋಲ್ಡ್ ಮೆಡಲ್ ಕಾರ್ಯಕ್ರಮದಲ್ಲಿ ಗೋಲ್ಡ್ ಮೆಡಲ್ ಸ್ವೀಕರಿಸಿದ ರಿಷಬ್ ಶೆಟ್ಟಿ, ದೈವದ ಅನುಕರಣೆಯ ಬಗ್ಗೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕಾರ್ಯಕ್ರಮದಲ್ಲಿ ಮಾತನಾಡಿರುವ ರಿಷಬ್ ಶೆಟ್ಟಿ, 'ಕಾಂತಾರ' ಸಿನಿಮಾದ ಆಚರಣೆ ನಮ್ಮ ಮನೆಗೆ ನಮ್ಮ ಸಮುದಾಯದ, ಪ್ರಾಂತ್ಯಕ್ಕೆ ಸೇರಿದ ಆಚರಣೆ. ನಾನು ನೋಡಿದ್ದು, ಕೇಳಿದ್ದ ಕತೆಗಳನ್ನೇ ನಾನು ಸಿನಿಮಾ ಮಾಡಿದ್ದೇನೆ. ನಾನು ಸ್ವತಃ ದೈವವನ್ನು ನಂಬುವವ, ಆಚರಿಸುವವ ಹಾಗಾಗಿ ನನಗೆ ಅದು ಅತ್ಯಂತ ಪವಿತ್ರವಾದುದು' ಎಂದಿದ್ದಾರೆ.



ಮುಂದುವರೆದು ಮಾತನಾಡಿ, 'ಪಾಪ್ ಕಲ್ಚರ್‌ನಲ್ಲಿ ಹೇಗಾಗಿ ಬಿಡುತ್ತದೆ ಎಂದರೆ, ಸಿನಿಮಾನಲ್ಲಿ ತೋರಿಸಲಾಗಿದೆ ಎಂದ ಕೂಡಲೇ ಅದನ್ನು ಅನುಕರಣೆ ಮಾಡುವುದು, ವೇದಿಕೆಗೆ ತೆಗೆದುಕೊಂಡು ಹೋಗುವುದು, ವೇದಿಕೆ ಮೇಲೆ ಪ್ರದರ್ಶನ ಮಾಡುವುದು. ರೀಲ್ಸ್ ಮಾಡುವುದು, ಅನುಕರಣೆ ಮಾಡುವುದು, ಅವಹೇಳನ ಮಾಡುವುದು ಮಾಡಲಾಗುತ್ತದೆ. ಅದು ನನಗೆ ಬೇಸರ ಮೂಡಿಸುತ್ತವೆ. ಏಕೆಂದರೆ ಅದು ಕೇವಲ ಸಿನಿಮಾ ಮಾತ್ರವಲ್ಲ, ನಮ್ಮ ನಂಬಿಕೆ ಸಹ' ಎಂದಿದ್ದಾರೆ ರಿಷಬ್ ಶೆಟ್ಟಿ. 'ನಾವು ಸಿನಿಮಾ ಮಾಡಬೇಕಾದರೂ ಸಹ ಹಿರಿಯರನ್ನು, ದೈವದ ಬಗ್ಗೆ ಜ್ಞಾನಿಗಳನ್ನು ಆಹ್ವಾನಿಸಿದ್ದಾರೆ.

# ಪರಭಾಷೆ ಸಿನಿಮಾಗಳಲ್ಲಿ ನಟಿಸುತ್ತಿಲ್ಲವೇಕೆ?

ಕಿಚ್ಚ ಸುದೀಪ್ ಅವರು ಕರ್ನಾಟಕದ ಮೊದಲ ಪ್ಯಾನ್ ಇಂಡಿಯಾ ನಟ. ಹಲವು ವರ್ಷಗಳ ಹಿಂದೆಯೇ ಸುದೀಪ್ ಅವರು ಕನ್ನಡದ ಜೊತೆಗೆ ಹಿಂದಿ, ತೆಲುಗು, ತಮಿಳು ಸಿನಿಮಾಗಳಲ್ಲಿ ನಟಿಸಿದ್ದರು. ಅದೂ ಸಣ್ಣ ಪುಟ್ಟ ಪಾತ್ರಗಳಲ್ಲಿ ಅಲ್ಲ, ನಾಯಕನ ಪಾತ್ರದಲ್ಲಿಯೇ ನಟಿಸಿ ಗೆದ್ದು ಬಂದಿದ್ದರು. ಆದರೆ ಈಗ ಪರಭಾಷೆ ಸಿನಿಮಾಗಳಲ್ಲಿ ನಟಿಸುವ ಬಗ್ಗೆ ಅವರ ನಿರ್ಧಾರ ಬದಲಾಗಿದೆ.

ಕಿಚ್ಚ ಸುದೀಪ್ ಅವರು ಕರ್ನಾಟಕದ ಮೊದಲ ಪ್ಯಾನ್ ಇಂಡಿಯಾ ನಟ. ಹಲವು ವರ್ಷಗಳ ಹಿಂದೆಯೇ ಸುದೀಪ್ ಅವರು ಕನ್ನಡದ ಜೊತೆಗೆ ಹಿಂದಿ, ತೆಲುಗು, ತಮಿಳು ಸಿನಿಮಾಗಳಲ್ಲಿ ನಟಿಸಿದ್ದರು. ಅದೂ ಸಣ್ಣ ಪುಟ್ಟ ಪಾತ್ರಗಳಲ್ಲಿ ಅಲ್ಲ, ನಾಯಕನ ಪಾತ್ರದಲ್ಲಿಯೇ ನಟಿಸಿ ಗೆದ್ದು ಬಂದಿದ್ದರು. ಅವರ ನಟನೆಯ 'ರಣ್', 'ಈಗ' ಸಿನಿಮಾಗಳು ಕಲ್ಟ್ ಸಿನಿಮಾಗಳೆನಿಸಿಕೊಂಡಿವೆ. ರಾಜಮೌಳಿ, ಅಮಿತಾಬ್ ಬಚ್ಚನ್ ಅಂಥಹವರೇ ಸುದೀಪ್ ನಟನೆಯನ್ನು ಮೆಚ್ಚಿಕೊಂಡಾಡಿದ್ದಾರೆ.


ಈಗಲೂ ಸಹ ಸುದೀಪ್ ಅವರಿಗೆ ಪರ ಭಾಷೆಗಳ ಆಫರ್‌ಗಳು ಬರುತ್ತಲೇ ಇರುತ್ತವೆ. ಆದರೆ ಪರಭಾಷೆ ಸಿನಿಮಾಗಳಲ್ಲಿ ನಟಿಸುವ ಬಗ್ಗೆ ತಮ್ಮದೇ ಒಂದು ನಿಯಮ ಹಾಕಿಕೊಂಡಿದ್ದಾರೆ ಸುದೀಪ್. ಒಂದು ರಾಜ್ಯದ ನಟರು ಮತ್ತೊಂದು ರಾಜ್ಯದ ಸ್ಟಾರ್ ನಟರ ಸಿನಿಮಾಗಳಲ್ಲಿ ಅತಿಥಿ ಪಾತ್ರಗಳಲ್ಲಿ ನಟಿಸುವುದು ಇತ್ತೀಚೆಗಿನ ಪ್ಯಾನ್ ಇಂಡಿಯಾ ಸಂಸ್ಕೃತಿಯಲ್ಲಿ ಸಾಮಾನ್ಯ ಆಗಿಬಿಟ್ಟಿದೆ.

ಕನ್ನಡದ ಕೆಲವಾರು ನಟರು ಈಗಾಗಲೇ ಪರ ಭಾಷೆಯಲ್ಲಿ ಅತಿಥಿ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಆದರೆ ಬಹಳ ವರ್ಷಗಳಿಂದಲೂ ಕನ್ನಡದ ಜೊತೆಗೆ ಪರಭಾಷೆಯಲ್ಲಿ ನಟಿಸುತ್ತಾ ಬಂದಿರುವ ಸುದೀಪ್ ಅವರು ಇತ್ತೀಚೆಗೆ ಪರ ಭಾಷೆ ಸಿನಿಮಾಗಳಲ್ಲಿ ಹೆಚ್ಚಾಗಿ ನಟಿಸುತ್ತಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ಸ್ವತಃ ಸುದೀಪ್ ವಿವರಿಸಿದ್ದಾರೆ.



# ಸತತ 24 ಗಂಟೆ ಪ್ರದರ್ಶನ ಕಂಡ 'ಧುರಂಧರ್'

ಎಲ್ಲಾ ಕಡೆಗಳಲ್ಲೂ 'ಧುರಂಧರ್' ಸಿನಿಮಾದ ಬಗ್ಗೆಯೇ ಚರ್ಚೆ ನಡೆಯುತ್ತಿದೆ. ಅಷ್ಟರಮಟ್ಟಿಗೆ ಕ್ರೇಜ್ ಸೃಷ್ಟಿ ಆಗಿದೆ. ವಿಶೇಷ ಏನೆಂದರೆ ಪುಣೆ, ಮುಂಬೈ ನಗರದ ಕೆಲವು ಕಡೆಗಳಲ್ಲಿ 24 ಗಂಟೆಯೂ ಈ ಸಿನಿಮಾದ ಪ್ರದರ್ಶನ ಆಗಿದೆ. ಪ್ರೇಕ್ಷಕರ ಬೇಡಿಕೆಗೆ ತಕ್ಕಂತೆ ಚಿತ್ರಮಂದಿರಗಳಲ್ಲಿ 'ಧುರಂಧರ್' ಸಿನಿಮಾದ ಶೋಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. 2025ರ ಅಂತ್ಯದಲ್ಲಿ ನಟ ರಣವೀರ್ ಸಿಂಗ್ ಅವರು ಭರ್ಜರಿ ಗೆಲುವು ಪಡೆದಿದ್ದಾರೆ. ಅವರು ನಟಿಸಿದ 'ಧುರಂಧರ್' ಸಿನಿಮಾ ಹಲವು ದಾಖಲೆಗಳನ್ನು ಬರೆಯುತ್ತಿದೆ. ನೈಜ ಘಟನೆ ಆಧಾರಿತ ಕಥೆ ಹೊಂದಿರುವ ಈ ಸಿನಿಮಾವನ್ನು ವೀಕ್ಷಕರು ಮುಗಿಬಿದ್ದು ವೀಕ್ಷಿಸುತ್ತಿದ್ದಾರೆ. ವಾರದ ದಿನಗಳಲ್ಲಿ ಹೌಸ್‌ಫುಲ್ ಪ್ರದರ್ಶನ ಕಂಡಿದ್ದು ಮಾತ್ರವಲ್ಲದೇ ವಾರಾಂತ್ಯದಲ್ಲಿ ಡಿಮ್ಯಾಂಡ್ ಹೆಚ್ಚಾಗಿದೆ. ಆ ಕಾರಣದಿಂದ ಕೆಲವು ನಗರಗಳಲ್ಲಿ 'ಧುರಂಧರ್' ಸಿನಿಮಾದ ಶೋ ಸಂಖ್ಯೆ ಹೆಚ್ಚಿಸಲಾಗಿದೆ. ಸತತ 24 ಗಂಟೆಗಳ ಕಾಲ ಪ್ರದರ್ಶನ ಮಾಡುವ ಮೂಲಕ ಅಭಿಮಾನಿಗಳ ಬೇಡಿಕೆಯನ್ನು ಪೂರೈಸಲಾಗಿದೆ.



'ಧುರಂಧರ್' ಸಿನಿಮಾದಲ್ಲಿ ದೇಶಭಕ್ತಿ ಕಹಾನಿ ಇದೆ. ಆದ್ದರಿಂದ ಜನರಿಗೆ ಈ ಚಿತ್ರ ಇಷ್ಟ ಆಗುತ್ತಿದೆ. ಆಕ್ಷನ್ ಬಯಸುವ ಪ್ರೇಕ್ಷಕರಿಗೂ ಈ ಚಿತ್ರದಲ್ಲಿ ಮನರಂಜನೆ ಸಿಗುತ್ತದೆ.

ಈ ಸಿನಿಮಾಗೆ ಜನರಿಂದ ಬಾಯಿ ಮಾತಿನ ಪ್ರಚಾರ ಚೆನ್ನಾಗಿ ಸಿಗುತ್ತಿದೆ. ಹಾಗಾಗಿ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರು ಸಿನಿಮಾ ನೋಡಲು ಚಿತ್ರಮಂದಿರಕ್ಕೆ ಬರುತ್ತಿದ್ದಾರೆ. ಕಲೆಕ್ಷನ್ ಹೆಚ್ಚಲು ಅದು ಮುಖ್ಯ ಕಾರಣವಾಗಿದೆ. ದೆಹಲಿ, ಪುಣೆಯ ಕೆಲವು ಚಿತ್ರಮಂದಿರಗಳಲ್ಲಿ 24 ಗಂಟೆಯೂ 'ಧುರಂಧರ್' ಸಿನಿಮಾವನ್ನು ಪ್ರದರ್ಶನ ಮಾಡಲಾಗಿದೆ. ಬೆಳಗ್ಗೆ 7 ಅಥವಾ 8 ಗಂಟೆಗೆ ಮೊದಲ ಪ್ರದರ್ಶನ ಆರಂಭ ಆಗಿದೆ. ಬಳಿಕ ದಿನವಿಡೀ ಪ್ರದರ್ಶನ ನಡೆದಿದೆ. ಮರುದಿನ 4.10ರ ತನಕ ಹೊಸ ಶೋ ಆರಂಭ ಆಗುತ್ತಲೇ ಇದ್ದವು. ಆ ಶೋ ಮುಗಿಯಲು ಮತ್ತೆ ಬೆಳಗಿನ ಜಾವ 8 ಗಂಟೆ ಆಗಿದೆ.

ನೈಜ ಘಟನೆ ಆಧಾರಿತ ಕಥೆ


# ಶಾರುಕ್ ಖಾನ್ ಎಂದ್ರೆ ದುಬೈನಲ್ಲಿ ಬಲು ಕ್ರೇಜ್

ದುಬೈನ ಶೇಖ್ ಜಾಯೇದ್ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಶಾರುಖ್ಸ್ ಟವರ್ 5,000 ಕೋಟಿ ರೂಗೆ ಮಾರಾಟವಾಗಿದೆ. 3,500 ಕೋಟಿ ರೂ ವೆಚ್ಚದಲ್ಲಿ ಬಾಲಿವುಡ್ ನಟ ಶಾರುಖ್ ಖಾನ್ ಹೆಸರಿನ ಈ 55 ಮಹಡಿಯ ಕಮರ್ಷಿಯಲ್ ಟವರ್‌ಗೆ ನಿರೀಕ್ಷೆಮೀರದ ಬೆಲೆ ಸಿಕ್ಕಿದೆ. ಮುಂಬೈ ಸಂಜಾತ ರಿಜ್ವಾಲ್ ಸಾಜನ್ ಮಾಲೀಕರಾಗಿರುವ ಡ್ಯಾನೂಬ್ ಗ್ರೂಪ್ ಈ ಕಮರ್ಷಿಯಲ್ ಟವರ್ ಕಟ್ಟುತ್ತಿದೆ.

ಸದ್ಯ ವಿಶ್ವದಲ್ಲಿ ಅತಿಹೆಚ್ಚು ಜನಪ್ರಿಯವಾಗಿರುವ ಭಾರತೀಯ ನಟ ಯಾರೆಂದರೆ ಅದು ಶಾರುಕ್ ಖಾನ್. ಬಾಲಿವುಡ್ ಬಾದ್‌ಶಾ ಶಾರುಖ್ ಖಾನ್ ಎಂದರೆ ಭಾರತದಲ್ಲಿ ಮಾತ್ರವಲ್ಲ, ಅನೇಕ ದೇಶಗಳಲ್ಲಿ ಕ್ರೇಜ್ ಇದೆ. ಯುಎಇ ದೇಶದ ದುಬೈನಲ್ಲಿ ಶಾರುಖ್ ಖಾನ್ ಹೆಸರಿನ ಕಮರ್ಷಿಯಲ್ ಟವರ್‌ನಲ್ಲಿರುವ ಎಲ್ಲಾ ಆಫೀಸ್ ಸ್ಪೇಸ್‌ಗಳೂ ಮಾರಾಟವಾಗಿವೆ.

ನಿರ್ಮಾಣ ಪೂರ್ಣಗೊಳ್ಳುವ ಮುನ್ನವೇ 5,000 ಕೋಟಿ ರೂಗಳಿಗೂ ಅಧಿಕ ಮೊತ್ತಕ್ಕೆ ಮಾರಾಟವಾಗಿರುವುದು ತಿಳಿದುಬಂದಿದೆ.

ಭಾರತ ಮೂಲದವರೇ ಆದ ರಿಜ್ವಾನ್ ಸಾಜನ್ ಮಾಲಕತ್ವದ ಡ್ಯಾನೂಬ್ ಗ್ರೂಪ್ ಈ ಕಮರ್ಷಿಯಲ್ ಟವರ್ ಅನ್ನು 3,500 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸುತ್ತಿದೆ. ಈ ಟವರ್‌ನ ಆಫೀಸ್ ಸ್ಪೇಸ್‌ಗಳಿಗೆ ಬಲು ಡಿಮ್ಯಾಂಡ್ ಸೃಷ್ಟಿಯಾಗಿದ್ದು, 2.1 ಬಿಲಿಯನ್ ದಿನಾರ್‌ಗಳಿಗೆ (ಸುಮಾರು 5,000 ಕೋಟಿ ರೂ) ಇವು ಮಾರಾಟವಾಗಿವೆ. ಡ್ಯಾನೂಬ್ ಗ್ರೂಪ್ ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಿನ ಮೊತ್ತಕ್ಕೆ ಮಾರಾಟವಾಗಿರುವುದು ಗಮನಾರ್ಹ.



# ಗುರು ರಾಯರ ನೆನೆದು ನಟ ಜಗ್ಗೇಶ್ ಭಾವುಕ



ನಟ ಜಗ್ಗೇಶ್ ಅವರಿಗೆ ರಾಘವೇಂದ್ರ ಸ್ವಾಮಿಗಳ ಬಗ್ಗೆ ಅಪಾರ ಭಕ್ತಿ ಇದೆ. ಆ ಕುರಿತು ಅವರು ಅನೇಕ ಬಾರಿ ಹೇಳಿಕೊಂಡಿದ್ದಾರೆ. ಈಗ ರಾಯರ ಕುರಿತಾಗಿ ಹೊಸದೊಂದು ಹಾಡು ಸಿದ್ಧವಾಗುತ್ತಿದ್ದು, ಅದರ ಸುದ್ದಿಗೋಷ್ಠಿಯಲ್ಲಿ ಜಗ್ಗೇಶ್ ಭಾಗಿ ಆಗಿದ್ದರು. ಇತ್ತೀಚೆಗೆ ಸುದ್ದಿಗೋಷ್ಠಿ ನಡೆಯಿತು. ಇಲ್ಲಿದೆ ಹೆಚ್ಚಿನ ಮಾಹಿತಿ.. ಮಂತ್ರಾಲಯ ಗುರು ಶ್ರೀರಾಘವೇಂದ್ರ ಸ್ವಾಮಿಗಳಿಗೆ ಕೋಟ್ಯಾಂತರ ಭಕ್ತರಿದ್ದಾರೆ.

ಈಗಾಗಲೇ ರಾಯರ ಕುರಿತು ಅನೇಕ ಭಕ್ತಿಗೀತೆಗಳು ಬಂದಿದೆ. ಈಗ ಹೊಸದೊಂದು ಭಕ್ತಿಗೀತೆ ರಚನೆಗೆ ತಯಾರಿ ನಡೆದಿದೆ. 'ರಾಯರ ದರ್ಶನ' ಆಲ್ಬಂ ಮೂಲಕ ಈ ಗೀತೆ ಬರಲಿದೆ. 'ಲಕ್ಷ್ಮೀ ಗಣೇಶ ಪ್ರೊಡಕ್ಷನ್ಸ್' ಮತ್ತು 'ದಿ ನ್ಯೂ ಇಂಡಿಯನ್ ಟೈಮ್ಸ್' ಅಡಿಯಲ್ಲಿ ಸುಗುಣ ರಘು ಈ ಅಲ್ಬಂ ನಿರ್ಮಾಣ ಮಾಡುತ್ತಿದ್ದಾರೆ. ರಘು ಭಟ್ ಅವರು ಇದರ ಉಸ್ತುವಾರಿ ವಹಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಲು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಂತ್ರಾಲಯದ ಮಾಧ್ಯಮ ಪ್ರತಿನಿಧಿ ಶ್ರೀನಿಧಿ ಕರಣಂ, ರಘು ಭಟ್, ಸುಗುಣ ರಘು, ಗೀತರಚನೆಕಾರ ನಾಗಾರ್ಜುನ ಶರ್ಮಾ ಹಾಗೂ ನಟ ಜಗ್ಗೇಶ್ ಪಾಲ್ಗೊಂಡಿದ್ದರು. ಸುದ್ದಿಗೋಷ್ಠಿಯಲ್ಲಿ ರಘು ಭಟ್ ಮಾತನಾಡಿದರು. 'ರಾಯರ ದರ್ಶನ ಆಲ್ಬಂ ಸಾಂಗ್ ನಿರ್ಮಾಣ ಆಗುತ್ತಿದೆ. ಈವರೆಗೂ ಯಾರು ಹೇಳಿರದ ಹಾಗೂ ನೋಡಿರದ ರಾಯರ ಕುರಿತಾದ ಕೆಲವು ವಿಷಯ ಈ ಆಲ್ಬಂ ಹಾಡಿನಲ್ಲಿ ಇರಲಿದೆ. ಡಿಸೆಂಬರ್ 23ರಿಂದ 7 ದಿನಗಳ ಕಾಲ ಮಂತ್ರಾಲಯದಲ್ಲಿ ಚಿತ್ರೀಕರಣಕ್ಕಾಗಿ ಶ್ರೀಗಳು ಸಮಯ ನೀಡಿದ್ದಾರೆ. ರಾಯರ ಭಕ್ತರಾದ ಅನೇಕ ಸೆಲೆಬ್ರಿಟಿಗಳು ಈ ಆಲ್ಬಂ ಹಾಡಿನಲ್ಲಿ ಅಭಿನಯಿಸಲಿದ್ದಾರೆ. ಹೆಸರಾಂತ ಸಂಗೀತ ನಿರ್ದೇಶಕರಾದ ಸಿ.ಆರ್. ಬಾಬಿ ಮತ್ತು ಅಜನೀಶ್ ಲೋಕನಾಥ್ ಅವರು ಸಂಗೀತ ಸಂಯೋಜಿಸಲಿದ್ದಾರೆ' ಎಂದು ಹೇಳಿದರು.

# ಧರ್ಮಶಾಲಾದಲ್ಲಿ ಭಾರತಕ್ಕೆ ಸುಲಭ ತುತ್ತಾದ ದಕ್ಷಿಣ ಆಫ್ರಿಕಾ!

## ಸರಣಿಯಲ್ಲಿ 2-1ರಲ್ಲಿ ಟೀಮ್ ಇಂಡಿಯಾ ಮುನ್ನಡೆ



ಧರ್ಮಶಾಲಾದ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆದ 5 ಪಂದ್ಯಗಳ ಟಿ20 ಸರಣಿಯ 3ನೇ ಪಂದ್ಯದಲ್ಲಿ ಭಾರತ ತಂಡ ದಕ್ಷಿಣ ಆಫ್ರಿಕಾ 7 ವಿಕೆಟ್‌ಗಳ ಸುಲಭ ಜಯ ಸಾಧಿಸಿ ಸರಣಿಯನ್ನ ಮುನ್ನಡೆ ಸಾಧಿಸಿದೆ. ಬ್ಯಾಟಿಂಗ್ ಸ್ವರ್ಗವಾಗಿರುವ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡ 20 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಕೇವಲ 117 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. ಇದು ಈ ಮೈದಾನದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ತಂಡದಗಳಲ್ಲೇ ಅತ್ಯಂತ ಕಡಿಮೆ ಮೊತ್ತವಾಗಿದೆ. 118 ರನ್‌ಗಳ ಗುರಿಯನ್ನ ಭಾರತ ಕೇವಲ 15.5 ಓವರ್ ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

**ಅಭಿಷೇಕ್ ಶರ್ಮಾ ಅಬ್ಬರ**

118 ರನ್‌ಗಳ ಗುರಿಯನ್ನ ಬೆನ್ನಟ್ಟಿದ ಟೀಮ್ ಇಂಡಿಯಾಗೆ ಅಭಿಷೇಕ್ ಶರ್ಮಾ ಹಾಗೂ ಶುಭ್



ಟೀಂ ಇಂಡಿಯಾ ಭರ್ಜರಿ ಗೆಲುವು

ಮನ್ ಗಿಲ್ ಭರ್ಜರಿ ಆರಂಭ ನೀಡಿದರು. ಈ ಜೋಡಿ ಪವರ್ ಪ್ಲೇನ 5.2 ಓವರ್‌ಗಳಲ್ಲಿ 60 ರನ್ ಕಲೆಯಾಕಿದರು. ಮೊದಲೆರಡು ಪಂದ್ಯಗಳಲ್ಲಿ ವಿಫಲರಾಗಿದ್ದ ವಿಶ್ವದ ನಂಬರ್ 1 ಬ್ಯಾಟರ್ ಅಭಿಷೇಕ್ ಶರ್ಮಾ ಕೇವಲ 18 ಎಸೆತಗಳಲ್ಲಿ ತಲಾ 3 ಬೌಂಡರಿ, 3 ಸಿಕ್ಸರ್‌ಗಳ ಸಹಿತ 35 ರನ್‌ಗಳಿಸಿ ಔಟ್ ಆದರು.

ಫಾರ್ಮ್ ಸಮಸ್ಯೆ ಎದುರಿಸುತ್ತಿರುವ ಉಪನಾಯಕ ಶುಭ್ಮನ್ ಗಿಲ್ 28 ಎಸೆತಗಳಲ್ಲಿ ಎಸೆತಗಳಲ್ಲಿ 5 ಬೌಂಡರಿಗಳ ಸಹಿತ 28 ರನ್‌ಗಳಿಸಿ ಔಟ್ ಆದರು. ನಂತರ ಬಂದ ನಾಯಕ ಸೂರ್ಯಕುಮಾರ್ ಯಾದವ್ 11 ಎಸೆತಗಳಲ್ಲಿ 2 ಬೌಂಡರಿ ಸಹಿತ 12 ರನ್‌ಗಳಿಸಿ ಮತ್ತೊಮ್ಮೆ ವಿಫಲರಾದರು. ತಿಲಕ್ ವರ್ಮಾ ಎಸೆತಗಳಲ್ಲಿ ಬೌಂಡರಿಗಳ ಸಹಿತ ಅಜೇಯ ರನ್ನಳಿಸಿ ತಂಡವನ್ನ ಗೆಲುವಿನ ಗಡಿ ದಾಟಿಸಿದರು. ದಕ್ಷಿಣ ಆಫ್ರಿಕಾ ಪರ ಕಾರ್ಬಿನ್ ಬಾಷ್, ಮಾರ್ಕೊ ಜಾನ್ಸನ್ ಹಾಗೂ ಲುಂಗು ಎನ್‌ಗಿಡಿ ತಲಾ 1 ವಿಕೆಟ್ ಪಡೆದರು. ಭಾರತ ತಂಡ ಈ ಗೆಲುವಿನೊಂದಿಗೆ 5 ಪಂದ್ಯಗಳ ಟಿ20 ಸರಣಿಯಲ್ಲಿ 2-1ರಲ್ಲಿ ಮುನ್ನಡೆ ಸಾಧಿಸಿತು. ಇದಕ್ಕೂ ಮುನ್ನ ಟಾಸ್ ಸೋತು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡ ಸಂಪೂರ್ಣ ಬ್ಯಾಟಿಂಗ್ ವೈಫಲ್ಯ ಅನುಭವಿಸಿ ಕೇವಲ 117ಕ್ಕೆ ಆಲೌಟ್ ಆಯಿತು. ಆರಂಭಿಕರಾದ ರೀಜಾ ಹೆಂಡ್ರಿಕ್ಸ್ (0) ಹಾಗೂ ಕಳೆದ ಪಂದ್ಯದ ಹೀರೋ ಕ್ವಿಂಟನ್ ಡಿಕಾಕ್ 1 ರನ್ ಹಾಗೂ ಸ್ಫೋಟಕ ಬ್ಯಾಟರ್ ಡೆವಾಲ್ಡ್ ಬ್ರೆವಿಸ್ (2) ಕೇವಲ 7 ರನ್‌ಗಳಿಸುವಷ್ಟರಲ್ಲಿ ಔಟ್ ಆದರು.

# ಜೈಸ್ವಾಲ್ ಸ್ಫೋಟಕ ಸೆಂಚುರಿ

ಸೈಯ್ಯದ್ ಮುಷ್ತಾಕ್ ಅಲಿ ಟೂರ್ನಿಯ ಸೂಪರ್ ಲೀಗ್ ಪಂದ್ಯದಲ್ಲಿ ಮುಂಬೈ ತಂಡ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನ ರೂವಾರಿ ಯುವ ಎಡಗೈ ದಾಂಡಿಗ ಯಶಸ್ವಿ ಜೈಸ್ವಾಲ್. ಪುಣೆಯ ಡಿವೈ ಪಾಟೀಲ್ ಅಕಾಡೆಮಿ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ತಂಡದ ನಾಯಕ ಶಾರ್ದೂಲ್ ಠಾಕೂರ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಹರ್ಯಾಣ ಪರ ನಾಯಕ ಅಂಕಿತ್ ಕುಮಾರ್ 42 ಎಸೆತಗಳಲ್ಲಿ 89 ರನ್ ಬಾರಿಸಿದರು. ಇನ್ನು ನಿಶಾಂತ್ ಸಿಂಧು ಅಜೇಯ 63 ರನ್ ಸಿಡಿಸಿದರು.



ಈ ಮೂಲಕ ಹರ್ಯಾಣ ತಂಡವು 20 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 234 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಮುಂಬೈ ತಂಡಕ್ಕೆ ಯಶಸ್ವಿ ಜೈಸ್ವಾಲ್ ಸ್ಫೋಟಕ ಆರಂಭ ಒದಗಿಸಿದ್ದರು. ಕೇವಲ 23 ಎಸೆತಗಳಲ್ಲಿ ಶತಕ ಪೂರೈಸಿ ಹರ್ಯಾಣ ಬೌಲರ್‌ಗಳ ಬೆಂಡೆತ್ತಿದರು. ಮತ್ತೊಂದೆಡೆ ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸರ್ಫರಾಝ್ ಖಾನ್ ಕೇವಲ 25 ಎಸೆತಗಳಲ್ಲಿ 3 ಸಿಕ್ಸ್ ಹಾಗೂ 9 ಫೋರ್‌ಗಳೊಂದಿಗೆ 64 ರನ್ ಚಚ್ಚಿದ್ದರು. ಪರಿಣಾಮ 15 ಓವರ್‌ಗಳ ಮುಕ್ತಾಯದ ವೇಳೆಗೆ ಮುಂಬೈ ತಂಡದ ಸ್ಕೋರ್ 200 ರನ್‌ಗಳ ಗಡಿದಾಟಿತು.

ಇದರ ಬೆನ್ನಲ್ಲೇ ಯಶಸ್ವಿ ಜೈಸ್ವಾಲ್ ಕೇವಲ 48 ಎಸೆತಗಳಲ್ಲಿ ಶತಕವನ್ನೂ ಸಹ ಪೂರೈಸಿದರು. ಸೆಂಚುರಿ ಬಳಿಕ ಎರಡು ಎಸೆತಗಳನ್ನು ಮಾತ್ರ ಎದುರಿಸಿದ ಜೈಸ್ವಾಲ್ 50 ಬಾಲ್‌ಗಳಲ್ಲಿ 1 ಸಿಕ್ಸ್ ಹಾಗೂ 16 ಫೋರ್‌ಗಳೊಂದಿಗೆ 101 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಅಂತಿಮವಾಗಿ ಮುಂಬೈ ತಂಡವು 17.3 ಓವರ್‌ಗಳಲ್ಲಿ 238 ರನ್ ಬಾರಿಸಿ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ವಿಶೇಷ ಎಂದರೆ ಇದು ಸೈಯ್ಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯ 2ನೇ ಗರಿಷ್ಠ ಸ್ಕೋರ್ ಚೇಸಿಂಗ್ ಆಗಿದೆ. ಜಾರ್ಖಂಡ್ ತಂಡವು 236 ರನ್‌ಗಳನ್ನು ಚೇಸ್ ಮಾಡಿ ಗೆದ್ದಿರುವುದು ಶ್ರೇಷ್ಠ ದಾಖಲೆ. ಇದೀಗ 235 ರನ್‌ಗಳನ್ನು ಬೆನ್ನತ್ತಿ ಗೆದ್ದು ಮುಂಬೈ ಈ ಪಟ್ಟಿಯಲ್ಲಿ ದ್ವಿತೀಯ ಸ್ಥಾನವನ್ನು ಅಲಂಕರಿಸಿದೆ.



ಮುಂಬೈ ದಾಖಲೆಯ ರನ್ ಚೇಸ್

# ಭಾರತದ ಬೌಲಿಂಗ್‌ಗೆ ತತ್ತರಿಸಿದ ಪಾಕ್

ದುಬೈನಲ್ಲಿ ನಡೆಯುತ್ತಿರುವ ಅಂಡರ್-19 ಏಷ್ಯಾಕಪ್‌ನ ಐದನೇ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಭಾರತೀಯ ಅಭಿಮಾನಿಗಳು ನಿರೀಕ್ಷಿಸಿದ ಫಲಿತಾಂಶವೇ ಹೊರಬಿದ್ದಿದ್ದು, ಯುವ ಟೀಂ ಇಂಡಿಯಾ, ಪಾಕಿಸ್ತಾನ ತಂಡವನ್ನು ಬರೋಬ್ಬರಿ 90 ರನ್‌ಗಳಿಂದ ಸೋಲಿಸಿ ಈ ಟೂರ್ನಿಯಲ್ಲಿ ತನ್ನ ಸತತ ಎರಡನೇ ಗೆಲುವನ್ನು ದಾಖಲಿಸಿತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಯುವ ಭಾರತ ತಂಡ 240 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ಪಾಕಿಸ್ತಾನ ಭಾರತದ ಬೌಲಿಂಗ್ ದಾಳಿಗೆ ನಲುಗಿ ಕೇವಲ 150 ರನ್‌ಗಳಿಗೆ ಆಲೌಟ್ ಆಯಿತು.



ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಾಲ್ಕನೇ ಓವರ್‌ನಲ್ಲಿ ತನ್ನ ಅತಿದೊಡ್ಡ ವಿಕೆಟ್ ಕಳೆದುಕೊಂಡಿತು. ಆರಂಭಿಕ ವೈಭವ್ ಸೂರ್ಯವಂಶಿ ಕೇವಲ 1 ಬೌಂಡರಿ ಬಾರಿಸಿ ಔಟಾದರು. ಇದಾದ ನಂತರ, ಆರನ್ ಜಾರ್ಜ್, ನಾಯಕ ಆಯುಷ್ ಮ್ಹಾತ್ರೆ ಜೊತೆಗೂಡಿ, ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ನೀಡುವ ಮೂಲಕ ಪಾಕಿಸ್ತಾನದ ಮೇಲೆ ಒತ್ತಡ ಹೇರಿದರು. ಆದಾಗ್ಯೂ, ನಾಯಕ ಆಯುಷ್ ಮ್ಹಾತ್ರೆ ಮೂರು ಸಿಕ್ಸರ್‌ಗಳು ಮತ್ತು ನಾಲ್ಕು ಬೌಂಡರಿಗಳನ್ನು ಬಾರಿಸಿ 38 ರನ್‌ಗಳಿಗೆ ಔಟಾದರು. ನಂತರ ಬಂದ ವಿಹಾನ್ ಮಲ್ಹೋತ್ರಾ ಕೂಡ 12 ರನ್‌ಗಳಿಗೆ ಮತ್ತು ವೇದಾಂತ್ ತಿವಾರಿ ಕೇವಲ 7 ರನ್‌ಗಳಿಗೆ ಔಟಾದರು. ಆದಾಗ್ಯೂ, ಒಂದು ತುದಿಯಲ್ಲಿ ತಂಡದ ಇನ್ನಿಂಗ್ಸ್ ಕಟ್ಟುವ ಕೆಲಸ ಮಾಡಿದ ಆರನ್ ಜಾರ್ಜ್ ಅದ್ಭುತ ಅರ್ಧಶತಕ ಬಾರಿಸಿದರು. ಜಾರ್ಜ್‌ಗೆ ಉತ್ತಮ ಸಾಥ್ ನೀಡಿದ ಆಲ್‌ರೌಂಡರ್ ಕನಿಷ್ಕ್ ಚೌಹಾಣ್ ಕೂಡ 46 ಎಸೆತಗಳಲ್ಲಿ 46 ರನ್ ಗಳಿಸಿ ಉತ್ತಮ ಇನ್ನಿಂಗ್ಸ್ ಆಡಿದರು.

# ಆರ್‌ಸಿಬಿ ಅಭಿಮಾನಿಗಳಿಗೆ ಸಿಕ್ತು ಗುಡ್ ನ್ಯೂಸ್

ಇಂಡಿಯನ್ ಪ್ರೀಮಿಯರ್ ಲೀಗ್‌ನ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪಂದ್ಯಗಳನ್ನು ಆಯೋಜಿಸಲು ಅವಕಾಶ ನೀಡಬೇಕೆಂದು ಕೆಎಸ್‌ಸಿಎ ನೂತನ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಇತ್ತೀಗಷ್ಟೇ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದರು. ಈ ಮನವಿಯನ್ನು ಪುರಸ್ಕರಿಸಿರುವ ಸರ್ಕಾರ, ಬೆಂಗಳೂರಿನಲ್ಲಿ ಪಂದ್ಯವನ್ನು ಆಯೋಜಿಸಲು ಗ್ರೀನ್ ಸಿಗ್ನಲ್ ನೀಡಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ಆರಂಭಕ್ಕೆ ಇನ್ನೂ ತಿಂಗಳುಗಳು ಮಾತ್ರ ಬಾಕಿಯಿವೆ. ಅದಕ್ಕೂ ಮುನ್ನ ಚಿನ್ನಸ್ವಾಮಿ ಸ್ಟೇಡಿಯಂ ಮೇಲಿನ ನಿಷೇಧವನ್ನು ತೆರವುಗೊಳಿಸುವಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಮಂಡಳಿ ಯಶಸ್ವಿಯಾಗಿದೆ. ಇದರೊಂದಿಗೆ ಆರ್‌ಸಿಬಿ ಪಂದ್ಯಗಳು ಬೆಂಗಳೂರಿನಲ್ಲೇ ನಡೆಯಲಿರುವುದು ಕೂಡ ಖಚಿತವಾಗಿದೆ.

ಆರ್‌ಸಿಬಿ ಮೂಲಗಳ ಮಾಹಿತಿ ಪ್ರಕಾರ, ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಪಂದ್ಯವಾಡಲು ಗ್ರೀನ್ ಸಿಗ್ನಲ್ ಸಿಕ್ಕಿದೆ. ಹೀಗಾಗಿ ಶೀಘ್ರದಲ್ಲೇ ಬೆಂಗಳೂರು ಮೈದಾನದಲ್ಲಿ ಸ್ಪರ್ಧಾತ್ಮಕ ಕ್ರಿಕೆಟ್ ಮರಳಲಿದೆ. ಅಲ್ಲದೆ ಮಾರ್ಚ್‌ನಿಂದ ಶುರುವಾಗಲಿರುವ ಐಪಿಎಲ್ ಪಂದ್ಯಗಳು ಕೂಡ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿದೆ ಎಂದು ತಿಳಿಸಿದ್ದಾರೆ. ಜೂನ್ 4 ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಐಪಿಎಲ್ ವಿಜಯೋತ್ಸವದ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತದಿಂದಾಗಿ 11 ಮಂದಿ ಸಾವನ್ನಪ್ಪಿದ್ದರು. ಅಲ್ಲದೆ ಹಲವಾರು ಮಂದಿ ಗಾಯಗೊಂಡಿದ್ದರು. ಈ ಅಹಿತಕರ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರ, ನ್ಯಾಯಾಂಗ ತನಿಖೆಗೆ ಆದೇಶಿಸಿತ್ತು. ಈ ತನಿಖೆ ವೇಳೆ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿನ ಲೋಪದೋಷಗಳು ಬಹಿರಂಗವಾಗಿದ್ದವು. ಅಲ್ಲದೆ ಕ್ರೀಡಾಂಗಣದ ಭದ್ರತೆ ಮತ್ತು ಸುರಕ್ಷತೆಯ ಬಗ್ಗೆ ಪ್ರಶ್ನೆಗಳೆದ್ದಿದ್ದವು. ಈ ದುರಂತದ ಬಳಿಕ ಬಿಸಿಸಿಐ ಬೆಂಗಳೂರಿನಲ್ಲಿ ಯಾವುದೇ ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಯೋಜಿಸಿರಲಿಲ್ಲ. ಅಲ್ಲದೆ ಜಾನ್ ಮೈಕಲ್ ಡಿ ಕುನ್ಹಾ ನೇತೃತ್ವದ ಆಯೋಗವು ಚಿನ್ನಸ್ವಾಮಿ ಸ್ಟೇಡಿಯಂ ಪಂದ್ಯಗಳ ಆಯೋಜನೆಗೆ ಕೆಲ ಸಲಹೆಗಳನ್ನು ಶಿಫಾರಸ್ಸು ಮಾಡಿದ್ದರು.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966